• www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಐಟಿ ಕ್ಷೇತ್ರದಲ್ಲಿ ಕೋಡಿಂಗ್ ಕಲಿಕೆ ಅಗತ್ಯವೇ?

ಅನುಭವ ಮಂಟಪ
ಮೀಸಲು: ಮಹಿಳೆಗೂ ಬೇಕಿದೆ ಸಮಪಾಲು

ಅಂಗನವಾಡಿ: 3 ತಿಂಗಳ ಗೌರವ ಧನ ಬಾಕಿ 5
ಓಲಾಗೆ ಸಿಸಿಪಿಎ ಚಾಟಿ 8
ಯಲ್ಲಮ್ಮನಗುಡ್ಡ ಅಭಿವೃದ್ಧಿಗೆ ಸಿ.ಎಂ ಮುನ್ನುಡಿ 5
ವಾಂಗ್ಚುಕ್ ಮತ್ತೊಮ್ಮೆ ಪೊಲೀಸ್ ವಶಕ್ಕೆ 9

ಗಣಿ ಜಮೀನು ಹಸ್ತಾಂತರ ವಿಳಂಬ: ಕೇಂದ್ರ– ರಾಜ್ಯ ನಡುವೆ ಸಂಘರ್ಷ ತೀವ್ರ

ಕೆಐಒಸಿಎಲ್: 300 ಕಾರ್ಮಿಕರ ವಜಾ?

• ರಾಜೇಶ್ ರೈ ಚಟ್ಲ

ಬೆಂಗಳೂರು: ಗಣಿಗಾರಿಕೆಗೆ ಜಮೀನು ಹಸ್ತಾಂತರ ವಿಚಾರದಲ್ಲಿ ಕೇಂದ್ರ-ರಾಜ್ಯ ಸರ್ಕಾರದ ನಡುವೆ ಸಂಘರ್ಷ ಮುಂದುವರಿದಿರುವ ಪರಿಣಾಮ, ಅದಿರು ಲಭ್ಯವಾಗದೆ 'ಕುದುರೆಮುಖ ಕಬ್ಬಿಣ ಅದಿರು ಕಂಪನಿ' (ಕೆಐಒಸಿಎಲ್) ತನ್ನ ಕಾರ್ಯಾಚರಣೆ ಸ್ಥಗಿತಗೊಳಿಸಿದೆ.

ಪರಿಣಾಮವಾಗಿ 30 ಎಂಜಿನಿಯರ್‌ಗಳು ಸೇರಿ ವಿವಿಧ ವೃಂದಗಳ 300ಕ್ಕೂ ಹೆಚ್ಚು ಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಕೆಐಒಸಿಎಲ್ ಕಂಪನಿಯು ಕಳೆದ ಆರು ತಿಂಗಳಿನಿಂದ ನಷ್ಟದ ಸುಳಿಗೆ ಸಿಲುಕಿದೆ. ಕೇಂದ್ರ ಸರ್ಕಾರದ ಮಾಲೀಕತ್ವದ ಈ ಕಂಪನಿಯ ಮಾನವ ಸಂಪನ್ಮೂಲ ವಿಭಾಗವು ಮಂಗಳೂರಿನ ಪಣಂಬೂರಿನಲ್ಲಿದೆ. 'ನವೆಂಬರ್ 1ರಿಂದ ನಿಮ್ಮನ್ನು ವಜಾಗೊಳಿಸಲಾಗುವುದು' ಎಂಬ ಒಕ್ಕಣೆಯುಳ್ಳ ನೋಟಿಸ್ ಅನ್ನು ಅಕ್ಟೋಬರ್ 1ರಂದು ಕಾರ್ಮಿಕರಿಗೆ ನೀಡಿದೆ. ಕಂಪನಿಯ ಸದ್ಯದ ಆರ್ಥಿಕ ಸ್ಥಿತಿ ಹಾಗೂ ದಿನದಿಂದ ದಿನಕ್ಕೆ ವಹಿವಾಟು ಕುಸಿತ ಆಗುತ್ತಿರುವುದನ್ನು ನೋಟಿಸ್‌ನಲ್ಲಿ ವಿವರಿಸಲಾಗಿದೆ.

'ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಬ್ಲಾಕಿನ ದೇವದಾರಿ ಗಣಿ ಪ್ರದೇಶದಲ್ಲಿ 401.57 ಹೆಕ್ಟೇರ್ ಅರಣ್ಯ ಜಮೀನಿನಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಕೆಐಒಸಿಎಲ್ ಅರಣ್ಯ ತೀರುವಳಿ ಪಡೆದಿದೆ. ಆದರೆ, ಅರಣ್ಯ ಇಲಾಖೆಯಿಂದ 'ಅರಣ್ಯ ತೀರುವಳಿ ಗುತ್ತಿಗೆ ಪತ್ರ'ವೂ ಸೇರಿದಂತೆ ಜಮೀನು ಹಸ್ತಾಂತರ ಬಾಕಿ ಇದೆ. ಕರ್ನಾಟಕ ಸರ್ಕಾರವು ಗಣಿಗಾರಿಕೆ ಪ್ರದೇಶದ ಹಸ್ತಾಂತರಕ್ಕೆ ಮಾಡುತ್ತಿರುವ ವಿಳಂಬ ಮತ್ತು ಸದ್ಯದ ಮಾರುಕಟ್ಟೆ ಪರಿಸ್ಥಿತಿಯ ಪರಿಣಾಮದಿಂದಾಗಿ ಕಂಪನಿಯು ಉತ್ಪಾದನಾ ಸಮಸ್ಯೆ ಎದುರಿಸುತ್ತಿದೆ. ಈ ಕಾರಣಕ್ಕೆ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುವ ಕಠಿಣ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಕೆಐಒಸಿಎಲ್ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪೆಲೆಟ್‌ಗಳನ್ನು (ಸಣ್ಣ ಗುಂಡುಗಳು) ಉತ್ಪಾದಿಸುವ ಪಣಂಬೂರಿನ ಕೆಐಒಸಿಎಲ್ ಘಟಕದಲ್ಲಿ ಸದ್ಯ 433 ಕಾಯಂ ಸಿಬ್ಬಂದಿ, 52 ಗುತ್ತಿಗೆ ಎಂಜಿನಿಯರ್‌ಗಳು, 400 ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ನುರಿತ ಕೆಲಸಗಾರರನ್ನು ನಷ್ಟದ ಕಾರಣಕ್ಕೆ ಕೆಐಒಸಿಎಲ್ ವಜಾಗೊಳಿಸುವ ಕುರಿತು ಕಂಪನಿಯ ಕಾರ್ಮಿಕರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ಸೆಪ್ಟೆಂಬರ್ 20ರಂದೇ ಮನವಿ ಸಲ್ಲಿಸಿದ್ದಾರೆ. ಈ ಮನವಿಯನ್ನು ಉಲ್ಲೇಖಿಸಿ ಮಂಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಿಗೆ ಪತ್ರ ಬರೆದಿರುವ ಜಿಲ್ಲಾಧಿಕಾರಿ, ಕೆಐಒಸಿಎಲ್‌ನಿಂದ ವರದಿ ಪಡೆಯುವಂತೆ ಅಕ್ಟೋಬರ್ 3ರಂದು ಸೂಚಿಸಿದ್ದಾರೆ. ಆದರೆ, ಕೆಐಒಸಿಎಲ್ ಇನ್ನೂ ವರದಿ ನೀಡಿಲ್ಲ ಎಂದು ಕಾರ್ಮಿಕ ಇಲಾಖೆ ಜಂಟಿ ನಿರ್ದೇಶಕ ಗೋಕುಲ್ ದಾಸ್ ನಾಯಕ್ ತಿಳಿಸಿದರು.

5ನೇ ಪುಟ ನೋಡಿ

ರಾಜ್ಯ ಸರ್ಕಾರ ಅಡ್ಡಗಾಲು– ಎಚ್‌ಡಿಕೆ

'ನಾನು ಕೇಂದ್ರ ಸಚಿವನಾದ ಬಳಿಕ ಕೆಐಒಸಿಎಲ್‌ಗೆ ದುಡಿಮೆಯ ಬಂಡವಾಳವಾಗಿ ₹1,700 ಕೋಟಿಯ ಕಡತಕ್ಕೆ ಸಹಿ ಹಾಕಿದ್ದೇನೆ. ಆರ್ಥಿಕ ಇಲಾಖೆಯಿಂದಲೂ ಈ ಕಡತ ವಿಲೇವಾರಿ ಆಗಿದೆ. ಆದರೆ, ಸಂಡೂರಿನ ದೇವದಾರಿ ಅರಣ್ಯದಲ್ಲಿ ಕಂಪನಿ ಅದಿರು ತೆಗೆಯುವ ಕೆಲಸ ಆರಂಭಿಸಲು ರಾಜ್ಯ ಸರ್ಕಾರ ಅಸಹಕಾರ ತೋರಿಸುತ್ತಿದೆ. ಈ ಪ್ರದೇಶದಲ್ಲಿ ಕಂಪನಿಗೆ ಗಣಿ ಮಂಜೂರು ಮಾಡಿ, ಅದನ್ನು ₹500 ಕೋಟಿ ಕಟ್ಟಿಸಿಕೊಂಡು ನೋಂದಣಿ ಮಾಡಿಕೊಟ್ಟಿದ್ದು, 2016ರಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ. ಗಣಿಗಾರಿಕೆ ಸ್ಥಳದಲ್ಲಿ ಗಿಡ ಬೆಳೆಸಲು ಅರಣ್ಯ ಇಲಾಖೆಗೆ ಕಂಪನಿ ಈಗಾಗಲೇ ₹190 ಕೋಟಿ ಪಾವತಿಸಿದೆ. ಆದರೆ, ಗಮನಕ್ಕೆ ತಾರದೆ ಅನುಮತಿ ನೀಡಬೇಡಿ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ' ಎಂದು ಎಚ್‌.ಡಿ. ಕುಮಾರಸ್ವಾಮಿ ದೂರಿದರು.

ಗಣಿಗಾರಿಕೆ ಪ್ರದೇಶದ ಹಸ್ತಾಂತರಕ್ಕೆ ರಾಜ್ಯ ಸರ್ಕಾರ ಅಡ್ಡಗಾಲು ಹಾಕಿದೆ. ಪರಿಣಾಮ, ಕಾರ್ಯಾಚರಣೆ ಇಲ್ಲದೆ ಕೆಐಒಸಿಎಲ್ ಪ್ರತಿ ತಿಂಗಳು ₹27 ಕೋಟಿ ನಷ್ಟ ಅನುಭವಿಸುತ್ತಿದೆ

ಎಚ್‌.ಡಿ. ಕುಮಾರಸ್ವಾಮಿ
ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ

ಪರಿಸರವನ್ನು ಉಳಿಸುವುದು ನಮ್ಮ ಕರ್ತವ್ಯ. 300 ಕಾರ್ಮಿಕರ ಹಿತ ಕಾಯುವುದು ಉದ್ದೇಶ ಆಗಿದ್ದರೆ ಕೇಂದ್ರದ ಉನ್ನತ ಅಧಿಕಾರ ಸಮಿತಿಯ ವರದಿಯನ್ನು ತಕ್ಷಣ ಪಾಲನೆ ಮಾಡಲಿ

ಈಶ್ವರ ಬಿ. ಖಂಡ್ರೆ
ರಾಜ್ಯ ಅರಣ್ಯ ಸಚಿವ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಿದ್ದೀಕಿ ಹತ್ಯೆ: ಬಿಷ್ಣೋಯ್ ಗ್ಯಾಂಗ್ ನಂಟು?

ಪ್ರಜಾವಾಣಿ ವಾರ್ತೆ

ಬಾಬಾ ಸಿದ್ದೀಕಿ

ಮುಂಬೈ: ಮಾಜಿ ಸಚಿವ, ಎನ್‌ಸಿಪಿ (ಅಜಿತ್ ಪವಾರ್ ಬಣ) ಮುಖಂಡ ಬಾಬಾ ಸಿದ್ದೀಕಿ ಅವರ ಹತ್ಯೆಗೆ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ತಂಡಕ್ಕೂ ನಂಟಿದೆಯೇ ಎಂಬ ಆಯಾಮದಲ್ಲಿ ಮುಂಬೈ ಪೊಲೀಸರು ತನಿಖೆಗೆ ನಡೆಸುತ್ತಿದ್ದಾರೆ.

'ಸಿದ್ದೀಕಿಅವರ ಹತ್ಯೆಯ ಹೊಣೆ ಹೊತ್ತು, ಬಿಷ್ಣೋಯ್ ಗ್ಯಾಂಗ್‌ನ ಸದಸ್ಯ ಎನ್ನಲಾದ ವ್ಯಕ್ತಿಯೊಬ್ಬ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಇದರ ಸತ್ಯಾಸತ್ಯತೆ ಪರಿಶೀಲಿಸುತ್ತಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿದ್ದೀಕಿ ಅವರ ಕೊಲೆ ವ್ಯವಹಾರ ದ್ವೇಷ ಕಾರಣದಿಂದಾಗಿಯೇ ನಡೆದಿದೆಯೇ? ಸುಪಾರಿ ಕೊಲೆಯೊ? ಎಂಬುದು ಸೇರಿದಂತೆ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 9

ನಿವೇಶನ ವಾಪಸ್‌ಗೆ ಮುಂದಾದ ರಾಹುಲ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು 'ಮುಡಾ' ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆ ಶುರುವಾಗುತ್ತಿದ್ದಂತೆಯೇ 14 ನಿವೇಶನಗಳನ್ನು ವಾಪಸ್ ಮಾಡಿದ್ದ ತಂತ್ರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ರಾಹುಲ್ ಎಂ. ಖರ್ಗೆ ಕೂಡ ಅನುಸರಿಸಿದ್ದಾರೆ. ತಮ್ಮ ಅಧ್ಯಕ್ಷತೆಯ ಟ್ರಸ್ಟ್‌ಗೆ ಮಂಜೂರಾಗಿದ್ದ 5 ಎಕರೆ ವಿಸ್ತೀರ್ಣದ ನಾಗರಿಕ ಸೌಲಭ್ಯ (ಸಿ.ಎ) ನಿವೇಶನ ವಾಪಸ್ ಮಾಡಲು ಮುಂದಾಗಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಣ್ಣನೂ ಆಗಿರುವ ರಾಹುಲ್ ಎಂ. ಖರ್ಗೆ ಅವರ ಅಧ್ಯಕ್ಷತೆಯ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಬೆಂಗಳೂರಿನಲ್ಲಿ 5 ಎಕರೆ ನಿವೇಶನ ಮಂಜೂರು ಮಾಡಿತ್ತು. ಈ ಬಗ್ಗೆ ವಿವರಣೆ ಕೇಳಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸರ್ಕಾರಕ್ಕೆ ಪತ್ರ ಬರೆದಿದ್ದರು. ಬಳಿಕ, ನಿವೇಶನ ಹಂಚಿಕೆಯು ವಿವಾದದ ಸ್ವರೂಪ ಪಡೆದುಕೊಂಡಿತ್ತು.

8ನೇ ಪುಟ ನೋಡಿ



ಗೂಡ್ಸ್ ವಾಹನದ ಚಕ್ರಕ್ಕೆ ಸಿಲುಕಿ ಬಾಲಕ ಸಾವು

ಬೆಂಗಳೂರು: ಗೂಡ್ಸ್ ವಾಹನದ ಚಕ್ರಕ್ಕೆ ಸಿಲುಕಿ ಐದು ವರ್ಷದ ಬಾಲಕ ಮೃತಪಟ್ಟ ಘಟನೆ ಕೆ.ಜಿ. ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಮನೆಯ ಮುಂದೆ ಆಟ ವಾಡುತ್ತಿದ್ದ ಬಾಲಕ ತಾಹೀರ್ ಪಾಷಾ, ಓಡುವಾಗ ರಸ್ತೆಯ ಬದಿ ನಿಲ್ಲಿಸಿದ್ದ ಸ್ಕೂಟರ್ ಹ್ಯಾಂಡಲ್ ತಗುಲಿ ಕೆಳಗೆ ಬಿದ್ದಿದ್ದಾನೆ. ಅದೇ ಸಂದರ್ಭದಲ್ಲಿ ಪಕ್ಕದಲ್ಲಿ ಸಾಗುತ್ತಿದ್ದ ಗೂಡ್ಸ್ ವಾಹನದ ಹಿಂಬದಿ ಚಕ್ರ ತಲೆಯ ಮೇಲೆ ಹರಿದಿದೆ. ಚಾಲಕ ತಕ್ಷಣ ನಿಲ್ಲಿಸಿದ್ದಾನೆ, ಬಾಲಕನ ತಲೆ ವಾಹನದ ಚಕ್ರದ ಕೆಳಗೆ ಸಿಲುಕಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಳಿಕ ವಾಹನವನ್ನು ಹಿಂದಕ್ಕೆ ತೆಗೆದುಕೊಂಡು, ಬಾಲಕನನ್ನು ಹೊರಗೆ ತೆಗೆಯಲಾಗಿದೆ. ಸ್ಥಳೀಯರು ಮತ್ತು ಕುಟುಂಬದವರು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯುವಾಗಲೇ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ' ಎಂದು ಹೇಳಿದರು.

ಮೃತ ಬಾಲಕನ ಪೋಷಕರ ದೂರಿನ ಮೇರೆಗೆ ಕೆ.ಜಿ. ಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

ಬಬ್ಲಿ ಕೊಲೆ ಆರೋಪಿಗಳಿಂದ ಕೃತ್ಯ: ಪ್ರಕರಣ ದಾಖಲಿಸಿಕೊಂಡು ಸಿಸಿಬಿ ತನಿಖೆ

ಜೈಲಿನಿಂದಲೇ ಸಾಕ್ಷಿಗೆ ಕೊಲೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೊಲೆ ಆರೋಪಿ ಸೋಮಶೇಖರ್ ಅಲಿಯಾಸ್ ಸೋಮು ಎಂಬಾತ 'ಇನ್‌ಸ್ಟಾಗ್ರಾಂ ಅಪ್ಲಿಕೇಷನ್ ಮೂಲಕ ವಾಯ್ಸ್ ಮೆಸೇಜ್ ಕಳುಹಿಸಿ, ಸಾಕ್ಷ್ಯ ಹೇಳದಂತೆ ಕೊಲೆ ಬೆದರಿಕೆ ಹಾಕಿದ್ದಾನೆ' ಎಂದು ಆಟೊ ಚಾಲಕ ಅರ್ಮುಗಂ ದೂರು ನೀಡಿದ್ದಾರೆ.

ಈ ಸಂಬಂಧ ಸಿಸಿಬಿ ಪೊಲೀಸರು ಸೋಮಶೇಖರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

'ಸೆಪ್ಟೆಂಬರ್ 23ರಂದು ಸಂಗ ಸೋಮ ಎಂಬ ಇನ್‌ಸ್ಟಾಗ್ರಾಂ ಖಾತೆಯಿಂದ ನನಗೆ ಮೂರು ವಾಯ್ಸ್ ಸಂದೇಶ ಬಂದಿದ್ದು, ಅದರಲ್ಲಿ ತಮಿಳು ಮತ್ತು ಕನ್ನಡ ಮಿಶ್ರಿತ ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಜೋಸೆಫ್ ಬಾಬು ಅಲಿಯಾಸ್ ಬಬ್ಲಿ ಕೊಲೆ ಪ್ರಕರಣದಲ್ಲಿ ಯಾರೊಬ್ಬರೂ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಬಾರದು ಎಂದು ಬೆದರಿಸಿದ್ದಾರೆ' ಎಂದು ಅರ್ಮುಗಂ ದೂರಿನಲ್ಲಿ ತಿಳಿಸಿದ್ದಾರೆ.

'ಈ ವಿಷಯವನ್ನು ಬಬ್ಲಿ ಪತ್ನಿ, ಸುನಿಲ್ ಅಲಿಯಾಸ್ ಸುಂಡಿಲಿ, ಜಾರ್ಜ್ ಹಾಗೂ ನಾದನಿಗೂ ತಲುಪಿಸಬೇಕು. ನಮ್ಮ ಬಾಸ್ ಶಿವ ಹೇಳಿದಂತೆ ಕೇಳದಿದ್ದರೆ ಎಲ್ಲರನ್ನೂ ಹೊಡೆದು ಹಾಕುತ್ತೇವೆ. ರೌಡಿ ಮಿಲಿಟರಿ ಸತೀಶನನ್ನು ಹೊಡೆದು ಹಾಕಿದ್ದೇವೆ. ಅದೇ ರೀತಿ ಜೈಲಿನಿಂದಲೇ ಎಲ್ಲರನ್ನೂ ಹೊಡೆದು ಹಾಕುತ್ತೇವೆ. ಆಟೊ ಓಡಿಸುವ ನಿನ್ನನ್ನೂ ಮುಗಿಸುತ್ತೇವೆ ಎಂದು ನನಗೆ ಬೆದರಿಕೆ ಹಾಕಿದ್ದಾರೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'ನನ್ನ ಮೊಬೈಲ್‌ಗೆ ಬಂದ ಬೆದರಿಕೆ ಸಂದೇಶದಿಂದ ಭಯಗೊಂಡು ಆಟೊ ಓಡಿಸದೆ ಮನೆಯಲ್ಲಿಯೇ ಇದ್ದೆ. ಮೂರು ವರ್ಷಗಳ ಹಿಂದೆ ಕೋರಮಂಗಲದಲ್ಲಿ ಕೊಲೆಯಾದ ಜೋಸೆಫ್ ನನಗೆ ಪರಿಚಯ. ಸೋಮಶೇಖರ್ ಅಲಿಯಾಸ್ ಸೋಮ ಮತ್ತು ಸಹಚರರು ಜೈಲಿನಿಂದಲೇ ಸಂಚು ರೂಪಿಸಿ ಮಿಲಿಟರಿ ಸತೀಶ್ ಎಂಬುವರನ್ನು ಕೊಲೆ ಮಾಡಿಸಿದ್ದರು. ಆದ್ದರಿಂದ ನನಗೆ ಜೀವ ಭಯ ಇದ್ದು, ರಕ್ಷಣೆ ನೀಡಬೇಕು. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ವಾಯ್ಸ್ ಸಂದೇಶವುಳ್ಳ ಪೆನ್‌ಡ್ರೈವ್ ಅನ್ನು ದೂರಿನ ಜೊತೆ ಲಗತ್ತಿಸಿದ್ದಾರೆ.

ನಟ ದರ್ಶನ್ ಮತ್ತು ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿದ ಪ್ರಕರಣದಲ್ಲಿ ಜೈಲು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗಿತ್ತು. ಈ ಘಟನೆ ಬಳಿಕವೂ ಮೊಬೈಲ್ ಬಳಕೆ ಮುಂದುವರಿದಿರುವ ಅನುಮಾನ ಈ ಪ್ರಕರಣದಿಂದ ವ್ಯಕ್ತವಾಗಿದೆ.

ಸೆ.15ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿ, ಶೋಧ ನಡೆಸಿದ್ದಾಗ 26 ಮೊಬೈಲ್ ಫೋನ್‌ಗಳು ಪತ್ತೆಯಾಗಿದ್ದವು. ಅದರ ಜಾಡು ಹಿಡಿದು ತನಿಖೆ ನಡೆಸಿದಾಗ ವಿಜಯ್ ಎಂಬ ಕೈದಿ ಮೊಬೈಲ್ ಫೋನ್ ಪೂರೈಸುತ್ತಿದ್ದ ಎಂಬುದು ಗೊತ್ತಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿದ್ದವು.

ಜೈಲಿನಿಂದಲೇ ಹತ್ಯೆಗೆ ಸಂಚು

ಸಣ್ಣಪುಟ್ಟ ಗುತ್ತಿಗೆ ಕೆಲಸ ಮಾಡಿಕೊಂಡಿದ್ದ ಆಡುಗೋಡಿ ಠಾಣೆ ರೌಡಿ ಪಟ್ಟಿಯಲ್ಲಿದ್ದ ಜೋಸೆಫ್ ಬಾಬು ಅಲಿಯಾಸ್ ಬಬ್ಲಿ ಎಂಬಾತನನ್ನು 2021ರಲ್ಲಿ ಬ್ಯಾಂಕ್‌ನೊಳಗೆ ಕೊಲೆ ಮಾಡಲಾಗಿತ್ತು. ರೌಡಿ ಶಿವು ಎಂಬಾತನ ಮೇಲೆ ಜೋಸೆಫ್ ಈ ಹಿಂದೆ ದಾಳಿ ಮಾಡಿದ್ದ. ಪ್ರಕರಣವೊಂದರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ ಶಿವು, ಬಬ್ಲಿ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಜೈಲಿನಲ್ಲೇ ಸಂಚು ರೂಪಿಸಿ, ತನ್ನ ಸಹಚರರ ಮೂಲಕ ಹತ್ಯೆ ಮಾಡಿಸಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿತ್ತು.

ಮನೆ ಮುಂದೆ ನಿಲ್ಲಿಸಿದ್ದ ಬೈಕ್‌ಗಳ ಕಳವು

ಮನೆ ಮುಂದೆ ನಿಲುಗಡೆ ಮಾಡಿದ್ದ ಎರಡು ದ್ವಿಚಕ್ರ ವಾಹನಗಳನ್ನು ಅಪರಿಚಿತ ವ್ಯಕ್ತಿ ಕಳವು ಮಾಡಿರುವ ಘಟನೆ ಶಿವಾಜಿ ನಗರದಲ್ಲಿ ನಡೆದಿದೆ.

ಆರೋಪಿ ಬೈಕ್‌ನ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡಿಕೊಂಡು ಹೋಗುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹತ್ತು ನಿಮಿಷಗಳ ಅಂತರದಲ್ಲಿ ಎರಡು ವಾಹನಗಳ ಕಳುವಾಗಿದೆ.

ಅ.10ರಂದು ನಡೆದ ಘಟನೆಯ ವಿಡಿಯೊವನ್ನು ವಾಹನದ ಮಾಲೀಕರು 'ಎಕ್ಸ್' ನಲ್ಲಿ ಪೋಸ್ಟ್ ಮಾಡಿ ನಗರ ಪೊಲೀಸರ ಖಾತೆಗೆ ಟ್ಯಾಗ್ ಮಾಡಿದ್ದಾರೆ.

ಬಾಲಕಿ ಮೇಲೆ ನಾಯಿ ದಾಳಿ

ಜಾಲಹಳ್ಳಿಯ ವಾಯುಸೇನಾ ಕ್ಯಾಂಪಸ್ ನಲ್ಲಿ ಬಾಲಕಿ ಮೇಲೆ ನಾಯಿಗಳ ಹಿಂಡು ದಾಳಿ ಮಾಡಿ ಗಾಯಗೊಳಿಸಿವೆ.

ತನ್ನ ಸಹೋದರನ ಜೊತೆ ಬಾಲಕಿ ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ 3-4 ನಾಯಿಗಳು ಏಕಾಏಕಿ ದಾಳಿ ನಡೆಸಿ, ಬಟ್ಟೆಯನ್ನು ಎಳೆದಾಡಿವೆ. ಭಯದಿಂದ ಬಾಲಕ ಓಡಿಹೋಗಿದ್ದಾನೆ. ಈಕೆ ತಪ್ಪಿಸಿ ಕೊಳ್ಳಲು ಆಗದೇ ರಕ್ಷಣೆಗೆ ಕೂಗಿಕೊಂಡಿದ್ದಾಳೆ. ಯುವಕನೊಬ್ಬ ಬಂದು ನಾಯಿಗಳತ್ತ ಕಲ್ಲು ಎಸೆದು ಓಡಿಸಿದ್ದಾನೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಜಾಲತಾಣದಲ್ಲಿ ಹರಿದಾಡುತ್ತಿದೆ. ಆಗಸ್ಟ್ ತಿಂಗಳಲ್ಲಿ ಇದೇ ಕ್ಯಾಂಪಸ್ ಆವರಣದಲ್ಲಿ ನಾಯಿಗಳು ವೃದ್ಧೆಯ ಮೇಲೆ ದಾಳಿ ಮಾಡಿ ಸಾಯಿಸಿದ್ದವು. ಬಳಿಕ ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದ್ದರು. ಆದರೆ, ಆಗ ಅಲ್ಲಿ ಬೀದಿನಾಯಿ ಕಂಡುಬಂದಿರಲಿಲ್ಲ.

ನಾಗಸಂದ್ರ–ಮಾದಾವರ ಮೆಟ್ರೊ ದಿನಾಂಕ ನಿಗದಿಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ನಾಗಸಂದ್ರ–ಮಾದಾವರ ನಡುವೆ ಈ ತಿಂಗಳ ಕೊನೆಯೊಳಗೆ ಮೆಟ್ರೊ ರೈಲು ಸಂಚಾರ ಆರಂಭಿಸುವ ಗುರಿ ಇಟ್ಟುಕೊಂಡಿರುವ ಬಿಎಂಆರ್‌ಸಿಎಲ್, ದಿನಾಂಕ ನಿಗದಿಗಾಗಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದೆ.

ಕಾಮಗಾರಿಗಳು ಪೂರ್ಣಗೊಂಡು, ಎಲ್ಲ ಪರೀಕ್ಷೆಗಳು ಮುಕ್ತಾಯಗೊಂಡಿವೆ. ರೈಲ್ವೆ ಸುರಕ್ಷತಾ ಆಯುಕ್ತರು ಕೂಡ ಅ.3ರಂದು ಪರಿಶೀಲನೆ ನಡೆಸಿ, ವಾಣಿಜ್ಯ ಸಂಚಾರಕ್ಕೆ ಅ.4ರಂದು ಒಪ್ಪಿಗೆ ನೀಡಿದ್ದಾರೆ. ಉದ್ಘಾಟನೆಗೆ ದಿನ ನಿಗದಿಗಾಗಿ ಬಿಎಂಆರ್‌ಸಿಎಲ್ ಕಾಯುತ್ತಿದೆ.

ಹಸಿರು ಮಾರ್ಗದ ವಿಸ್ತರಿತ ಪ್ರದೇಶದಲ್ಲಿ 3.7 ಕಿಲೋಮೀಟರ್ ಮಾರ್ಗ ನಿರ್ಮಾಣಗೊಂಡಿದ್ದು, ಮಂಜುನಾಥ ನಗರ, ಚಿಕ್ಕಬಿದರ ಕಲ್ಲು, ಮಾದಾವರ ನಿಲ್ದಾಣಗಳಿವೆ. ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾದರೆ ಮೆಟ್ರೊ ಪ್ರಯಾಣಿಕರ ಸಂಖ್ಯೆ ದಿನಕ್ಕೆ ಅಂದಾಜು 6,500, ತಿಂಗಳಿಗೆ ಸುಮಾರು 2 ಲಕ್ಷ ಹೆಚ್ಚಾಗುವ ನಿರೀಕ್ಷೆ ಇದೆ. ಅಂಚೆಪಾಳ್ಯ, ಜಿಂದಾಲ್ ನಗರ ಸಹಿತ ಸುತ್ತಮುತ್ತಲಿನ ಜನರಲ್ಲದೇ, ನೆಲಮಂಗಲ ಕಡೆಯಿಂದ ಬೆಂಗಳೂರಿಗೆ ಬರುವವರು ಕೂಡ ಮಾದಾವರವರೆಗೆ ಬಸ್ ಅಥವಾ ಖಾಸಗಿ ವಾಹನಗಳಲ್ಲಿ ಬಂದು, ಮಾದಾವರದಿಂದ ಮೆಟ್ರೊದಲ್ಲಿ ಸಂಚರಿಸುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಘಾಟನೆಗೆ ದಿನಾಂಕ ನಿಗದಿಗಾಗಿ ನಗರಾಭಿವೃದ್ಧಿ ಇಲಾಖೆಗೆ ಬಿಎಂಆರ್‌ಸಿಎಲ್ ಪತ್ರ ಬರೆದಿದೆ. ಕೇಂದ್ರ ಸರ್ಕಾರದೊಂದಿಗೆ ಚರ್ಚೆ ನಡೆಸಿ ದಿನಾಂಕ ನಿಗದಿಯಾಗಲಿದೆ. ಈಗಿರುವ ರೈಲುಗಳನ್ನೇ ವಿಸ್ತರಿತ ಮಾರ್ಗದಲ್ಲಿ ಓಡಿಸುವುದರಿಂದ ರೈಲಿಗಾಗಿ ಕಾಯಬೇಕಿಲ್ಲ. ರಾಜ್ಯ ಸರ್ಕಾರದ ಅನುಮತಿ ಸಿಕ್ಕಿದ ಕೂಡಲೇ ಸಂಚಾರ ಆರಂಭಗೊಳ್ಳಲಿದೆ. ಅಕ್ಟೋಬರ್ ಅಂತ್ಯದ ಒಳಗೆ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ರೈಲು ಸಂಚರಿಸಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತ ಪಡಿಸಿದ್ದಾರೆ.

ಪಾರ್ಶ್ವವಾಯು ನಿರ್ವಹಣೆಗೆ ಅಭಿಯಾನ

ಬೆಂಗಳೂರು: ಪಾರ್ಶ್ವವಾಯು ತಡೆ ಗಟ್ಟುವಿಕೆ, ಚಿಕಿತ್ಸೆಗೆ ಸಂಬಂಧಿಸಿದಂತೆ ಇಂಡಿಯನ್ ಸ್ಟ್ರೋಕ್ ಅಸೋಸಿಯೇಷನ್ ನಗರದಲ್ಲಿ 'ಮಿಷನ್ ಬ್ರೈನ್ ಅಟ್ಯಾಕ್' ಅಭಿಯಾನ ಪ್ರಾರಂಭಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಸಲಹೆಗಾರರೂ ಆಗಿರುವ ನರವಿಜ್ಞಾನ ಮತ್ತು ಪಾರ್ಶ್ವ ವಾಯು ತಜ್ಞ ಡಾ. ಅಮಿತ್ ಕುಲಕರ್ಣಿ, 'ಪಾರ್ಶ್ವವಾಯು ಸಮಸ್ಯೆಯು ಅಂಗವಿಕಲತೆ, ಅಕಾಲಿಕ ಮರಣಕ್ಕೆ ಕಾರಣವಾಗುತ್ತಿದೆ. ದೇಶದಲ್ಲಿ ವಾರ್ಷಿಕ ಸುಮಾರು 18 ಲಕ್ಷ ಜನರ ಮೇಲೆ ಇದು ಪರಿಣಾಮ ಬೀರುತ್ತದೆ. ಸಾವಿಗೆ ಎರಡನೇ ಸಾಮಾನ್ಯ ಕಾರಣ ಹಾಗೂ ಅಂಗವಿಕಲತೆಗೆ ಮೂರನೇ ಪ್ರಮುಖ ಕಾರಣವಾಗಿದೆ. ಈ ರೋಗದ ಬಗ್ಗೆ ಅರಿವಿನ ಕೊರತೆಯಿದೆ. ಆದ್ದರಿಂದ ಈ ಬಗ್ಗೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ರೋಗ ಲಕ್ಷಣಗಳನ್ನು ಗುರುತಿಸುವ ಜೊತೆಗೆ ಚಿಕಿತ್ಸೆ ಒದಗಿಸಲು ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ಒದಗಿಸಲಾಗುತ್ತದೆ' ಎಂದು ತಿಳಿಸಿದರು.

ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿರುವ ದ ಇಂಡಿಯನ್ ಗ್ಯಾರೇಜ್ ಕಂಪನಿಯ ಮಳಿಗೆಯನ್ನು ಪ್ರಚಾರ ರಾಯಭಾರಿಯಾಗಿರುವ ಭಾರತ ಕ್ರಿಕೆಟ್ ತಂಡದ ಆಟಗಾರ ಸೂರ್ಯಕುಮಾರ್ ಯಾದವ್ ಭಾನುವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸೇರಿದ್ದ ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದರು
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಚನ್ನಪಟ್ಟಣ: ನಾನೇ ಅಭ್ಯರ್ಥಿ– ಡಿಕೆಶಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾನೇ ಅಭ್ಯರ್ಥಿ; ನನ್ನ ಹೆಸರಿನಲ್ಲೇ ಮತ ಕೇಳುತ್ತೇವೆ. ನಮ್ಮ ಕುಟುಂಬದವರ್‍ಯಾರೂ ಸ್ಪರ್ಧಿಸುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಉಪ ಚುನಾವಣೆಗೆ ಚನ್ನಪಟ್ಟಣದಲ್ಲಿ ವೇದಿಕೆ ಸಿದ್ಧಮಾಡಿಕೊಳ್ಳುತ್ತಿದ್ದೇವೆ. ಲೋಕಸಭಾ ಚುನಾವಣೆಯಲ್ಲಿ ನಮಗೆ ಕಡಿಮೆ ಮತ ಬಂತು. ವಿಧಾನಸಭೆಯಲ್ಲಿ ಇನ್ನೂ ಕಡಿಮೆ ಮತಗಳು ಬಂದಿದ್ದವು. ನಮ್ಮ ಅಡಿಪಾಯ ಭದ್ರಗೊಳಿಸುತ್ತಿದ್ದೇವೆ. ಜನರು ನಮ್ಮ ಕೆಲಸ ನೋಡಿ ಕೈ ಹಿಡಿಯುವ ವಿಶ್ವಾಸವಿದೆ' ಎಂದರು.

ನಿಧನವಾರ್ತೆ

ಗೊರೂರು ಸೋಮಶೇಖರ್

ಬೆಂಗಳೂರು: ಲೇಖಕ ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಒಡನಾಡಿಯಾಗಿದ್ದ ಗೊರೂರು ಸೋಮಶೇಖರ್ (90) ಅವರು ನಗರದಲ್ಲಿ ಶುಕ್ರವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಅವರು ಹಾಸನ ಜಿಲ್ಲೆಯ ಆಲೂರು ಮತ್ತು ಗೊರೂರಿನಲ್ಲಿ ಹಲವು ವರ್ಷಗಳು ಎಂಜಿನಿಯರ್ ಆಗಿ ಕಾರ್ಯನಿರ್ವಹಿಸಿದ್ದರು. 'ಗೊರೂರು ನೆನಪುಗಳು' ಸೇರಿದಂತೆ ಮೂರು ಕೃತಿಗಳು ಮತ್ತು ಮೂರು ನಾಟಕಗಳನ್ನು ರಚಿಸಿರುವ ಸೋಮಶೇಖರ್, ಗೊರೂರಿನ ಎಎನ್‌ವಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಪ್ರಮುಖ ಕಾರಣ ಕರ್ತರಲ್ಲಿ ಒಬ್ಬರಾಗಿದ್ದರು. ಬಾಲ್ಯದಿಂದಲೂ ಅವರು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಜೊತೆಗೆ ಒಡನಾಟ ಹೊಂದಿದ್ದು, ಅವರ ಶಿಷ್ಯರಾಗಿದ್ದರು.

ಶಕುಂತಲಮ್ಮ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ನರಸೀಪುರದ ನಿವೃತ್ತ ಮುಖ್ಯಶಿಕ್ಷಕಿ ಎಚ್.ಎ.ಶಕುಂತಲಮ್ಮ (81) ಅವರು ವಯೋಸಹಜ ಅನಾರೋಗ್ಯದಿಂದ ಶನಿವಾರ ರಾತ್ರಿ 10.55ಕ್ಕೆ ಬೆಂಗಳೂರಿನ ರಾಜರಾಜೇಶ್ವರಿ ನಗರದ ಸ್ವಗೃಹದಲ್ಲಿ ನಿಧನರಾದರು.



ಮೃತರಿಗೆ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ. ಭಾನುವಾರ ಅಂತ್ಯಕ್ರಿಯೆ ನಡೆಯಿತು.

ಜಂಟಿ ಇ–ಹರಾಜು ಮಾರಾಟದ ಸೂಚನೆ
ಬೇಸ್ ಕಾರ್ಪೊರೇಷನ್ ಲಿಮಿಟೆಡ್ (ಲಿಕ್ವಿಡೇಷನ್‌ನಲ್ಲಿ)
CIN: U30007KA1987PLC023168

ಪ್ರಾದೇಶಿಕ ಕಛೇರಿ:– ಫ್ಲಾಟ್ ನಂ.ಎಸ್2, 2ನೇ ಮಹಡಿ, ನಂ.13 ಲೋಹನ್ಸ್ ರೀಜೆಂಟ್, ಸುಂದರಮೂರ್ತಿ ರಸ್ತೆ, ಕಾಕ್ಸ್ ಟೌನ್ ಬೆಂಗಳೂರು–560005, ಕರ್ನಾಟಕ. ಇಮೇಲ್: basecliquidator@gmail.com, ipkpraju@gmail.com.

ದಿವಾಳಿತನ ಮತ್ತು ದಿವಾಳಿತನ ಕೋಡ್, 2016 ಮತ್ತು ಭದ್ರತಾ ಸ್ವತ್ತುಗಳ ಮತ್ತು ಹಣಕಾಸು ಸ್ವತ್ತುಗಳ ಪುನರ್‌ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಜಾರಿ ನಿಯಮ 2002ರ ಅಡಿಯಲ್ಲಿ ಜಂಟಿ ಇ–ಹರಾಜು ಮಾರಾಟದ ಸೂಚನೆ

ಈ ಜಂಟಿ ಇ–ಹರಾಜು ಮಾರಾಟದ ಸೂಚನೆಯು ದಿವಾಳಿತನ ಮತ್ತು ದಿವಾಳಿತನ ಕೋಡ್, 2016 ರ ಅಡಿಯಲ್ಲಿ ಮಾರಾಟವಾಗಿದೆ, (ಭಾರತೀಯ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ ನೊಂದಣಿ 32 (ದಿವಾಳಿಕರಣ ಪ್ರಕ್ರಿಯೆ) ನಿಯಮಗಳು, 2016) 2002 ರ ಭದ್ರತಾ ಹಿತಾಸಕ್ತಿ ಕಾಯಿದೆ, 2002 ರ ಭದ್ರತಾ ಮತ್ತು ಪುನರ್‌ನಿರ್ಮಾಣ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದೊಂದಿಗೆ ಅನುಬಂಧ IV-A ಮತ್ತು ನಿಯಮ 8(6) ರ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ("**ಸರ್ಫೇಸಿ ಆಕ್ಟ್ 2002**").

ಈ ಜಂಟಿ ಇ–ಹರಾಜು ಮಾರಾಟದ ಸೂಚನೆಯನ್ನು ಈ ಮೂಲಕ ಕಾರ್ಪೊರೇಟ್ ಸಾಲಗಾರರು ಮತ್ತು ವೈಯಕ್ತಿಕ ಜಾಮೀನುದಾರರನ್ನು ಒಳಗೊಂಡಂತೆ ಸಾಮಾನ್ಯವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಅದರ ಅಡಿಯಲ್ಲಿ ಬೇಸ್ ಕಾರ್ಪೊರೇಷನ್ ಲಿಮಿಟೆಡ್‌ನ ಕಂಪನಿ–ಯುನಿಟ್/ಸ್ವತ್ತುಗಳು (ದಿವಾಳಿಯಲ್ಲಿ) ("ಕಾರ್ಪೊರೇಟ್ ಸಾಲಗಾರರು") 2016 ರ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ (ದಿವಾಳಿಕರಣ ಪ್ರಕ್ರಿಯೆ ನಿಯಮಗಳು), 2016 ರ ಸೆಕ್ಷನ್ 35 (ಎಫ್)ರ ಅಡಿಯಲ್ಲಿ ದಿವಾಳಿ ಎಸ್ಟೇಟ್‌ನ ಭಾಗವಾಗಿರುವ ನಿಯಮಗಳು 32 (ಎಫ್) ಅಡಿಯಲ್ಲಿ ಕಾಳಜಿಯ ಆಧಾರದ ಮೇಲೆ ಅಥವಾ "ಮಾರಾಟದ ಮೋಡ್" ಆಧಾರದ ಮೇಲೆ ಮಾರಾಟ ಮಾಡಲು ಪ್ರಸ್ತಾಪಿಸಲಾಗಿದೆ) ದಿವಾಳಿತನ ಮತ್ತು ದಿವಾಳಿತನ, 2016 ("ಐಬಿಸಿ") ರೆಗ್ಯುಲೇಷನ್ಸ್ 33 ರನ್ನು ಓದಿಕೊಂಡಂತೆ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ ನಿಯಮಗಳು 2016 (ದಿವಾಳಿತನ ಪ್ರಕ್ರಿಯೆ) ನಿಯಮಗಳು, 2016) ("ಲಿಕ್ವಿಡೇಶನ್ ರೆಗ್ಯುಲೇಷನ್ಸ್") ಅನ್ನು ಐಬಿಸಿ ಮತ್ತು ದಿವಾಳಿತನದ 32 ರ ಅಡಿಯಲ್ಲಿ ಲಿಕ್ವಿಡೇಶನ್ ಮೂಲಕ ರಚಿಸಲಾಗಿದ್ದು, ಸರ್ಫೇಸಿ ಆಕ್ಟ್ 2002 ರ ಅಡಿಯಲ್ಲಿ ಫ್ಲಾಂಟ್‌ನ ಅವಿಭಾಜ್ಯ ಅಂಗವನ್ನು ರೂಪಿಸುವ ಸುರಕ್ಷಿತ ಸಾಲದಾತರೊಂದಿಗೆ ಅಡಮಾನ/ಚಾರ್ಜ್ ಮಾಡಲಾದ/ಮುಕ್ತದಾರರೊಂದಿಗೆ ಕಾರ್ಪೊರೇಟ್ ಸಾಲಗಾರರ ವೈಯಕ್ತಿಕ ಜಾಮೀನುದಾರರ ಭೂಮಿಯೊಂದಿಗೆ ಜಂಟಿಯಾಗಿ ನಿಯಮಗಳು ಅನುಬಂಧ IV ಮತ್ತು ನಿಯಮ 6 ರ ನಿಯಮದ 8(6) ಭದ್ರತಾ ಆಸಕ್ತಿಯ (ಜಾರಿ) ನಿಯಮಗಳು, 2002 ರಂತೆ "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", "ಯಾವುದೇ ಆಧಾರವಿಲ್ಲದೆ" ಮತ್ತು "ಆನ್‌ಲೈನ್ ಇ–ಹರಾಜು" ಮೂಲಕ ಇ–ಹರಾಜು ಮಾಡಲಾಗುತ್ತದೆ.

ಇತ್ಯರ್ಥಕ್ಕಾಗಿ ತಿಳಿಸಲಾದ ಪ್ರತಿಪಾದನೆಯು ಯಾವುದೇ ರೀತಿಯ ವಾರಂಟಿಗಳು ಮತ್ತು ನಷ್ಟ ಪರಿಹಾರಗಳನ್ನು ಹೊಂದಿಲ್ಲ. ಈ ಕೆಳಗಿನ ಟೇಬಲ್‌ನಲ್ಲಿ ತಿಳಿಸಲಾದ ಸ್ವತ್ತುಗಳ ಬಿಡ್ಡಿಂಗ್ ಆನ್‌ಲೈನ್ ಇ–ಹರಾಜು ಸೇವಾ ಪೂರೈಕೆದಾರರ ವೆಬ್‌ಸೈಟ್ https://nbid.nesl.co.in/app/login ಮೂಲಕ ನ್ಯಾಷನಲ್ ಇ–ಗವರ್ನೆನ್ಸ್ ಸರ್ವೀಸಸ್ ಲಿಮಿಟೆಡ್ (NeSL) ಮೂಲಕ ನಡೆಯುತ್ತದೆ,

ನಿರೀಕ್ಷಿತ ಬಿಡ್‌ದಾರರಿಂದ ಅಗತ್ಯ ನಮೂನೆಗಳು, ಅಫಿಡವಿಟ್‌ಗಳು, ಘೋಷಣೆ ಇತ್ಯಾದಿಗಳ ಸಲ್ಲಿಕೆ.	15–10–2024 ರಿಂದ 29–10–2024.
ನಿವೇಶನ ಭೇಟಿ / ತಪಾಸಣೆ ದಿನಾಂಕ.	30–10–2024 ರಿಂದ 11–11–2024.
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ.	16–11–2024 ಬ್ಯಾಂಕಿಂಗ್ ಅವಧಿಯ ಕೊನೆಯವರೆಗೆ
ಇ–ಹರಾಜಿನ ದಿನಾಂಕ ಮತ್ತು ಸಮಯ. ಜೊತೆಗೆ ಬಿಡ್ ಹೆಚ್ಚಳಕ್ಕಾಗಿ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ.	19–11–2024, ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ (ಕ್ರ.ಸಂ.1).

ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ:

ಕ್ರ. ಸಂ.	ಇ–ಹರಾಜಿನಲ್ಲಿ ಮಾರಾಟಕ್ಕೆ ಲಭ್ಯವಿರುವ ಗುಂಪು/ಬಹಳಷ್ಟು ಸ್ವತ್ತುಗಳನ್ನು ಅನುಸರಿಸಿ.	ಮೀಸಲು ಬೆಲೆ (ರೂ.ಗಳಲ್ಲಿ) (ಕೋಟಿಯಲ್ಲಿ)	ಇಎಂಡಿ (ರೂ.ಗಳಲ್ಲಿ) (ಕೋಟಿಯಲ್ಲಿ)
1	**ಐಬಿಸಿ ಕೋಡ್ 2016 ರ ಅಡಿಯಲ್ಲಿ, ಮತ್ತು ಸರ್ಫೇಸಿ ಆಕ್ಟ್, 2002ರ ಅಡಿಯಲ್ಲಿ** ಬೇಸ್ ಕಾರ್ಪೊರೇಷನ್ ಲಿಮಿಟೆಡ್ (ಸಿಡಿ) ಒಂದು ಕಾಳಜಿಯಂತೆ ಹೋಗುವ (ಯೂನಿಟ್–ಸೋಲನ್) ಸಿಡಿಯ ಕಾರ್ಖಾನೆ ಭೂಮಿ ಮತ್ತು ಕಟ್ಟಡದ ಖಾಸ್ರಾ ಸಂಖ್ಯೆ. 357/192/140/2, 29.04 ಬಿಘಾಸ್ ಹೊಂದಿದೆ ಮತ್ತು ಸಿಡಿಯಲ್ಲಿರುವ ಆಸ್ತಿಯು ವೈಯಕ್ತಿಕ ಜಾಮೀನುದಾರರು ಶ್ರೀ ರಾಕೇಶ್ ಶರ್ಮಾ ರವರ ಹೆಸರಿನಲ್ಲಿದೆ, ಭೂಮಿಯ ಫ್ಯಾಕ್ಟರಿ ಆವರಣ ಮತ್ತು ಪಕ್ಕದ ವಿಸ್ತೀರ್ಣ 85.06 ಬಿಘಾಸ್, ಖಾಸ್ರಾ ನಂ 357/190/140/5, 357/190/140/3, 357/190/140/1, 357/190/140/2 ಇದು ಗ್ರಾಮ ಓಚ್‌ಘಾಟ್, ಸೋಲನ್ ಜಿಲ್ಲೆ, ಹಿಮಾಚಲ ಪ್ರದೇಶದಲ್ಲಿದೆ.	96.88	9.688
	ಬಿಡ್ ಹೆಚ್ಚಳಕ್ಕಾಗಿ ಇ–ಹರಾಜು 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ಇರುತ್ತದೆ.		
	ಬಿಡ್ ಹೆಚ್ಚಳದ ಮೊತ್ತ ರೂ.20 ಲಕ್ಷಗಳು		

ಐಬಿಸಿ, 2006 ಮತ್ತು ಸರ್ಫೇಸಿ ಕಾಯ್ದೆ 2002ರ ಅಡಿಯಲ್ಲಿ, ಸಿಡಿ ಮತ್ತು ಅಡಮಾನದ ಆಸ್ತಿಗೆ ಸೇರಿದ ಅಡಮಾನ ಆಸ್ತಿಯು ಶ್ರೀ. ರಾಕೇಶ್ ಶರ್ಮಾ (ಬ್ಯಾಂಕ್‌ಗಳ ಒಕ್ಕೂಟಕ್ಕೆ ವೈಯಕ್ತಿಕ ಜಾಮೀನುದಾರರು) ರವರಿಗೆ ಸೇರಿದ ಮುಕ್ತ–ಹಿಡುವಳಿ ಆಸ್ತಿ ವಸೂಲಾತಿ ಮೊತ್ತ ರೂ.36,63,58,49,663.76 ಬಡ್ಡಿ ಮತ್ತು ಅದರ ಮೇಲಿನ ಶುಲ್ಕಗಳು ಸೇರಿದಂತೆ– ಸಿಡಿ ಎನ್‌ಸಿಎಲ್‌ಟಿ ಪ್ರವೇಶ ದಿನಾಂಕ : 19–12–2023.

ಇ–ಹರಾಜಿನ ನಿಯಮಗಳು ಮತ್ತು ನಿಬಂಧನೆಗಳು

1. ಐಬಿಸಿ 2016 ಮತ್ತು ಸರ್ಫೇಸಿ ಕಾಯಿದೆ, 2002 ರ ನಿಬಂಧನೆಗಳ ಅಡಿಯಲ್ಲಿ ಮತ್ತು ಜಂಟಿ ಇ–ಹರಾಜಿನ ಮೂಲಕ ಹರಾಜು ಮಾರಾಟವನ್ನು ಲಿಕ್ವಿಡೇಟರ್ ಮತ್ತು ಅಧಿಕೃತ ಅಧಿಕಾರಿ ನಡೆಸುತ್ತಿದ್ದಾರೆ. ಈ ಜಂಟಿ ಇ–ಹರಾಜು/ಬಿಡ್ಡಿಂಗ್ ವೆಬ್‌ಸೈಟ್ https://nbid.nesl.co.in/app/login ಮೂಲಕ "ಆನ್‌ಲೈನ್ ಎಲೆಕ್ಟ್ರಾನಿಕ್ ಮೋಡ್" ಮೂಲಕ ಮಾತ್ರ ಇರುತ್ತದೆ. 2. ಹರಾಜನ್ನು ಬಿಡ್ ಡಾಕ್ಯುಮೆಂಟ್‌ನ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತದೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಬಿಡ್ದಾರರು ವೆಬ್‌ಸೈಟ್ www.basecorp.in ಮತ್ತು ಸೇವಾ ಪೂರೈಕೆದಾರರ ವೆಬ್‌ಸೈಟ್ https://nesl.co.in/auction-notices-under-ibc ಮೂಲಕ ಹೋಗಬಹುದು. / ಬಿಡ್ ದಾಖಲೆಗಳಿಗಾಗಿ, ಹರಾಜಿಗಾಗಿ/ಬಿಡ್ ಫಾರ್ಮ್ ಪಡೆಯಲು ಇರಿಸಲಾದ ಸುರಕ್ಷಿತ ಆಸ್ತಿಗಳ ವಿವರಗಳು. 3. ಬಿಡ್ದಾರರು ಜಂಟಿ ಇ–ಹರಾಜಿನಲ್ಲಿ ತಮ್ಮ ಸ್ವಂತ ಕಚೇರಿಗಳು/ತಮ್ಮ ಆಯ್ಕೆಯ ಸ್ಥಳದಿಂದ ಉಲ್ಲೇಖ/ಬಿಡ್ಡಿಂಗ್‌ನಲ್ಲಿ ಭಾಗವಹಿಸಬಹುದು. ಇಂಟರ್ನೆಟ್ ಸಂಪರ್ಕವನ್ನು ಪ್ರತಿಯೊಬ್ಬ ಬಿಡ್ದಾರನು ಸ್ವತಃ/ಸ್ವತಃ ವ್ಯವಸ್ಥೆಗೊಳಿಸಬೇಕು. ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಲಿಕ್ವಿಡೇಟರ್/ಅಧಿಕೃತ ಅಧಿಕಾರಿ/ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ವಿವರಗಳು, ಸಹಾಯ, ಕಾರ್ಯವಿಧಾನ ಮತ್ತು ಇ–ಹರಾಜಿನ ಆನ್‌ಲೈನ್ ತರಬೇತಿಗಾಗಿ, ನಿರೀಕ್ಷಿತ ಬಿಡ್‌ದಾರರು Ms. ಗುಂಜನ್ ನರುಲಾ, +91–84470 18554, ಇ–ಮೇಲ್ : gunjann@nesl.co.in ಇವರನ್ನು ಸಂಪರ್ಕಿಸಬಹುದು ಅಥವಾ ಶ್ರೀ ಅರವೆಂತನ್ +91–93846 76709 ಇ–ಮೇಲ್: araventhanse@nesl.co.in. ಸ್ವತ್ತು/ಮಾರಾಟಕ್ಕೆ ಸಂಬಂಧಿಸಿದಂತೆ ದಯವಿಟ್ಟು ಶ್ರೀ ಕೊಂಡೂರು ಪ್ರಶಾಂತ್ ರಾಜು, ಲಿಕ್ವಿಡೇಟರ್ +91–9980591019 ಇವರನ್ನು ಸಂಪರ್ಕಿಸಿ ಅಥವಾ basecliquidator@gmail.com ಗೆ ಇ–ಮೇಲ್ ಮಾಡಿ. ಸುರಕ್ಷಿತ ಸಾಲದಾತರಿಗೆ ಸಂಬಂಧಿಸಿದ ವೈಯಕ್ತಿಕ ಜಾಮೀನುದಾರರು ದಯವಿಟ್ಟು ಶ್ರೀ ಹರ್ಷ್ ಮಜಿಯಾ +91–7506107562 ಇರವರನ್ನು ಸಂಪರ್ಕಿಸಿ, ಅಥವಾ harsh.magia@phoenixarc.co.in ಗೆ ಇ–ಮೇಲ್ ಮಾಡಿ ಮತ್ತು/ ಅಥವಾ ಶ್ರೀ ಬ್ರಿಜ್ ಕಿಶೋರ್ ಮೊಬೈಲ್ +91–9828528909 ಅಥವಾ brijkishore.bilochi@idbi.co.in ಗೆ ಇ–ಮೇಲ್ ಮಾಡಿ. 4. ಬಿಡ್‌ದಾರರು ಹರಾಜಿಗಾಗಿ/ಬಿಡ್ ಫಾರ್ಮ್ ಪಡೆಯಲು ಇರಿಸಲಾಗಿರುವ ಸುರಕ್ಷಿತ ಆಸ್ತಿಯ ವಿವರಗಳನ್ನು ಪರಿಶೀಲಿಸಲು "ಡೇಟಾ ರೂಮ್" ಲಿಂಕ್ ಮೂಲಕ ಹೋಗಬಹುದು. 5. ಇ–ಹರಾಜನ್ನು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದಂದು ನಡೆಸಲಾಗುತದೆ, ಮೇಲೆ ತಿಳಿಸಲಾದ ಸುರಕ್ಷಿತ ಸ್ವತ್ತನ್ನು ಆನ್‌ಲೈನ್–ಇ–ಹರಾಜಿನ ಮೂಲಕ "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಮತ್ತು "ಎಲ್ಲಿ ಏನಿದೆಯೋ ಹಾಗೆ" ಮತ್ತು "ಯಾವುದೇ ಆಧಾರವಿಲ್ಲದೆ" ಷರತ್ತಿನ ಮೂಲಕ ಮಾರಾಟ ಮಾಡಲಾಗುತದೆ. 6. ಎಲ್ಲಾ ಉದ್ದೇಶಿತ ಖರೀದಿದಾರರು/ಬಿಡ್‌ದಾರರು ತಮ್ಮ ಹೆಸರನ್ನು ಬಿಡ್‌ದಾರರಾಗಿ ಮೇಲೆ ತಿಳಿಸಲಾದ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದಂದು ಜಂಟಿ ಇ–ಹರಾಜಿನಲ್ಲಿ ಭಾಗವಹಿಸಲು ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. 7. ಜಂಟಿ ಇ–ಹರಾಜಿನಲ್ಲಿ ಭಾಗವಹಿಸಲು, ಉದ್ದೇಶಿತ ಖರೀದಿದಾರರು/ಬಿಡ್‌ದಾರರು ಸುರಕ್ಷಿತ ಸ್ವತ್ತಿನ ರಿಸರ್ವ್ ಬೆಲೆಯ 10% ನಷ್ಟು ಮರುಪಾವತಿಸಬಹುದಾದ ಮುಂಗಡ ಠೇವಣಿ ಮೊತ್ತ ಪಾವತಿಯ ವಿವರಗಳನ್ನು ಮತ್ತು ಪ್ಯಾನ್‌ಕಾರ್ಡ್, ಆಧಾರ್ ಕಾರ್ಡ್, ಬೋರ್ಡ್‌ನ ಪ್ರತಿಗಳನ್ನು ಸಲ್ಲಿಸಬೇಕಾಗುತದೆ. ಟೆಂಡರ್ ಡಾಕ್ಯುಮೆಂಟ್‌ಗಳಲ್ಲಿ ವಿವರಿಸಲಾದ ನಿಯಮಗಳ ಪ್ರಕಾರ ಕಂಪನಿ ಮತ್ತು ವಿಳಾಸ ಪುರಾವೆಯ ಸಂದರ್ಭದಲ್ಲಿ ನಿರ್ಣಯಗಳು, ಮೇಲಿನ ಟೇಬಲ್‌ನಲ್ಲಿ ತಿಳಿಸಿರುವಂತೆ ಕೊನೆಯ ದಿನಾಂಕದಂದು ಅಥವಾ ಮೊದಲು. 8. ನಿರೀಕ್ಷಿತ/ಉದ್ದೇಶಿತ ಬಿಡ್ದಾರನು ದಿವಾಳಿತನ ಮತ್ತು ದಿವಾಳಿತನ ಸಂಹಿತೆ, 2016 ರ ಸೆ.29 (ಎ) ರ ನಿಬಂಧನೆಗಳ ಪ್ರಕಾರ ಅವನು/ಅವಳು ಅನರ್ಹವಾಗಿಲ್ಲ ಎಂಬ ಭರವಸೆಯನ್ನು ಒದಗಿಸಬೇಕು ಮತ್ತು ಕೆವೈಸಿ ದಾಖಲೆಗಳೊಂದಿಗೆ ಒದಗಿಸಲು ವಿಫಲರಾದರೆ ಸ್ವಯಂಚಾಲಿತವಾಗಿ ಅನರ್ಹಗೊಳಿಸಲಾಗುತದೆ ಮತ್ತು ಸಲ್ಲಿಸಿದ ಬಿಡ್ ಅನ್ನು ತಿರಸ್ಕರಿಸಲಾಗುತ್ತದೆ. 9. ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ಪ್ರಕಾರ, ಯಶಸ್ವಿ ಖರೀದಿದಾರರು/ಬಿಡ್ದಾರರು ಬಿಡ್‌ನಲ್ಲಿ ನಮೂದಿಸಿರುವ ಖಾತೆಗೆ ಆರ್‌ಟಿಜಿಎಸ್/ಎನ್ಇಎಫ್‌ಟಿ ಮೂಲಕ ಅವರ/ಅದರ ಕೊಡುಗೆಯ 25% (ಇಎಮ್‌ಡಿ ಸೇರಿದಂತೆ) ಅನ್ನು ಜಮಾ ಮಾಡಬೇಕು. ಮೇಲೆ ತಿಳಿಸಲಾದ ಹರಾಜಿನ ದಿನಾಂಕದಂದು ಬ್ಯಾಂಕಿಂಗ್ ಸಮಯ ಮುಗಿಯುವ ಮೊದಲು ಅಥವಾ ಮುಂದಿನ ಕೆಲಸದ ದಿನಕ್ಕಿಂತ ನಂತರದ ದಾಖಲೆ, ಯಾವ ಠೇವಣಿಯನ್ನು ಲಿಕ್ವಿಡೇಟರ್/ಅಧಿಕೃತ ಅಧಿಕಾರಿ [illegible]

[illegible] ಲಿಕ್ವಿಡೇಟರ್ / ಅಧಿಕೃತ ಅಧಿಕಾರಿಯ ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ. ಲಿಕ್ವಿಡೇಟರ್/ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೈಮ್‌ಗಳು/ಹಕ್ಕುಗಳು/ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ. ಮಾರಾಟಕ್ಕೆ ಇಟ್ಟಿರುವ ಸುರಕ್ಷಿತ ಆಸ್ತಿಯ ಬಗ್ಗೆ ಆನ್‌ಲೈನ್ ಬಿಡ್ ಸಲ್ಲಿಸಿದ ನಂತರ ಯಾವುದೇ ರೀತಿಯ ಹಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 21. ಪತ್ರಿಕೆಯಲ್ಲಿ ಪ್ರಕಟವಾದ ಜಂಟಿ ಇ–ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಲಿಕ್ವಿಡೇಟರ್ / ಅಧಿಕೃತ ಅಧಿಕಾರಿಯ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ, ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಲಿಕ್ವಿಡೇಟರ್ / ಅಧಿಕೃತ ಅಧಿಕಾರಿ ಯವರ ಜವಾಬ್ದಾರರಾಗಿರುವುದಿಲ್ಲ. 22. ಈವೆಂಟ್‌ನಲ್ಲಿ, ಇಲ್ಲಿ ನಿಗದಿಪಡಿಸಲಾದ ಜಂಟಿ ಇ–ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ಲಿಕ್ವಿಡೇಟರ್/ಅಧಿಕೃತ ಅಧಿಕಾರಿಯು ಭದ್ರತಾ ಆಸಕ್ತಿಯ (ಜಾರಿ) ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಹೊಂದಿರುತ್ತಾರೆ.) ನಿಯಮಗಳು, 2002 ಮತ್ತು ಸರ್ಫೇಸಿ ಕಾಯಿದೆ, 2002. ಮತ್ತು/ಅಥವಾ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ 32 (ಎಫ್) ನಿಯಮಗಳು, 2016 ರ ದಿವಾಳಿತನ ಮತ್ತು ದಿವಾಳಿತನ, 2016 ("ಐಬಿಸಿ") ವಿಭಾಗ 35(ಎಫ್) ಅಡಿಯಲ್ಲಿ ದಿವಾಳಿತನದ ಎಸ್ಟೇಟ್‌ನ ಭಾಗವಾಗಿದೆ ("ಐಬಿಸಿ") ನಿಯಂತ್ರಣ 33 ಮತ್ತು ಐಬಿಸಿ, 2016 ರ ಅಡಿಯಲ್ಲಿ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ 32 ರ ನಿಯಮಗಳು (ದಿವಾಳಿಕರಣ ಪ್ರಕ್ರಿಯೆ) ನಿಯಮಗಳು, 2016) ("ಲಿಕ್ವಿಡೇಶನ್ ನಿಯಮಗಳು").

ಸಹಿ/–

ಶ್ರೀ ಕೊಂಡೂರು ಪ್ರಶಾಂತ್ ರಾಜು	ಶ್ರೀ ಹರ್ಷ ಮಾಗಿಯಾ
ಬೇಸ್ ಕಾರ್ಪೊರೇಷನ್ ಲಿಮಿಟೆಡ್ ಲಿಕ್ವಿಡೇಟರ್ ವಿಷಯದಲ್ಲಿ	ಫೀನಿಕ್ಸ್ ಎಆರ್‌ಸಿ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಳು ಫೀನಿಕ್ಸ್ ಟ್ರಸ್ಟ್ FY16-23 ರ ಟ್ರಸ್ಟಿಯಾಗಿ ಇದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ
ನೋಂದಣಿ ಸಂಖ್ಯೆ. IBBI/IPA-002/IP-N00708/2018-2019/12200	ಬ್ಯಾಂಕ್‌ಗಳ ಒಕ್ಕೂಟದ ಪ್ರಮುಖ ಪ್ರತಿನಿಧಿ

ದಿನಾಂಕ: 14–10–2024 । ಸ್ಥಳ: ಬೆಂಗಳೂರು ಮತ್ತು ಸೋಲನ್

ಸತ್ಯಜಿತ್ ರೇ ಫಿಲಂ & ಟೆಲಿವಿಷನ್ ಇನ್‌ಸ್ಟಿಟ್ಯೂಟ್, ಕೋಲ್ಕತ
(ಭಾರತ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಅಡಿಯಲ್ಲಿನ ಒಂದು ಶೈಕ್ಷಣಿಕ ಸಂಸ್ಥೆ)

ಉದ್ಯೋಗ ಪ್ರಕಟಣೆ

ಸತ್ಯಜಿತ್ ರೇ ಫಿಲಂ & ಟೆಲಿವಿಷನ್ ಇನ್‌ಸ್ಟಿಟ್ಯೂಟ್, ಕೋಲ್ಕತ ಇವರು ಕೆಳಗಿನ ಹುದ್ದೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ತೊಡಗಿಸಿಕೊಳ್ಳಲು ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:–

ಕ್ರ.ಸಂ.	ಹುದ್ದೆಯ ಹೆಸರು	ವೇತನ (ಮಾಸಿಕ ಕ್ರೋಢಿಕೃತ)
1)	ಕನ್ಸಲ್ಟಂಟ್ (ಪ್ಲೇಸ್‌ಮೆಂಟ್)	ರೂ. 99,000/–
2)	ಕನ್ಸಲ್ಟಂಟ್ (ಇಂಕುಬೇಶನ್ ಸೆಂಟರ್)	ರೂ. 99,000/–
3)	ಅಕಾಡೆಮಿಕ್ ಕನ್ಸಲ್ಟಂಟ್ (ಯುಜಿಸಿ)	ರೂ. 99,000/–
4)	ಅಡ್ಮಿನಿಸ್ಟ್ರೇಟಿವ್ ಕನ್ಸಲ್ಟಂಟ್ (ಯುಜಿಸಿ)	ರೂ. 99,000/–
5)	ಕನ್ಸಲ್ಟಂಟ್ (ಅಡ್ಮಿನ್)	ರೂ. 50,000/–
6)	ಕನ್ಸಲ್ಟಂಟ್–ಪಬ್ಲಿಕ್ ರಿಲೇಶನ್	ರೂ. 50,000/–
7)	ಔಟ್‌ರೀಚ್ ಆಫೀಸರ್	ರೂ. 50,000/–
8)	ಕನ್ಸಲ್ಟಂಟ್ (ಆಫಿಷಿಯಲ್ ಲಾಂಗ್ವೇಜ್)	ರೂ. 50,000/–
9)	ಕನ್ಸಲ್ಟಂಟ್ (ಫೈನಾನ್ಸ್ & ಆಡಿಟ್)	ರೂ. 50,000/–
10)	ಕನ್ಸಲ್ಟಂಟ್ (ಸಿವಿಲ್)	ರೂ. 50,000/–
11)	ಕನ್ಸಲ್ಟಂಟ್ (ಇಲೆಕ್ಟ್ರಿಕಲ್)	ರೂ. 50,000/–
12)	ಲೀಗಲ್ ಅಡ್ವೈಸರ್ (ಲಾಯರ್/ಲೀಗಲ್ ಫರ್ಮ್ ಎಂಪಾನೆಲ್‌ಮೆಂಟ್)	ಕೇಸ್ ಟು ಕೇಸ್ ಆಧಾರದಲ್ಲಿ ವೇತನವನ್ನು ನಿರ್ಧರಿಸಲಾಗುತ್ತದೆ
13)	ಅಕಾಡೆಮಿಕ್ ಕೋಆರ್ಡಿನೇಟರ್	ರೂ. 99,000/–

ವಿವರಗಳಿಗಾಗಿ ಲಾಗಾನ್ ಮಾಡಿ **www.srfti.ac.in**

cbc22107/12/0013/2425

ಮೆಕ್‌ಡೊವೆಲ್ ಹೋಲ್ಡಿಂಗ್ಸ್ ಲಿಮಿಟೆಡ್ (CIRP ನಲ್ಲಿ)

ನೋಂದಾಯಿತ ಕಚೇರಿ: 104, ಮೊದಲ ಮಹಡಿ, ರಹೇಜಾ ಚೇಂಬರ್ಸ್, 12 ಮ್ಯೂಸಿಯಂ ರಸ್ತೆ, ಬೆಂಗಳೂರು - 560001.
ದೂರವಾಣಿ: +91 6361136783 , ವೆಬ್‌ಸೈಟ್– www.mcdowellholdings.co.in
ಕಾರ್ಪೊರೇಟ್ ಗುರುತಿನ ಸಂಖ್ಯೆ L05190KA2004PLCO33485

ಕಂಪನಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ ಮತ್ತು ಇ–ವೋಟಿಂಗ್

ಕಂಪನಿಯ 20ನೇ ವಾರ್ಷಿಕ ಸಾಮಾನ್ಯ ಸಭೆ (AGM) ವೀಡಿಯೊ ಕಾನ್ಫರೆನ್ಸಿಂಗ್ ("VC")/ಇತರ ಆಡಿಯೋ–ವಿಷುಯಲ್ ಮೀನ್ಸ್ ("OAVM") ಮೂಲಕ ಗುರುವಾರ, 7ನೇ ನವೆಂಬರ್, 2024 ರಂದು 11:30 AM IST ರಂದು ನಡೆಯಲಿದೆ ಎಂದು ಈ ಸೂಚನೆಯನ್ನು ನೀಡಲಾಗಿದೆ, ಕಂಪನಿಗಳ ಕಾಯಿದೆ, 2013ರ ಎಲ್ಲಾ ಅನ್ವಯವಾಗುವ ನಿಬಂಧನೆಗಳು ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("SEBI") (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ('LODR') ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ 08ನೇ ಏಪ್ರಿಲ್, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ.14/2020 ರೊಂದಿಗೆ ಓದಿ ಸಾಮಾನ್ಯ ಸುತ್ತೋಲೆ ಸಂಖ್ಯೆ. 17/2020 ದಿನಾಂಕ 13ನೇ ಏಪ್ರಿಲ್, 2020 ಮತ್ತು ಸಾಮಾನ್ಯ ಸುತ್ತೋಲೆ ನಂ. 20/2020 ದಿನಾಂಕ 05ನೇ ಮೇ, 2020 ಜನವರಿ 13, 2021ರ MCA ಸುತ್ತೋಲೆ ಸಂಖ್ಯೆ 02/2021ರ ನಂತರ, MCA ಸುತ್ತೋಲೆ ಸಂಖ್ಯೆ 02/2021 ದಿನಾಂಕ ಡಿಸೆಂಬರ್ 14, 2021, MCA ಸುತ್ತೋಲೆ ಸಂಖ್ಯೆ. 02/2021 ದಿನಾಂಕ ಮೇ 05, 2022, ಜನವರಿ 05 2023 ಮತ್ತು SEBI ಸುತ್ತೋಲೆ ದಿನಾಂಕ 12ನೇ ಮೇ, 2020 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಮತ್ತು SEBI ("ಸಂಬಂಧಿತ ಸುತ್ತೋಲೆಗಳು") ಹೊರಡಿಸಿದ ಇತರ ಅನ್ವಯವಾಗುವ ಸುತ್ತೋಲೆಗಳು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆಯೇ ಎಜಿಎಂ ಕರೆ ಮಾಡುವ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ವಹಿವಾಟು ಮಾಡಲು. ಸದಸ್ಯರು VC/OAVM ಮೂಲಕ AGMಗೆ ಹಾಜರಾಗಲು ಸಾಧ್ಯವಾಗುತ್ತದೆ. VC/OAVM ಸೌಲಭ್ಯದ ಮೂಲಕ ಭಾಗವಹಿಸುವ ಸದಸ್ಯರನ್ನು ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 103ರ ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಸಂಬಂಧಿತ ಸುತ್ತೋಲೆಗಳಿಗೆ ಅನುಸಾರವಾಗಿ, 2023-24ರ ಹಣಕಾಸು ವರ್ಷದ ಎಜಿಎಂ ಮತ್ತು ಹಣಕಾಸು ಹೇಳಿಕೆಗಳ ಸೂಚನೆ, ಜೊತೆಗೆ ರೆಸಲ್ಯೂಶನ್ ವೃತ್ತಿಪರರ ವರದಿ, ಲೆಕ್ಕಪರಿಶೋಧಕರ ವರದಿ ಮತ್ತು ಅದಕ್ಕೆ ಲಗತ್ತಿಸಬೇಕಾದ ಇತರ ದಾಖಲೆಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಲಾಗಿದೆ. ಕಂಪನಿ/ಠೇವಣಿ ಸಹಭಾಗಿ (ಗಳು) ನೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಕಂಪನಿ ಮೇಲೆ ಹೇಳಿದ ದಾಖಲೆಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ಅಂದರೆ www.mcdowellholdings.co.in ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ ಅಂದರೆ, ಕ್ರಮವಾಗಿ BSE ಮತ್ತು NSEನ www.bseindia.com & www.nseindia.com ನಲ್ಲಿ ಲಭ್ಯವಿದೆ.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 108ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಗಳ ನಿರ್ವಹಣೆ ಮತ್ತು ಆಡಳಿತ ನಿಯಮಗಳು 2014ರ ನಿಯಮ 20 ರೊಂದಿಗೆ ಓದಲಾಗಿ ಮತ್ತು SEBI ಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು 2015 ಮತ್ತು ಕಾರ್ಯದರ್ಶಿಯ ಮಾನದಂಡಗಳು (SS2) , ಕಂಪನಿಯು ತನ್ನ ಸದಸ್ಯರಿಗೆ ವಿದ್ಯುನ್ಮಾನ ಸೌಲಭ್ಯವನ್ನು (ರಿಮೋಟ್ ಇ–ವೋಟಿಂಗ್) ಒದಗಿಸುವ ಮೂಲಕ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಎಲ್ಲಾ ವ್ಯವಹಾರಗಳನ್ನು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಮೂಲಕ ವಹಿವಾಟು ಮಾಡಲು ಸಂತೋಷವಾಗಿದೆ.

ಎಲ್ಲಾ ಸದಸ್ಯರಿಗೆ ತಿಳಿಸುವುದೇನೆಂದರೆ:–

(ಎ) ರಿಮೋಟ್ ಇ–ವೋಟಿಂಗ್ ಅಥವಾ ಎಜಿಎಂನಲ್ಲಿ ಮತ ಚಲಾಯಿಸುವ ಮೂಲಕ ಮತ ಚಲಾಯಿಸಲು ಸದಸ್ಯರ ಅರ್ಹತೆಯನ್ನು ನಿರ್ಧರಿಸಲು ಕಟ್ ಆಫ್ ದಿನಾಂಕವು 1ನೇ ನವೆಂಬರ್, 2024.

(ಬಿ) ರಿಮೋಟ್ ಇ–ವೋಟಿಂಗ್ 4ನೇ ನವೆಂಬರ್, 2024 ರಂದು 09:00 ISTಕ್ಕೆ ಪ್ರಾರಂಭವಾಗುತ್ತದೆ ಮತ್ತು 6ನೇ ನವೆಂಬರ್, 2024 ರಂದು ಸಂಜೆ IST 05:00ಕ್ಕೆ ಕೊನೆಗೊಳ್ಳುತ್ತದೆ. ಹೇಳಿದ ದಿನಾಂಕ ಮತ್ತು ಸಮಯವನ್ನು ಮೀರಿ ರಿಮೋಟ್ ಇ–ವೋಟಿಂಗ್ ಅನ್ನು ಅನುಮತಿಸಲಾಗುವುದಿಲ್ಲ.

(ಸಿ) ಇಮೇಲ್ ಕಳುಹಿಸುವ ದಿನಾಂಕದ ನಂತರ ಅಂದರೆ 15ನೇ ಅಕ್ಟೋಬರ್, 2024ರ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡಿರುವ ಮತ್ತು ಕಂಪನಿಯ ಸದಸ್ಯರಾಗಿರುವ ವ್ಯಕ್ತಿ ಮತ್ತು ಕಟ್ ಆಫ್ ದಿನಾಂಕದಂದು ಅಂದರೆ, 1ನೇ ನವೆಂಬರ್, 2024ರಂದು ಷೇರುಗಳನ್ನು ಹೊಂದಿರುವವರು evoting@cdsl.co.in ನಲ್ಲಿ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಮಾಡುವ ವಿಧಾನವನ್ನು ಪಡೆಯಬಹುದು. ಆದಾಗ್ಯೂ, ವ್ಯಕ್ತಿಯು ಈಗಾಗಲೇ ಇ–ವೋಟಿಂಗ್‌ಗಾಗಿ CDSL ನಲ್ಲಿ ನೋಂದಾಯಿಸಿದ್ದರೆ ಅವನು ತನ್ನ ಅಸ್ತಿತ್ವದಲ್ಲಿರುವ ಲಾಗಿನ್ ಐಡಿ/ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಬಳಸಿ, ಇ ಮತದಾನದ ಮೂಲಕ ಮತ ಚಲಾಯಿಸುವುದು.

(ಡಿ) ಡಿಮೆಟೀರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ / ನವೀಕರಿಸದ, ಅವರು ತಮ್ಮ ಡಿಮ್ಯಾಟ್ ಖಾತೆಗಳನ್ನು ನಿರ್ವಹಿಸುವ ಡಿಪಾಸಿಟರಿ ಭಾಗವಹಿಸುವವರೊಂದಿಗೆ ಅವರ ಇಮೇಲ್ ವಿಳಾಸಗಳನ್ನು ನೋಂದಾಯಿಸಿ/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ.

(ಇ) AGMನ ಸೂಚನೆಯು ಕಂಪನಿಯ ವೆಬ್‌ಸೈಟ್ www.mcdowellholdings.co.in ಮತ್ತು CDSL ವೆಬ್‌ಸೈಟ್ https://www.evotingindia.com ಲಭ್ಯವಿದೆ.

(ಎಫ್) ವಿದ್ಯುನ್ಮಾನ ಮತದಾನದ ಕಾರ್ಯವಿಧಾನವು 20ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಮತ್ತು ಕಳುಹಿಸಿದ ಇಮೇಲ್‌ನಲ್ಲಿ ಲಭ್ಯವಿದೆ ಸದಸ್ಯರಿಗೆ ಮತ್ತು CDSL ವೆಬ್‌ಸೈಟ್ https://www.evotingindia.com ನಲ್ಲಿ ಮತ ಹಾಕುವುದಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು evoting@cdsl.co.in ಮತ್ತು/ಅಥವಾ bglsta@integratedindia.in ಗೆ ಇಮೇಲ್ ಮಾಡಬಹುದು.

(ಜಿ) ಎಜಿಎಂನ ಸೂಚನೆಯಲ್ಲಿ ಸೂಚಿಸಲಾದ ಎಲ್ಲಾ ಟಿಪ್ಪಣಿಗಳನ್ನು ಮತ್ತು ನಿರ್ದಿಷ್ಟವಾಗಿ, ಎಜಿಎಂಗೆ ಸೇರುವ ಸೂಚನೆ, ರಿಮೋಟ್ ಇ–ವೋಟಿಂಗ್ ಮೂಲಕ ಅಥವಾ ಎಜಿಎಂ ಸಮಯದಲ್ಲಿ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನಗಳನ್ನು ಎಚ್ಚರಿಕೆಯಿಂದ ಓದಲು ಸದಸ್ಯರನ್ನು ವಿನಂತಿಸಲಾಗಿದೆ.

ಮ್ಯಾಕ್‌ಡೊವೆಲ್ ಹೋಲ್ಡಿಂಗ್ಸ್ ಲಿಮಿಟೆಡ್‌ಗಾಗಿ (CIRP ನಲ್ಲಿ)
ಸಹಿ/–
ಕೊಂಡೂರು ಪ್ರಶಾಂತ್ ರಾಜು,
ವೃತ್ತಿಪರ ನಿರ್ಣಯಾತ್ಮಕರು
IBBI/IPA-002/IP-N00708/2018-19/12200

ಸ್ಥಳ : ಬೆಂಗಳೂರು
ದಿನಾಂಕ : 14.10.2024

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE SELLING

Farm House/ Land/ Resorts

Multiple Locations

NANDI HILLS road 1/2 acre gated ekhata 15 furnished rooms 9.25Cr, 60x43 plot 50L Ph: 9677002197

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನೈಋತ್ಯ ರೈಲ್ವೆ
ಬೆಂಗಳೂರು ವಿಭಾಗದಲ್ಲಿ ಪಾರ್ಸಲ್ ಸ್ಥಳ, ಪಾರ್ಕಿಂಗ್ & ಬಿಟ್ ಆಫ್ ಹೋಂ ಜಾಹೀರಾತು/ಪ್ರಕಟಣೆಗಳ ಗುತ್ತಿಗೆಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ದರ್‌ಗಳನ್ನು ಆಹ್ವಾನಿಸಿದ್ದಾರೆ:

1. ಪಾರ್ಸಲ್‌ಗಳು: 24.10.2024
2. ಪಾರ್ಕಿಂಗ್ & ಪಾವತಿ ಮತ್ತು ಬಳಕೆ: 15.10.2024, 21.10.2024, 29.10.2024, 30.10.2024
3. ಜಾಹೀರಾತು: 14.10.2024, 15.10.2024, 29.10.2024, 30.10.2024
4. ಎಟಿಎಂ: 29.10.2024
5. ವಿವಿಧ: 14.10.2024, 15.10.2024, 28.10.2024
6. ಕೇಟರಿಂಗ್ & ಎಂಪಿಎಸ್ ಸ್ಟಾಲ್‌ಗಳು: 14.10.2024, 15.10.2024, 16.10.2024, 17.10.2024, 18.10.2024, 21.10.2024, 22.10.2024, 23.10.2024, 24.10.2024, 25.10.2024, 28.10.2024, 29.10.2024, 30.10.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಬೆಂಗಳೂರು
PUB/492/AAMO/PRB/SWR/2024-25
South Western Railway - SWR | SWRRLY | SWRRLY

ಬಸ್ ನಿಲ್ದಾಣದ ಹೋಟೆಲ್, ಮಳಿಗೆಗಳ ಮುಂದೆ ತೆರೆದಿಟ್ಟ ತಿಂಡಿ ತಿನಿಸುಗಳು; ಕಣ್ಮರೆಯಾದ ಆಹಾರ ಸುರಕ್ಷತೆ

ಕೆಂಪೇಗೌಡ ನಿಲ್ದಾಣ; ರೋಗ ಪ್ರಸರಣದ ತಾಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸದಾ ಜನದಟ್ಟಣೆಯ ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿಯ ಕೆಂಪೇಗೌಡ ಬಸ್‌ನಿಲ್ದಾಣ ರೋಗರುಜಿನಗಳನ್ನು ಹರಡುವ ಪ್ರಮುಖ ತಾಣವಾಗಿದೆ. ನಿತ್ಯವೂ ಲಕ್ಷಾಂತರ ಮಂದಿಯ ಓಡಾಟದ ತಾಣವಾಗಿರುವ ಬಸ್ ನಿಲ್ದಾಣದಲ್ಲಿ ಆಹಾರ ಸುರಕ್ಷತೆ ಕಣ್ಮರೆಯಾಗಿದೆ.

ರಾಜಧಾನಿಯಿಂದ ರಾಜ್ಯದ ಬಹುತೇಕ ಭಾಗಗಳಿಗೆ ತೆರಳುವ ಪ್ರಯಾಣಿಕರಿಗೆ ಇದೇ ಪ್ರಮುಖ ನಿಲ್ದಾಣ. ಒಂದೇ ಸೂರಿನಡಿ ಮೂರು ಟರ್ಮಿನಲ್. ಕೊಂಚ ದೂರದಲ್ಲಿ ಮತ್ತೊಂದು 'ಶಾಂತಲಾ' ಟರ್ಮಿನಲ್ ಇದೆ. ತುಮಕೂರು, ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಪುಣೆ ಮಾರ್ಗದ ಬಸ್‌ಗಳು ಟರ್ಮಿನಲ್ ಒಂದರಲ್ಲಿ, ತುಮಕೂರು, ಶಿವಮೊಗ್ಗ, ಸಾಗರ, ಶಿರಸಿ, ತೀರ್ಥಹಳ್ಳಿ, ಚಿಕ್ಕಮಗಳೂರು ಮೊದಲಾದ ಭಾಗಗಳಿಗೆ ತೆರಳುವ ಬಸ್‌ಗಳು ಟರ್ಮಿನಲ್ ಎರಡರಲ್ಲಿ, ಟರ್ಮಿನಲ್ ಎರಡರ 'ಎ' ಭಾಗದಲ್ಲಿ ಹಾಸನ, ಸಕಲೇಶಪುರ, ಮಂಗಳೂರು, ಕೊಡಗು, ಧರ್ಮಸ್ಥಳ ಮೊದಲಾದ ಸ್ಥಳಗಳಿಗೆ ತೆರಳುವ ಬಸ್‌ಗಳು ನಿಲುಗಡೆ ಮಾಡುತ್ತವೆ. ನಿತ್ಯವೂ ಸರಾಸರಿ ಒಂದು ಲಕ್ಷ ಜನರು ಈ ನಿಲ್ದಾಣಗಳ ಮೂಲಕ ತೆರಳುತ್ತಾರೆ.

ಟರ್ಮಿನಲ್ ಒಂದರಲ್ಲಿ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಸಾರಿಗೆ ಬಸ್ ನಿಲುಗಡೆಗೂ ಅವಕಾಶ ಮಾಡಿಕೊಡಲಾಗಿದೆ. ಶಾಂತಲಾ ಟರ್ಮಿನಲ್‌ನಲ್ಲಿ ತಮಿಳುನಾಡು, ಕೋಲಾರ, ಚಿಂತಾಮಣಿ ಮೊದಲಾದ ಸ್ಥಳಗಳಿಗೆ ತೆರಳುವ ಬಸ್‌ಗಳು ನಿಲುಗಡೆ ಮಾಡುತ್ತವೆ.

ಈ ಎಲ್ಲ ನಿಲ್ದಾಣಗಳಲ್ಲೂ ಹೋಟೆಲ್‌ಗಳು, ವಿವಿಧ ತಿನಿಸುಗಳ ಮಾರಾಟ ಮಳಿಗೆಗಳು ಇವೆ. ಬಹುತೇಕ ಹೋಟೆಲ್, ತಿನಿಸುಗಳ ಮಳಿಗೆಗಳಲ್ಲಿ ಸಿದ್ಧ ಆಹಾರ, ಸಿಹಿ ತಿನಿಸುಗಳನ್ನು ಮುಚ್ಚಿಡದೇ ಮುಕ್ತವಾಗಿ ತೆರೆದು ಇಟ್ಟಿದ್ದಾರೆ. ನಿಲ್ದಾಣದ ಒಳಗೆ ವೇಗವಾಗಿ ಬರುವ, ತಿರುವು ತೆಗೆದುಕೊಳ್ಳುವ, ಹಿಂಬದಿ ಚಲಿಸುವ ಬಸ್‌ಗಳಿಂದ ಹೊರಡುವ ದೂಳು ನೇರವಾಗಿ ಇಂತಹ ತೆರೆದಿಟ್ಟ ತಿನಿಸುಗಳ ಮೇಲೆ ಕೂರುತ್ತದೆ. ಮುಂಜಾವಿನಿಂದಲೇ ಇಟ್ಟ ಇಂತಹ ತಿನಿಸುಗಳನ್ನು ಪ್ರಯಾಣಿಕರು ಅರಿವಿಲ್ಲದೆ ಖರೀದಿಸಿ, ತಿನ್ನುತ್ತಾರೆ.

'ಕಚೇರಿ ಕೆಲಸ ಮುಗಿಸಿಕೊಂಡು ಹೊರಟಾಗ ರಾತ್ರಿ ತಡವಾಗಿತ್ತು. ಮೊದಲೇ ಬುಕ್ಕಿಂಗ್ ಮಾಡಿದ್ದ ಬಸ್ ಹೊರಡುವ ವೇಳೆಯಾಗಿದ್ದರಿಂದ ಊಟ ಮಾಡದೆ ಬಸ್ ನಿಲ್ದಾಣದತ್ತ ಹೊರಟೆ. ಸಾಮಗ್ರಿಗಳನ್ನು ಬಸ್‌ಗೆ ಇಟ್ಟು ಅಲ್ಲೇ ಇದ್ದ ತಿನಿಸುಗಳ ಮಳಿಗೆಯಲ್ಲಿ ಸಮೋಸ ಖರೀದಿಸಿದೆ. ಪ್ರಯಾಣ ಮಾಡುವಾಗ ಸೇವಿಸಿದೆ. ಮರು ದಿನ ಹೊಟ್ಟೆ ನೋವು ಆರಂಭವಾಗಿ ಎರಡು ದಿನ ಮಲಗಿದೆ. ಊರಿನಿಂದ ಮರಳಿದ ನಂತರ ಮಳಿಗೆ ಬಳಿ ಹೋಗಿ ಅವರಿಗೆ ನಡೆದ ಘಟನೆ ಮನವರಿಕೆ ಮಾಡಿ, ಮೇಲಧಿಕಾರಿಗಳ ಗಮನಕ್ಕೆ ತಂದೆ. ಆಗ ಅಧಿಕಾರಿಗಳು ಅವರಿಗೆ ಎಚ್ಚರಿಕೆ ನೀಡುವ ಭರವಸೆ ನೀಡಿದ್ದರೂ, ಪರಿಸ್ಥಿತಿ ಇಂದಿಗೂ ಸುಧಾರಿಸಿಲ್ಲ' ಎನ್ನುತ್ತಾರೆ ಹಾವೇರಿಯ ವಿ.ಕೆ. ಸತ್ಯಪ್ಪನವರ.

ದರವೂ ದುಬಾರಿ: ಬಸ್‌ನಿಲ್ದಾಣದ ಒಳಗೆ ನೀರಿನ ಬಾಟಲ್ ಹೊರತುಪಡಿಸಿ ಯಾವುದೇ ಸಾಮಗ್ರಿ ಖರೀದಿಸಿದರೂ ಗರಿಷ್ಠ ಮಾರಾಟ ದರಕ್ಕಿಂತ ಹೆಚ್ಚು ಹಣ ಪಡೆಯುತ್ತಾರೆ. ತಂಪು ಪಾನೀಯಗಳ ಮೇಲೂ ಶೇ 20ರಿಂದ 30ರಷ್ಟು ಅಧಿಕ ಹಣ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ತಂಪು ಪಾನೀಯ ಸೇರಿದಂತೆ ಅವಧಿ ಮುಗಿದ ಆಹಾರ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ.

'ನಿಲ್ದಾಣಕ್ಕೆ ಬರುವ ಎಲ್ಲರೂ ಧಾವಂತದಲ್ಲೇ ಇರುತ್ತಾರೆ. ಯಾರಿಗೂ ವಿಚಾರಿಸುವ ತಾಳ್ಮೆಯಾಗಲಿ, ನಿಲ್ದಾಣದ ಮೇಲ್ವಿಚಾರಕರ ಬಳಿ ದೂರು ನೀಡಲು ಸಮಯ ಇರುವುದಿಲ್ಲ. ಪ್ರಯಾಣಿಕರ ಇಂತಹ ಪರಿಸ್ಥಿತಿಯನ್ನು ಅಲ್ಲಿನ ವ್ಯಾಪಾರಿಗಳು ದುರುಪಯೋಗ ಮಾಡಿಕೊಳ್ಳುತ್ತಾರೆ' ಎನ್ನುತ್ತಾರೆ ಸಕಲೇಶಪುರದ ಲೋಕೇಶ್.

ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್‌ನಿಲ್ದಾಣದಲ್ಲಿ ಮಾರಾಟ ಮಾಡಲು ತೆರೆದಿಟ್ಟ ಆಹಾರ ಪದಾರ್ಥಗಳು –ಪ್ರಜಾವಾಣಿ ಚಿತ್ರ

> **ಮಳಿಗೆಗಳ ಮಾರಾಟದ ಮೇಲೆ ನಿತ್ಯ ನಿಗಾ ಇಡಲು ಕಷ್ಟವಾಗುತ್ತದೆ, ವಾಣಿಜ್ಯ ವಿಭಾಗಕ್ಕೆ ದೂರು ನೀಡಿದರೆ ಕ್ರಮ ಕೈಗೊಳ್ಳುತ್ತಾರೆ**
> **ಪ್ರಭಾ ಜವಳಿ,** ಸಹಾಯಕ ಸಂಚಾರ ನಿಯಂತ್ರಣಾಧಿಕಾರಿ, ಕೆಂಪೇಗೌಡ ನಿಲ್ದಾಣ

ಗಬ್ಬುನಾತ ಬೀರುವ ಶೌಚಾಲಯಗಳು

ಬಸ್ ನಿಲ್ದಾಣಗಳಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಯೂ ಶೋಚನೀಯವಾಗಿದೆ. ಸ್ವಚ್ಛತೆಯ ಕೊರತೆ ಇದೆ. ಗಬ್ಬುನಾತ ಮೂಗಿಗೆ ರಾಚಿ, ಉಬ್ಬಳಿಕೆ ತರಿಸುತ್ತದೆ. ಅಂತಹ ಸ್ಥಿತಿಯಲ್ಲೇ ಜನರು ಸರದಿಯಲ್ಲಿ ನಿಂತು ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಳ್ಳುತ್ತಾರೆ.

ಬಸ್ ನಿಲ್ದಾಣಗಳಲ್ಲಿ, ಸುತ್ತಲಿನ ಸ್ಥಳಗಳಲ್ಲಿ ಕೆಲವೆಡೆ ಸುಲಭ ಶೌಚಾಲಯಗಳನ್ನು ಸ್ಥಾಪಿಸಲಾಗಿದೆ. ಜನರು ಹಣ ಕೊಟ್ಟು ಬಳಸಿದರೂ ಸ್ವಚ್ಛತೆ ಮರೀಚಿಕೆಯಾಗಿ ಉಳಿದಿದೆ.

ಒಂದೆರಡು ಬಾರಿಯಷ್ಟೇ ಪರಿಶೀಲನೆ

ಬಸ್‌ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಆಹಾರ ಸುರಕ್ಷತೆಯ ಖಾತ್ರಿ ನೀಡುವುದು ನಿಲ್ದಾಣದ ಮೇಲ್ವಿಚಾರಕರು, ವಿಭಾಗೀಯ ನಿಯಂತ್ರಣಾಧಿಕಾರಿಗಳ ಜವಾಬ್ದಾರಿ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ಈ ಕುರಿತು ನಿಗಾವಹಿಸುತ್ತದೆ. ಆದರೆ, ಅವರು ವರ್ಷಕ್ಕೆ ಒಂದೆರಡು ಬಾರಿ ದಾಳಿ ನಡೆಸಿ, ಸುಮ್ಮನಾಗುತ್ತಾರೆ.

ಜುಲೈನಲ್ಲಿ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ಇರುವ 748 ವ್ಯಾಪಾರ ಮಳಿಗೆಗಳು ಹಾಗೂ ಆಹಾರ ಉದ್ದಿಮೆಗಳನ್ನು ಪರಿಶೀಲನೆ ಮಾಡಲಾಗಿತ್ತು. 120 ಆಹಾರ ಮಳಿಗೆಗಳಲ್ಲಿ ನೈರ್ಮಲ್ಯದ ಕೊರತೆ ಕಂಡುಬಂದಿತ್ತು. 19 ಆಹಾರ ಮಳಿಗೆಗಳಿಗೆ ₹ 48 ಸಾವಿರ ದಂಡ ವಿಧಿಸಲಾಗಿತ್ತು. ನಂತರ ಯಾವುದೇ ತಪಾಸಣೆ ನಡೆದಿಲ್ಲ. ಮತ್ತೆ ಹಿಂದಿನಂತೆ ಎಲ್ಲವೂ ಸಾಗಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ: ಇಬ್ಬರು ಮುಖ್ಯ ಎಂಜಿನಿಯರ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಲೋಕೋಪಯೋಗಿ ಇಲಾಖೆ ಮುಖ್ಯ ಎಂಜಿನಿಯರ್ ಕೆ.ಜಿ. ಜಗದೀಶ್ ಮತ್ತು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ಅಕ್ರಮ ಎಸಗಿರುವ ಆರೋಪ ಎದುರಿಸುತ್ತಿರುವ ಜಲ ಸಂಪನ್ಮೂಲ ಇಲಾಖೆ ಮುಖ್ಯ ಎಂಜಿನಿಯರ್ ಮನ್ಮಥಯ್ಯ ಸ್ವಾಮಿ ಅವರನ್ನು ಅಮಾನತು ಮಾಡಲಾಗಿದೆ.

ಜಗದೀಶ್ ಅವರು ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗದ ಬೆಂಗಳೂರು ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದರು. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಅಡಿ ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, ಜುಲೈ 11ರಂದು ಅವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿದ್ದರು.

ಒಟ್ಟು ₹ 8.30 ಕೋಟಿ ಮೌಲ್ಯದ ಆಸ್ತಿ ಜಗದೀಶ್ ಬಳಿ ಪತ್ತೆಯಾಗಿತ್ತು. ಈ ಪೈಕಿ ₹ 6.85 ಕೋಟಿ ಮೌಲ್ಯದ ಆಸ್ತಿಯು ಅಕ್ರಮ ಸಂಪಾದನೆಯಿಂದ ಬಂದಿದೆ ಎಂದು ಲೋಕಾಯುಕ್ತ ಪೊಲೀಸರು ಪ್ರಾಥಮಿಕ ವರದಿ ಸಲ್ಲಿಸಿದ್ದರು. ಅದೇ ಹುದ್ದೆಯಲ್ಲಿ ಮುಂದುವರಿದರೆ ತನಿಖೆಯ ಮೇಲೆ ಪ್ರಭಾವ ಬೀರುವ ಮತ್ತು ಸಾಕ್ಷ್ಯನಾಶಕ್ಕೆ ಪ್ರಯತ್ನಿಸುವ ಸಾಧ್ಯತೆ ಇರುವುದರಿಂದ ಅವರನ್ನು ಅಮಾನತು ಮಾಡುವಂತೆ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ (ಡಿಪಿಎಆರ್) ಶಿಫಾರಸು ಮಾಡಿದ್ದರು. ಜಗದೀಶ್ ಅವರನ್ನು ಅಮಾನತುಗೊಳಿಸಿ ಡಿಪಿಎಆರ್ ಅಕ್ಟೋಬರ್ 10ರಂದು ಆದೇಶ ಹೊರಡಿಸಿದೆ.

ನಿವೇಶನ ಹಂಚಿಕೆಯಲ್ಲಿ ಅಕ್ರಮ: ಮೂಲತಃ ಜಲ ಸಂಪನ್ಮೂಲ ಇಲಾಖೆಯ ವೃಂದಕ್ಕೆ ಸೇರಿರುವ ಮನ್ಮಥಯ್ಯ ಸ್ವಾಮಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗದ ಉತ್ತರ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದರು. 2021ರ ಮಾರ್ಚ್ 9ರಿಂದ 2024ರ ಮಾರ್ಚ್ 14ರವರೆಗೆ ಇವರು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯ ನಿರ್ವಹಿಸಿದ್ದರು.

320 ನಿವೇಶನಗಳ ಒಂದು ಪೂರ್ಣ ಸೆಕ್ಟರ್ ಅನ್ನು ಬಿ.ವಿ.ವಿ. ಸಂಘ ಎಂಬ ಸಂಸ್ಥೆಗೆ ಹಂಚಿಕೆ ಮಾಡಿರುವುದೂ ಸೇರಿದಂತೆ ನಾಲ್ಕು ಪ್ರಕರಣಗಳಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ಎಸಗಿರುವ ಆರೋಪ ಮನ್ಮಥಯ್ಯ ಸ್ವಾಮಿಅವರ ಮೇಲಿದೆ. ಅನರ್ಹರಿಗೆ ನಿವೇಶನ ಹಂಚಿಕೆ, ಅಧಿಕಾರ ವ್ಯಾಪ್ತಿಮೀರಿ ತೀರ್ಮಾನ ಕೈಗೊಂಡಿರುವ ಆರೋಪಗಳೂ ಇವೆ.ಪ್ರಕರಣದ ತನಿಖೆ ನಡೆಸಿದ್ದ ಬೆಳಗಾವಿ ಪ್ರಾದೇಶಿಕ ಆಯುಕ್ತರು, ವರದಿ ಸಲ್ಲಿಸಿದ್ದರು. ಅದರ ಆಧಾರದಲ್ಲಿ ಆರೋಪಿ ಅಧಿಕಾರಿಯನ್ನು ಅಮಾನತು ಮಾಡುವಂತೆ ಜಲ ಸಂಪನ್ಮೂಲ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಅದರ ಆಧಾರದಲ್ಲಿ ಮನ್ಮಥಯ್ಯ ಸ್ವಾಮಿ ಅವರನ್ನು ಅಮಾನತುಗೊಳಿಸಿ ಡಿಪಿಎಆರ್ ಅ.9ರಂದು ಆದೇಶ ಹೊರಡಿಸಿದೆ.

ನಿಮ್ಹಾನ್ಸ್‌ನಲ್ಲಿ ಮಾನಸಿಕ ಆರೋಗ್ಯ ಸಂತೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಆತ್ಮಹತ್ಯೆ ತಡೆಯುವ ಉದ್ದೇಶದಿಂದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 15ಕ್ಕೆ ಮಾನಸಿಕ ಆರೋಗ್ಯ ಸಂತೆ ಹಮ್ಮಿಕೊಂಡಿದೆ.

ಮೂರನೇ ಆವೃತ್ತಿಯ ಈ ಸಂತೆಯು, ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬೆಳಿಗ್ಗೆ 9.30ರಿಂದ ಸಂಜೆ 5 ಗಂಟೆಯವರೆಗೆ ನಡೆಯಲಿದೆ. ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿವಿಧ ಸರ್ಕಾರಿ ಹಾಗೂ ಖಾಸಗಿ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಸಂತೆಯನ್ನು ಹಮ್ಮಿಕೊಳ್ಳಲಾಗಿದ್ದು, 4,000ಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. 60ಕ್ಕೂ ಅಧಿಕ ಮಳಿಗೆಗಳು ಈ ಸಂತೆಯಲ್ಲಿ ಇರಲಿವೆ ಎಂದು ಸಂಸ್ಥೆ ತಿಳಿಸಿದೆ.

ಮೊದಲೆರಡು ಮಾನಸಿಕ ಆರೋಗ್ಯ ಸಂತೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಮೂರನೇ ಆವೃತ್ತಿಯ ಸಂತೆಯಲ್ಲಿ ಹಲವು ವೈಶಿಷ್ಟ್ಯತೆ ಇರಲಿದೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಗೊಂದಲಗಳ ಬಗ್ಗೆ ತಜ್ಞರ ಜತೆಗೆ ಚರ್ಚಿಸಲು, ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ತಿಳಿಯಲು ಈ ಸಂತೆ ಸಹಕಾರಿಯಾಗಲಿದೆ ಎಂದು ಹೇಳಿದೆ.

ನಿಜವಾದ ಮಿದುಳನ್ನು ಸಂತೆಯಲ್ಲಿ ವೀಕ್ಷಿಸಬಹುದಾಗಿದೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಹಾಯವಾಣಿ ಸೇರಿ ವಿವಿಧ ಮಾಹಿತಿಗಳು ಲಭ್ಯವಾಗಲಿವೆ. ಈ ಸಂತೆಗೆ ಪ್ರವೇಶ ಉಚಿತ ಇರಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಜಸ್ಟೀಸ್ ಹೊಂಬೇಗೌಡ ಸೇವಾ ಸಮಿತಿಯ ಸುವರ್ಣ ಮಹೋತ್ಸವದಲ್ಲಿ ನ್ಯಾ. ಗೋಪಾಲಗೌಡ

ಕೈಗಾರಿಕೆಯ ಹೆಸರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆಯ ಹೆಸರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಿ, ರೈತರನ್ನು ಸಂಕಷ್ಟಕ್ಕೆ ದೂಡಲಾಗುತ್ತಿದೆ. ಇಂಥ ಸಂದರ್ಭದಲ್ಲಿ ರೈತರ ರಕ್ಷಣೆಗೆ ಒಕ್ಕಲಿಗರ ಸಂಘವು ಬಾರದೇ ಇದ್ದರೆ ಸಂಘ ಇದ್ದೂ ಪ್ರಯೋಜನವಿಲ್ಲ' ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಆಕ್ರೋಶ ವ್ಯಕ್ತಪಡಿಸಿದರು.

ಜಸ್ಟಿಸ್ ಹೊಂಬೇಗೌಡ ಸೇವಾ ಸಮಿತಿ– ಐಟಿಐ ಇದರ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾನುವಾರ ಜಸ್ಟಿಸ್ ಹೊಂಬೇಗೌಡ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'ರೈತರನ್ನು ಬೆನ್ನೆಲುಬು ಎಂದು ಕರೆಯುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಬೆನ್ನೆಲುಬು ಮುರಿಯುತ್ತಿವೆ. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಕೈಗಾರಿಕೆಯ ಹೆಸರಲ್ಲಿ ಭೂಮಿ ಕೊಳ್ಳೆ ಹೊಡೆಯಲಾಗುತ್ತಿದೆ' ಎಂದು ದೂರಿದರು.

ಐಷಾರಾಮಿ ಜೀವನ ನಡೆಸುವವರ ವಾಹನಗಳು ವೇಗವಾಗಿ ಸಾಗಲು ರೂಪಿಸಿರುವ ಪೆರಿಫೆರಲ್ ರಿಂಗ್ ರಸ್ತೆ 15 ವರ್ಷವಾದರೂ ತಯಾರಾಗಿಲ್ಲ. ಇದಕ್ಕಾಗಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ಸಿಕ್ಕಿಲ್ಲ. ಬೆಂಗಳೂರಿನಿಂದ ಮೈಸೂರಿಗೆ ನೈಸ್ ರಸ್ತೆ ನಿರ್ಮಿಸುವುದಕ್ಕೆ ಕೈಗಾರಿಕಾ ಉದ್ದೇಶದ ಅಡಿಯಲ್ಲಿ ಕೃಷಿ ಜಮೀನುಗಳ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿ, ಹಾಗೆಯೇ ಬಿಡಲಾಗಿದೆ. ನೈಸ್ ಕಂಪನಿಯ ಅನುಕೂಲಕ್ಕಾಗಿ ರೈತರನ್ನು ಸಂಕಷ್ಟಕ್ಕೆ ದೂಡಲಾಗಿದೆ. ದೇವನಹಳ್ಳಿಯಲ್ಲಿ ವಿಮಾನ ನಿಲ್ದಾಣವಿದೆ. ಮತ್ತೆ ನೆಲಮಂಗಲದಲ್ಲಿ ವಿಮಾನ ನಿಲ್ದಾಣ ಮಾಡುವುದಾಗಿ ಹೇಳಿ ರೈತರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರದಲ್ಲಿ ಸರಿಯಾದ ಕೈಗಾರಿಕಾ ನೀತಿ ಇಲ್ಲ. ಯೋಜನಾ ಪ್ರಾಧಿಕಾರವಿಲ್ಲ. ಆದರೂ ಯೋಜನೆ ರೂಪಿಸಲು ಮುಂದಾಗಿದೆ. ರಾಜಕಾರಣಿಗಳ ದಲ್ಲಾಳಿಗಳು, ಅಧಿಕಾರಿಗಳ ದಲ್ಲಾಳಿಗಳು ಈಗಾಗಲೇ ವಿಮಾನ ನಿಲ್ದಾಣ ಬರಲಿದೆ ಎಂದು ನಿರ್ಧರಿಸಿದ ಗ್ರಾಮಗಳಲ್ಲಿ ಜಮೀನು ಖರೀದಿಸುತ್ತಿದ್ದಾರೆ. ಅವರೇ ಮುಂದೆ ಕೋಟ್ಯಧಿಪತಿಗಳಾಗುತ್ತಾರೆ. ರೈತರಿಗೆ ಏನೂ ಸಿಗುವುದಿಲ್ಲ ಎಂದು ದೂರಿದರು.

ವಿದ್ಯಾರ್ಥಿ ಹೋರಾಟಗಳೇ ನಿಂತು ಹೋಗಿವೆ. ಮತ್ತೆ ರೈತರ ಪರ ವಿದ್ಯಾರ್ಥಿಗಳು ಧ್ವನಿ ಎತ್ತಬೇಕು. ಒಕ್ಕಲಿಗರ ಸಂಘ, ಹೊಂಬೇಗೌಡ ಸೇವಾ ಸಮಿತಿ ಸಹಿತ ಎಲ್ಲ ಸಮುದಾಯಗಳ ಸಮಿತಿಗಳು ರೈತರ ನೆರವಿಗೆ ಬರಬೇಕು. ಸ್ವಾಮೀಜಿಯವರು ಕೂಡ ರೈತರ ಪರ, ಇಂಥ ಯೋಜನೆಗಳ ವಿರುದ್ಧ ಧ್ವನಿ ಎತ್ತಬೇಕು. ಇಲ್ಲದೇ ಇದ್ದರೆ ನೀತಿಗೆಟ್ಟ ಸರ್ಕಾರಗಳು ರೈತರನ್ನು ತಿಂದು ಹಾಕುತ್ತವೆ ಎಂದು ಎಚ್ಚರಿಸಿದರು.

ನ್ಯಾ. ಗೋಪಾಲಗೌಡರ ಜೊತೆಗೆ ನ್ಯಾ. ಚಂದ್ರಶೇಖರಯ್ಯ, ನ್ಯಾ. ಎಚ್. ಎನ್. ನಾಗಮೋಹನದಾಸ್, ನ್ಯಾ. ಹುಲುವಾಡಿ ಜಿ. ರಮೇಶ್ ಅವರಿಗೆ ಜಸ್ಟೀಸ್ ಹೊಂಬೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಿವೃತ್ತ ವಿಜ್ಞಾನಿ ಶರಶ್ಚಂದ್ರ ಹೊಂಬೇಗೌಡ, ಬಿಬಿಎಂಪಿಯ ನಿವೃತ್ತ ಅಧಿಕಾರಿ ಜಯರಾಂ ರಾಯಪುರ, ಸೇವಾ ಸಮಿತಿಯ ಅಧ್ಯಕ್ಷ ಎಂ.ಎ. ಆನಂದ್, ಕಾರ್ಯಾಧ್ಯಕ್ಷ ಜೆ. ಮಂಜುನಾಥಸ್ವಾಮಿ, ಉಪಾಧ್ಯಕ್ಷ ಕೆ.ಎಚ್. ಚನ್ನಪ್ಪ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಹುಲವಾಡಿ ಜಿ. ರಮೇಶ್, ಎಚ್.ಎನ್. ನಾಗಮೋಹನದಾಸ್ ಅವರಿಗೆ ಜಸ್ಟೀಸ್ ಹೊಂಬೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

HONDA

Scooter ಅಂದ್ರೆ ACTIVA
With H-Smart Technology
Cashback of 5% up to ₹5000#
Low ROI @ 7.99%**

To enjoy the video, please Scan QR Code.
ACTIVA OVER 3.25 CRORE* HAPPY CUSTOMERS
For more information give a missed call on 7230032200
IDFC FIRST Bank Bank**/Credit Card#
HDFC BANK Credit Card#
TATA CAPITAL Two Wheeler Loans**
SHRIRAM Finance**
L&T Finance**
For dealer details scan the QR Code
BOOK ONLINE NOW! www.honda2wheelersindia.com
CLICK BOOK RELAX

#Cashback Offer available on all Honda two-wheeler models for EMI transactions made using HDFC Bank credit cards and IDFC FIRST Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. **Approval of the loan is at the sole discretion of the financiers, and additional documentation may be required. **The interest rates, down payment, and tenure options are based on the financier's assessment of the applicant's credit profile. **The offers/features may be modified or withdrawn at any time without prior intimation. Product shown in the picture may vary from actual product available in the market. Accessories shown in the picture are not part of standard equipment. *Source: Cumulative Sales figure of Brand Activa from June 2001 to June 2024 as per HMSI internal data. CBR [Click, Book, Relax] facility available at selected dealerships only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ಐಟಿ ಕ್ಷೇತ್ರದಲ್ಲಿ ಕೋಡಿಂಗ್ ಕಲಿಕೆ ಅಗತ್ಯವೇ?

ರವಿಚಂದ್ರ ಎಂ.

ಮಾಹಿತಿ ತಂತ್ರಜ್ಞಾನ ಪ್ರೋಗ್ರಾಮಿಂಗ್ ಅಥವಾ ಕೋಡಿಂಗ್ ಕೌಶಲ ಬಯಸುವ ಕ್ಷೇತ್ರ ಎಂಬ ಭಾವನೆ ಜನಜನಿತವಾದುದು. ಕೆಲವು ಪದವೀಧರರು ತಮಗೆ ಕೋಡಿಂಗ್ ಕಬ್ಬಿಣದ ಕಡಲೆ ಎಂಬ ಭಾವನೆಯಿಂದ ಹೊರಬರಲು ಸಾಧ್ಯವಾಗದೆ ಐ. ಟಿ ಕ್ಷೇತ್ರ ದಲ್ಲಿ ವೃತ್ತಿ ಬದಕು ಕಂಡುಕೊಳ್ಳದೆ ಬೇರೆ ಉದ್ಯೋಗ ದತ್ತ ಮುಖ ಮಾಡುವುದು ಇದೆ. ನಿಜ ಹೇಳಬೇಕಂದರೆ ಐ.ಟಿ ಕ್ಷೇತ್ರದ ಎಲ್ಲ ಹುದ್ದೆಗಳಿಗೆ ಕೋಡಿಂಗ್ ಕೌಶಲದ ಅವಶ್ಯಕತೆ ಇಲ್ಲ ಎಂಬುದನ್ನು ನಾವು ತಿಳಿಯಬೇಕಿದೆ. ಅಂತಹ ಪ್ರಮುಖ ಕ್ಷೇತ್ರ ಗಳ ಬಗ್ಗೆ ಮಾಹಿತಿ ನೀಡುವ ಪ್ರಯತ್ನ ಇಲ್ಲಿದೆ.

1.. ಟೆಕ್ನಿಕಲ್ ರೈಟರ್

ಉದ್ಯೋಗದ ಪರಿಧಿ: ತಾಂತ್ರಿಕ ಬರಹಗಾರರು ಅನೇಕ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಉತ್ಪನ್ನ ಗಳನ್ನು ಬಳಸುವ ವಿಧಾನಗಳ ಬಗ್ಗೆ ಸೂಚ್ಯವಾಗಿ ಸರಳ ಭಾಷೆ ಯಲ್ಲಿ ಕಡತ ಗಳನ್ನು ಬರೆಯುತ್ತಾರೆ.
ಬೇಕಾದ ಕೌಶಲ: ಸರಳ ಭಾಷೆಯಲ್ಲಿ ಬರೆಯುವ ಶಕ್ತಿ ಮತ್ತು ತಾಂತ್ರಿಕ ವಿಚಾರಗಳ ಗ್ರಹಿಸುವ ಸಾಮರ್ಥ್ಯ
ಪ್ರಮುಖ ಸರ್ಟಿಫಿಕೇಷನ್ ಗಳು: Certified Technical Communicator (CTC), Certified Information Systems Auditor (CISA)

2. ಯೂಸರ್ ಎಕ್ಸ್ ಪೀರಿಯನ್ಸ್ (UX) ಡಿಸೈನ್:

ಉದ್ಯೋಗದ ಪರಿಧಿ: ಮೊಬೈಲ್ ಫೋನ್ ಮತ್ತು ಇತರೆ ಡಿಜಿಟಲ್ ಉತ್ಪನ್ನಗಳ ಬಳಕೆ ಹೆಚ್ಚಿದಂತೆ ಈ ಉತ್ಪನ್ನಗಳ ಬಳಕೆದಾರಿಗೆ ಮನ ಮುಟ್ಟುವ ಡಿಸೈನ್/ ವಿನ್ಯಾಸ ಅಕ್ಷರ ಗಾತ್ರ, ಸುಲಭವಾಗಿ ಬಳಸಲು ಅನುವು ಮಾಡಿಕೊಡುವುದು ಈ ಪರಿಣಿತರ ಕಾರ್ಯ.
ಬೇಕಾದ ಕೌಶಲ: ಸೃಜನಶೀಲತೆ ಮತ್ತು ಬಳಕೆದಾರರ ಮನಸ್ಥಿತಿ ಅರಿಯಬಲ್ಲ ಮಾನಸಿಕ ತಜ್ಞರ ಕೌಶಲ
ಪ್ರಮುಖ ಸರ್ಟಿಫಿಕೇಷನ್ ಗಳು: Certified User Experience Professional (CUX-P), Certified User Experience Designer (CXD)

3. ಸೈಬರ್ ಸೆಕ್ಯುರಿಟಿ ಎನಾಲಿಸ್ಟ್

ಉದ್ಯೋಗದ ಪರಿಧಿ: ಗಣಕ ಯಂತ್ರ ಮತ್ತು ಗಣಕ ನೆಟ್ವರ್ಕ್/ಜಾಲಗಳ ಸುರಕ್ಷತೆ ಬಗ್ಗೆ ಗಮನ ಹರಿಸುವುದು ಮತ್ತು ಸೈಬರ್ ಕ್ರೈಂ ಗಳ ಬಗ್ಗೆ ಅಧ್ಯಯನ ನಡೆಸುವುದು.
ಬೇಕಾದ ಕೌಶಲ: ಕಠಿಣ ಮತ್ತು ಗೋಜಲು ಸನ್ನಿವೇಶ ಗಳ ನಿರ್ವಹಣೆ ಮಾಡುವ ಛಾತಿ, ಗಣಕ ವಿಜ್ಞಾನದಲ್ಲಿನ ಸುರಕ್ಷತೆ ರೀತಿ ರಿವಾಜುಗಳನ್ನು ಅಧ್ಯಯನ ಮಾಡುವುದು.
ಪ್ರಮುಖ ಸರ್ಟಿಫಿಕೇಷನ್ ಗಳು: Certified Information Systems Security Professional (CISSP), Certified Ethical Hacker (CEH).

4. ಐ.ಟಿ ಸಪೋರ್ಟ್ ಸ್ಪೆಷಲಿಸ್ಟ್: (ಐ. ಟಿ ಪೂರಕ /ಸಹಾಯಕ ಹುದ್ದೆ)

ಉದ್ಯೋಗದ ಪರಿಧಿ: ಕಂಪ್ಯೂಟರ್ ಮತ್ತು ಇತರೆ ಡಿಜಿಟಲ್ ಸೇವೆ ಪಡೆಯುವ ಗ್ರಾಹಕರು ಎದುರುಸುವ ದಿನ ನಿತ್ಯ ತೊಂದರೆಗಳನ್ನು ಪರಿಹರಿಸುವ ಸಹಾಯಕ ಕಾಯಕ ಇದು.
ಬೇಕಾದ ಕೌಶಲ: ಗ್ರಾಹಕ ಸ್ನೇಹಿ ಕೌಶಲ್ಯ, ತಾಂತ್ರಿಕ ದೋಷಗಳ ಗುರುತಿಸುವ ಕಲೆ, ತಂತ್ರಜ್ಞಾನ ಹೇಗೆ ಕಾರ್ಯ ನಿರ್ವಹಣೆ ಮಾಡುತ್ತೆ ಎಂಬ ಬಗ್ಗೆ ಜ್ಞಾನ.
ಪ್ರಮುಖ ಸರ್ಟಿಫಿಕೇಷನ್ ಗಳು: CompTIA A+, Microsoft Certified: Azure Fundamentals

5. ಡೇಟಾ ಎನಾಲಿಸ್ಟ್ (ದತ್ತಾಂಶ ವಿಶ್ಲೇಷಕರು)

ಉದ್ಯೋಗದ ಪರಿಧಿ: ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ ಮಾಡುವುದು ಮತ್ತು ದತ್ತಾಂಶ ವಿಶ್ಲೇಷಣೆಯಿಂದ ತಮ್ಮ ಸಂಸ್ಥೆಗೆ ಆಗುವ ಅನುಕೂಲ ಗಳ ಬಗ್ಗೆ ಮಾಹಿತಿ ನೀಡುವುದು.
ಬೇಕಾದ ಕೌಶಲ: ಸದೃಢ ವಾದ ವಿಶ್ಲೇಷಣೆ ಗುಣ ಮತ್ತು ಮಾಹಿತಿ ವಿಶ್ಲೇಷಣೆ ಮಾಡುವ ಸಲಕರಣೆ ಗಳ ಬಳಸುವ ಕಲೆ.
ಪ್ರಮುಖ ಸರ್ಟಿಫಿಕೇಷನ್ ಗಳು: Certified Data Analyst (CDA), Certified Business Intelligence Professional (CBIP). ❖

ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ...

'ಲೈಫ್'ಸ್ ಗುಡ್' ಪ್ರೋಗ್ರಾಂ 2024

ಭಾರತದಾದ್ಯಂತ ಆಯ್ದ ಕಾಲೇಜು/ಸಂಸ್ಥೆಗಳಲ್ಲಿ ಅಂಡರ್‌ಗ್ರಾಜುಯೇಟ್ ಮತ್ತು ಪೋಸ್ಟ್‌ಗ್ರಾಜುಯೇಟ್ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಎಲ್‌ಜಿ ಎಲೆಕ್ಟ್ರಾನಿಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅರ್ಜಿಗಳನ್ನು ಆಹ್ವಾನಿಸುತ್ತದೆ.

ವಿದ್ಯಾರ್ಥಿಗಳು ಭಾರತದಾದ್ಯಂತ ಆಯ್ದ ಕಾಲೇಜು/ ಸಂಸ್ಥೆಗಳಲ್ಲಿ ಅಂಡರ್‌ಗ್ರಾಜುಯೇಟ್ ಮತ್ತು ಪೋಸ್ಟ್‌ಗ್ರಾಜುಯೇಟ್ ಕೋರ್ಸ್‌ಗಳನ್ನು (ಯಾವುದೇ ಶೈಕ್ಷಣಿಕ ವರ್ಷದಲ್ಲಿ) ಅಭ್ಯಾಸ ಮಾಡುತ್ತಿರಬೇಕು. ಮೊದಲನೆಯ ವರ್ಷದಲ್ಲಿರುವ ವಿದ್ಯಾರ್ಥಿಗಳು ತಮ್ಮ 12ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ 60 % ಅಂಕಗಳನ್ನು, 2, 3 ಮತ್ತು 4ನೇ ವರ್ಷದಲ್ಲಿರುವ ವಿದ್ಯಾರ್ಥಿಗಳು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 60 % ಅಂಕಗಳನ್ನು ಗಳಿಸಿರಬೇಕು. ಪ್ರತಿಭಾವಂತ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಮತ್ತು ರೂ. 8ಲಕ್ಷ ಮೀರದಂತೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಮೊದಲು ಬಂದವರಿಗೆ ಮೊದಲ ಅವಕಾಶದ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆಯು ನಡೆಯುತ್ತದೆ.

ಶೂನ್ಯ ಟ್ಯೂಷನ್ ಶುಲ್ಕವಿರುವ ಮತ್ತು ರೂ.8 ಲಕ್ಷಕ್ಕಿಂತ ಕಡಿಮೆ ಕುಟುಂಬ ಆದಾಯವನ್ನು ಹೊಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ:ಯುಜಿ ವಿದ್ಯಾರ್ಥಿಗಳಿಗೆ- ರೂ. 50,000; ಪಿಜಿ ವಿದ್ಯಾರ್ಥಿಗಳಿಗೆ- ರೂ. 1 ಲಕ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನ ಅ.31, ಹೆಚ್ಚಿನ ಮಾಹಿತಿಗೆ: www.b4s.in/praja/LGIGS2

ಎಸ್‌ಡಿಇಎಫ್ 'ಶ್ಯಾಮ್ ಲತಾ ಗರ್ಗ್' ಇಂಡಿಯಾ 2024-25

ಎಂಜಿನಿಯರಿಂಗ್, ಮೆಡಿಕಲ್, ಆರ್ಕಿಟೆಕ್ಚರ್ ಇತ್ಯಾದಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳು ಮತ್ತು ಇತರ ಅಂಡರ್‌ಗ್ರಾಜುಯೇಟ್ ಕಾರ್ಯಕ್ರಮಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡಲು ಸ್ವಾಮಿ ದಯಾನಂದ್ ಎಜುಕೇಶನ್ ಫೌಂಡೇಶನ್ (ಎಸ್‌ಡಿಇಎಫ್)ನ ಉಪಕ್ರಮವಾಗಿದೆ.
ಅರ್ಹತೆ: ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳು ಅವಕಾಶ ನೀಡುವ ಎಂಜಿನಿಯರಿಂಗ್, ಮೆಡಿಕಲ್, ಆರ್ಕಿಟೆಕ್ಚರ್ ಇತ್ಯಾದಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳು ಮತ್ತು ಇತರ ಪದವಿ ಕಾರ್ಯಕ್ರಮಗಳಿಗೆ ದಾಖಲಾದ ಭಾರತೀಯ ವಿದ್ಯಾರ್ಥಿಗಳು. ಅಭ್ಯರ್ಥಿಗಳು ತಮ್ಮ 12ನೇ ತರಗತಿಯಲ್ಲಿ ಸಿಬಿಎಸ್‌ಸಿ ಬೋರ್ಡ್‌ನಲ್ಲಿಯಾದರೆ ಕನಿಷ್ಠ 80 % ಅಥವಾ ಇತರ ಬೋರ್ಡ್‌ಗಳಲ್ಲಿಯಾದರೆ 70 % ಅಥವಾ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಎರಡನೆಯ ವರ್ಷದ ವಿದ್ಯಾರ್ಥಿಗಳಿಗೆ ಕನಿಷ್ಠ 8.0 ಸಿಜಿಪಿಎ ಅವಶ್ಯಕ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ರೂ.8 ಲಕ್ಷವನ್ನು ಮೀರಬಾರದು.
ಅರ್ಜಿ ಸಲ್ಲಿಸಲು ಕೊನೆಯ ದಿನ ಅ.31, ಹೆಚ್ಚಿನ ಮಾಹಿತಿಗೆ: www.b4s.in/praja/SDEFSL1

ಕೋಲ್ಗೇಟ್ ಕೀಪ್ ಇಂಡಿಯಾ ಸ್ಮೈಲಿಂಗ್ 2024-25

ಅರ್ಹತೆ: ಮಾನ್ಯತೆ ಹೊಂದಿರುವ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಪ್ರಸಕ್ತ ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ (ಬಿಡಿಎಸ್) (ಯಾವುದೇ ವರ್ಷ) ಅಥವಾ ಮಾಸ್ಟರ್ ಆಫ್ ಡೆಂಟಲ್ ಸರ್ಜರಿ (ಎಂಡಿಎಸ್) ಕೋರ್ಸ್‌ಗಳಿಗೆ ದಾಖಲಾಗಿರುವ ಭಾರತೀಯ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ. ಅರ್ಜಿದಾರರು 12ನೇ ತರಗತಿಯಲ್ಲಿ ಕನಿಷ್ಠ 65 % ಅಂಕಗಳನ್ನು ಗಳಿಸಿರಬೇಕು. ಎಂಡಿಎಸ್ ಸ್ಕಾಲರ್‌ಶಿಪ್‌ಗೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ತಮ್ಮ ಬಿಡಿಎಸ್‌ನಲ್ಲಿ 60 % ಕ್ಕಿಂತ ಹೆಚ್ಚಿನ ಸಮಗ್ರ ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ರೂ. 8 ಲಕ್ಷವನ್ನು ಮೀರಬಾರದು. ₹ 75,000ದ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಅ.31 ಅರ್ಜಿ ಸಲ್ಲಿಸುವ ಕೊನೆಯದಿನವಾಗಿದೆ. ಹೆಚ್ಚಿನ ಮಾಹಿತಿಗೆ: www.b4s.in/praja/CKISSP3

ಲೂಯಿಸ್ ಡ್ರೇಫಸ್ ಅಗ್ರಿ-2024-25

ಅರ್ಹತೆ: ಆಯ್ಕೆ ಮಾಡಲಾದ ಸಂಸ್ಥೆಗಳಲ್ಲಿ ಅಗ್ರಿಕಲ್ಚರ್‌ನಲ್ಲಿ ಪದವಿಪೂರ್ವ ಕೋರ್ಸ್‌ಗಳ ಮೊದಲನೇ ಅಥವಾ ಎರಡನೇ ವರ್ಷದಲ್ಲಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅಭ್ಯರ್ಥಿಗಳು ತಮ್ಮ 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ 60 % ಅಂಕಗಳನ್ನು ಪಡೆದಿರಬೇಕು ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯವು ರೂ.8 ಲಕ್ಷಕ್ಕಿಂತ ಕಡಿಮೆ ಇರಬೇಕು. ₹ 50,000ದವರೆಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಅ.31 ಅರ್ಜಿಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ: www.b4s.in/praja/DASPL1

ನಿಕಾನ್ ಪ್ರೋಗ್ರಾಂ 2024-25

ಇದು ಸಮಾಜದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡಲು ಆರ್ಥಿಕವಾಗಿ ಬೆಂಬಲ ನೀಡಲು ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಉಪಕ್ರಮವಾಗಿದೆ.
ಅರ್ಹತೆ:12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಹೆಚ್ಚಿನ ಸಮಯದ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವಂತಹ ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಕುಟುಂಬದ ವಾರ್ಷಿಕ ಆದಾಯವು (ಎಲ್ಲಾ ಮೂಲಗಳಿಂದ) ರೂ.6 ಲಕ್ಷಕ್ಕಿಂತ ಕಡಿಮೆ ಇರಬೇಕು.

₹10,000ದ ವರೆಗೆ ವಿದ್ಯಾರ್ಥಿವೇತನ ನೀಡಲಾಗುವುದು. ಅ.20 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ: www.b4s.in/praja/NIKON12

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇತಿಹಾಸ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

11) ರೈತವಾರಿ ಪದ್ಧತಿಯನ್ನು ವಿವರಿಸಿ ಬರೆಯಿರಿ

ಉತ್ತರ:– (.........ಹಿಂದಿನ ಸಂಚಿಕೆಯಿಂದ)

ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು. ಸಣ್ಣ ರೈತರಿಗೆ ತಮ್ಮ ಅಧೀನದಲ್ಲಿದ್ದ ಭೂಮಿ ಮೇಲಿನ ಹಕ್ಕನ್ನು ನೀಡಿತ್ತಾದರೂ, ಭೂ ಕಂದಾಯವನ್ನು ಈ ಪದ್ಧತಿಯು ಹೆಚ್ಚಿನ ವಾರ್ಷಿಕ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು. ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಾಕ್ಷಣ್ಯವಾಗಿ ಕ್ರಮ ಜರುಗಿಸುತ್ತಿದ್ದರು. ಬೆಳೆಗಳು ಸರಿಯಾಗಿ ಫಸಲು ನೀಡದ ಸಂದರ್ಭದಲ್ಲಿ ರೈತರು ಹಣದ ಲೇವಾದೇವಿಗಾರರಿಂದ(Money Lender) ಸಾಲ ಮಾಡಿಕೊಂಡರು, ಮರು ಪಾವತಿಸಲಾಗದೆ ಅವರಿಗಿದ್ದ ಸಣ್ಣ ಪುಟ್ಟ ಜಮೀನನ್ನು ಮಾರಾಟ ಮಾಡುವಂತಾಯಿತು. ರೈತರ ಒಳಿತಿಗಾಗಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ ಎನ್ನುವುದು ವಿಪರ್ಯಾಸ

12) ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು ಯಾವುವು?

ಉತ್ತರ:– ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:

1. ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
2. ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
3. ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ (Mortgage) ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
4. ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
5. ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
6. ಹಣದ ಲೇವಾದೇವಿಗಾರರು ಬಲಿಷ್ಠರಾಗ ತೊಡಗಿದರು

13) ಬ್ರಿಟಿಷರ ಕಾಲದಲ್ಲಿದ್ದ ಭಾರತದಲ್ಲಿ ಶಿಕ್ಷಣ ಈ ಬಗ್ಗೆ ವಿವರಿಸಿ

ಉತ್ತರ:– ಆಧುನಿಕ ಶಿಕ್ಷಣದ ಆರಂಭ ಭಾರತೀಯರ ಸಾಂಪ್ರದಾಯಿಕ ಶಿಕ್ಷಣವು ನಿರಂತರವಾಗಿ ಚಾಲ್ತಿಯಲ್ಲಿತ್ತು. ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ರಾಜ್ಯವ್ಯವಸ್ಥೆ ನೆಲೆಗೊಂಡ ನಂತರ ಶಿಕ್ಷಣವನ್ನು ನೀಡುವುದರಲ್ಲಿ ಪಾರಂಪರಿಕ ವಿಧಾನದ ಜೊತೆಗೆ ಕೆಲವು ಬದಲಾವಣೆಗಳು ಉಂಟಾದವು. ಮುಂದೆ ಈ ಕ್ರಮದಲ್ಲಿ ಬದಲಾವಣೆ ಉಂಟಾದದ್ದು 18ನೇ ಶತಮಾನದ ಹೊಸ ಬ್ರಿಟಿಷ್ ಆಡಳಿತದ ಕಾಲಘಟ್ಟದಲ್ಲಿ. ಭಾರತದಲ್ಲಿದ್ದ ಐರೋಪ್ಯ ಮತ್ತು ಆಂಗ್ಲೋ–ಇಂಡಿಯನ್ ಸಮುದಾಯಗಳ ಮಕ್ಕಳಿಗೆ ಹೊಸ ಶಾಲೆಗಳು ಪ್ರಾರಂಭವಾದವು. ಆದರೆ ಈ ಶಿಕ್ಷಣ ಕ್ರಮವು ವಿಸ್ತರಣೆ ಆಗದಿದ್ದುದರಿಂದ ಸ್ಥಳೀಯ ಮಕ್ಕಳಿಗೆ ಯಾವುದೇ ಪ್ರಯೋಜನವಾಗಲಿಲ್ಲ. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿಯೆಂದರೆ ವಾರನ್ ಹೇಸ್ಟಿಂಗ್ಸ್, 1781ರಲ್ಲಿ ಅವನು 'ಕಲ್ಕತ್ತಾ ಮದರಸಾ'ವನ್ನು ಪ್ರಾರಂಭಿಸಿದನು. ಜೊನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು. ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್.

1828ರಲ್ಲಿ ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ವಿಶೇಷ ಪ್ರೋತ್ಸಾಹ ದೊರೆಯಿತು. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಮೆಕಾಲೆಯನ್ನು ಕಾನೂನು ಸದಸ್ಯನನ್ನಾಗಿ ಬೆಂಟಿಂಕ್‌ನು ನೇಮಕ ಮಾಡಿದನು. ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು. 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು. ಅವನ ಯೋಜನೆಯ ಪ್ರಮುಖ ಅಂಶವೆಂದರೆ; "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದಾಗಿತ್ತು..

ಭಾರತದ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲಿಷ್ ಭಾಷೆಯು ಮಾಧ್ಯಮವಾಗಿ ಬಳಕೆಯಾಗಲು ಪ್ರಾರಂಭವಾದದ್ದೇ 1830ರ ದಶಕದ ನಂತರ. ಸರ್ ಚಾರ್ಲ್ಸ್ ವುಡ್ಸ್‌ನ (1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು. ಇಲ್ಲಿಂದ ನಂತರ ಶಿಕ್ಷಣವು ಸಾರ್ವತ್ರೀಕರಣಗೊಳ್ಳತೊಡಗಿತು.

ಹೀಗೆ ಬ್ರಿಟಿಷ್ ಕಾಲದಲ್ಲಿ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳತೊಡಗಿತು.

15) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?

ಉತ್ತರ:– ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:– 1. ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.

2. ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣತೊಡಗಿತು.
3. ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ. ಎಸ್. ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
7. ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಹೀಗೆ ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

16) ಯಾವ ಹಿನ್ನೆಲೆಯಲ್ಲಿ 1773ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೊಂಡಿತು

ಉತ್ತರ:– 1765ರಲ್ಲಿ ಜಾರಿಗೊಂಡ ದಿವಾನಿ ಹಕ್ಕಿನ ನಂತರ ಕಂಪನಿ ಅಧಿಕಾರಿಗಳು ಅಪರಿಮಿತ ದುರಾಸೆಗೆ ಒಳಗಾಗಿ ಅಧಿಕಾರವನ್ನು ತಮ್ಮ ವೈಯಕ್ತಿಕ ಶ್ರೀಮಂತಿಕೆಯನ್ನು ಹೆಚ್ಚುಪಡಿಸಿಕೊಳ್ಳಲು ಬಳಸಿಕೊಂಡರು. ಭ್ರಷ್ಟಾಚಾರ ವಿಪರೀತವಾಯಿತು. ಇಂಗ್ಲೆಂಡಿನ ಶಾಸನ ಸಭೆಯ ಸದಸ್ಯನಾದ ಎಡ್ಮಂಡ್ ಬರ್ಕ್‌ನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು. ಕಂಪನಿ ಅಧಿಕಾರಿಗಳು ಭಾರತದಲ್ಲಿ ನಡೆಸುತ್ತಿರುವ ಅನೈತಿಕ ವ್ಯವಹಾರಗಳು ಗೊತ್ತಿದ್ದರೂ ಯಾವುದೇ ಕ್ರಮವನ್ನು ಜರುಗಿಸದೇ ಸುಮ್ಮನಿದ್ದುದೇ ಅವನು ಹೀಗೆ ಹೇಳಲು ಕಾರಣವಾಗಿತ್ತು.*(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHS

INTEGRALS

Definite Integrals

2. Evaluate $\int_0^2 e^2\,dx$ as the limit of a sum.

Soln:- (.......Contd)

$$= \frac{2(e^2-1)}{\lim_{n\to\infty}\left[\frac{e^{\frac{2}{n}}-1}{\frac{2}{n}}\right].2}$$

$$= e^2 - 1 \qquad \left[\text{Using } \lim_{n\to\infty}\frac{e^h-1}{h}=1\right]$$

The fundamental theorems of integral calculus

Theorem 1 - Let f be a continuous function on the closed interval $[a, b]$ & let $A(x)$ be the area function. Then $A'(x) = f(x)$, for all $x \in [a, b]$.

Theorem 2 - Let f be continuous function defined on the closed interval $[a, b]$ and F be an anti derivative of f.

Then $\int_a^b f(x)\,dx = [F(x)]_a^b = F(b) - F(a)$.

Problems:-

1. Evaluate $\int_a^b x^2\,dx$ as limit of sum.

Soln :- Let $f(x) = x^2$ and let $nh = b - a$

$$\therefore \int_a^b x^2 dx = \underset{h\to 0}{\mathrm{Lt}}\, h\left[\begin{matrix} f(a)+f(a+h)+f(a+2h) \\ +\dots\dots+f\{a+(n-1)h\}\end{matrix}\right]$$

$$= \underset{h\to 0}{\mathrm{Lt}}\, h\left[\begin{matrix} a^2+(a+h)^2+(a+2h)^2 \\ +\dots\dots+\{a+(n-1)h\}^2\end{matrix}\right]$$

$$= \underset{h\to 0}{\mathrm{Lt}}\, h\left[\begin{matrix} na^2+2ha\{1+2+\dots+(n-1)\} \\ +h^2\left\{1^2+2^2+\dots+(n-1^2)\right\}\end{matrix}\right]$$

$$= \underset{h\to 0}{\mathrm{Lt}}\, h\left[\begin{matrix} na^2+2ha\frac{n(n-1)}{2} \\ +h^2\frac{n(n-1)(2n-1)}{6}\end{matrix}\right]$$

$$= \underset{h\to 0}{\mathrm{Lt}}\left[\begin{matrix} h\,na^2+a\,nh(nh-h) \\ +\frac{nh(nh-h)(2nh-h)}{6}\end{matrix}\right]$$

$$= \underset{h\to 0}{\mathrm{Lt}}\, h\left[\begin{matrix} (b-a)a^2+a(b-a)(b-a-h) \\ +\frac{(b-a)(b-a-h)(2b-2a-h)}{6}\end{matrix}\right]$$

$$= \left[\begin{matrix} (b-a)a^2+a(b-a)(b-a-0) \\ +\frac{(b-a)(b-a-0)(2b-2a-0)}{6}\end{matrix}\right]$$

$$= (b-a)\left[a^2+a(b-a)+\frac{(b-a)2(b-a)}{6}\right]$$

$$= (b-a)\left[a^2+ab-a^2)+\frac{(b-a)^2}{3}\right]$$

$$= (b-a)\left[\frac{3ab+b^2+a^2-2ab}{3}\right]$$

$$= \frac{(b-a)(b^2+a^2+ab)}{3} = \frac{b^3-a^3}{3}$$

2. Evaluate $\int_a^b \cos x\,dx$ as limit of sum.

Soln :- Let $f(x) = \cos x$ and $nh = b - a$

$$\therefore \int_a^b \cos dx = \underset{h\to 0}{\mathrm{Lt}}\, h\left[\begin{matrix} (f(a)+f(a+h)+f(a+2h) \\ +\dots\dots+f\{a+(n-1)h\}\end{matrix}\right]$$

$$= \underset{h\to 0}{\mathrm{Lt}}\, h\left[\begin{matrix} \cos a+\cos(a+h)+\cos(a+2h) \\ +\dots\dots+\cos\{a+(n-1)h\}\end{matrix}\right]$$

$$= \underset{h\to 0}{\mathrm{Lt}}\left[\frac{\cos\left\{a+(n-1)\frac{h}{2}\right\}\sin\frac{nh}{2}}{\frac{\sin h/2}{h}}\right]$$

$$= \underset{h\to 0}{\mathrm{Lt}}\left[\frac{\cos\left(a+\frac{nh}{2}-\frac{h}{2}\right)\sin\frac{nh}{2}}{\frac{\sin h/2}{h}}\right]$$

$$= \underset{h\to 0}{\mathrm{Lt}}\left[\frac{2\cos\left(a+\frac{b-a}{2}-\frac{h}{2}\right)\sin\frac{b-a}{2}}{\frac{\sin h/2}{h/2}}\right]$$

$$= \frac{2\cos\left(a+\frac{b-a}{2}-0\right)\sin\frac{b-a}{2}}{1}$$

$$= \left\{2\cos\frac{b+a}{2}\sin\frac{b-a}{2}\right\}$$

$$= \left[\sin\left\{\frac{b+a}{2}+\frac{b-a}{2}\right\}-\sin\left\{\frac{b+a}{2}-\frac{b-a}{2}\right\}\right]$$

$$= \sin b - \sin a$$

3. Evaluate $\int_0^{\sqrt{2}} \sqrt{2-x^2}\,dx$

Soln :- Given $\int_0^{\sqrt{2}} \sqrt{2-x^2}\,dx$

$$\Rightarrow \int_0^{\sqrt{2}} \sqrt{\left(\sqrt{2}\right)^2-x^2}\,dx$$

$$\Rightarrow \left[\frac{x\sqrt{2-x^2}}{2}+\frac{\left(\sqrt{2}\right)^2}{2}\sin^{-1}\frac{x}{\sqrt{2}}\right]_0^{\sqrt{2}}$$

$$\Rightarrow \left(\frac{\sqrt{2}.0}{2}+\sin^{-1}(1)\right)-\left(\frac{0\sqrt{2}}{2}+\sin^{-1}(0)\right)$$

$$\Rightarrow \left(0+\frac{\pi}{2}\right)-(0+0)=\frac{\pi}{2}$$

****

APPLICATIONS OF DERIVATIVES

MAXIMA AND MINIMA

1. What is an increasing function?

Ans:- A function $y = f(x)$ is said to be an increasing function of x in an interval $a < x < b$ of its domain, if the value of y increases as x increases.

2. What is an decreasing function?

Ans:- A function $y = f(x)$ is said to be a decreasing function of x in an interval $a < x < b$ of its domain, if the value of y decreases as x increases.

(Contd.....)

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುವ ಭೀತಿ: ಪ್ರಿಯಕರನ ಜೊತೆ ಸೇರಿ ಕೃತ್ಯ

ಇಬ್ಬರು ಮಕ್ಕಳ ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಸ್ವೀಟಿ

ಗ್ರೆಗೋರಿ

ಅಪರಾಧ ಸುದ್ದಿ

ರಾಮನಗರ: ಅಕ್ರಮ ಸಂಬಂಧಕ್ಕೆ ಮಕ್ಕಳು ಅಡ್ಡಿಯಾಗುತ್ತವೆ ಎಂದು ಮಹಿಳೆಯೊಬ್ಬಳು ಪ್ರಿಯಕರನ ಜೊತೆಗೂಡಿ ವಾರದ ಅಂತರದಲ್ಲಿ ತನ್ನ ಇಬ್ಬರು ಮಕ್ಕಳನ್ನು ಕೊಲೆ ಮಾಡಿ ತಾನೇ ಅಂತ್ಯಕ್ರಿಯೆ ಮಾಡಿದ ಘಟನೆ ನಗರದಲ್ಲಿ ನಡೆದಿದೆ.

ಸ್ಮಶಾನದ ಕಾವಲುಗಾರ ನೀಡಿದ ಸುಳಿವಿನ ಮೇರೆಗೆ ಮಹಿಳೆ ಮತ್ತು ಆಕೆಯ ಪ್ರಿಯಕರನನ್ನು ಪತ್ತೆ ಹಚ್ಚಿದ ನಗರದ ಐಜೂರು ಠಾಣೆ ಪ್ರಭಾರ ಪಿಎಸ್ಐ ದುರಗಪ್ಪ ನೇತೃತ್ವದ ತಂಡವು ಮಕ್ಕಳ ಕೊಲೆ ರಹಸ್ಯ ಭೇದಿಸಿ ಹಂತಕರನ್ನು ಬಂಧಿಸಿದ್ದಾರೆ.

ಎರಡು ವರ್ಷದ ಕಬೀಲ ಮತ್ತು 11 ತಿಂಗಳ ಕೂಸು ಕಬೀಲನ್ ತಾಯಿಯ ಅಕ್ರಮ ಸಂಬಂಧಕ್ಕೆ ಬಲಿಯಾದ ಮಕ್ಕಳು. ಮಕ್ಕಳ ತಾಯಿ ಸ್ವೀಟಿ (24) ಹಾಗೂ ಆಕೆಯ ಪ್ರಿಯಕರ ಗ್ರೆಗೋರಿ ಫ್ರಾನ್ಸಿಸ್ (27) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಸ್ವೀಟಿ ಬೆಂಗಳೂರಿನ ಬಿಬಿಎಂಪಿಯಲ್ಲಿ ಪೌರ ಕಾರ್ಮಿಕನಾಗಿರುವ ಟ್ಯಾನರಿ ರಸ್ತೆಯ ಎ.ಕೆ. ಕಾಲೊನಿಯ ಶಿವ ಎಂಬುವರನ್ನು ನಾಲ್ಕು ವರ್ಷದ ಹಿಂದೆ ಮದುವೆಯಾಗಿದ್ದಳು. ದಂಪತಿಗೆ ಇಬ್ಬರು ಮಕ್ಕಳಿದ್ದರು.

ಮನೆ ಕೆಲಸ ಮಾಡುತ್ತಿದ್ದ ಸ್ವೀಟಿ ಆರು ತಿಂಗಳಿಂದ ಕಾಲ್ ಸೆಂಟರ್ ಉದ್ಯೋಗಿ ಗ್ರೆಗೋರಿ ಫ್ರಾನ್ಸಿಸ್ ಎಂಬಾತನ ಜೊತೆ ಅಕ್ರಮ ಸಂಬಂಧ ಹೊಂದಿದ್ದಳು.

ಸೆಪ್ಟೆಂಬರ್ 15ರಂದು ಪತಿ ಕೆಲಸಕ್ಕೆ ಹೋದಾಗ ಸ್ವೀಟಿ, ಮಕ್ಕಳನ್ನು ಕರೆದುಕೊಂಡು ಪ್ರಿಯಕರನೊಂದಿಗೆ ರಾಮನಗರಕ್ಕೆ ಬಂದಿದ್ದಳು. ಇಲ್ಲಿನ ಜಾಲಮಂಗಲ ರಸ್ತೆಯ ಮಂಜುನಾಥ ಬಡಾವಣೆಯಲ್ಲಿ ದಂಪತಿ ಎಂದು ಸುಳ್ಳು ಹೇಳಿ ಮನೆಯೊಂದನ್ನು ಬಾಡಿಗೆ ಪಡೆದು ವಾಸವಾಗಿದ್ದರು.

ಪತ್ನಿ ಮತ್ತು ಮಕ್ಕಳನ್ನು ಹುಡುಕಾಡಿದ್ದ ಶಿವ, ತನ್ನ ಪತ್ನಿ, ಮಕ್ಕಳು ಕಾಣೆಯಾಗಿದ್ದಾರೆ ಎಂದು ಬೆಂಗಳೂರಿನ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯಲ್ಲಿ ಸೆ.17ರಂದು ದೂರು ಕೊಟ್ಟಿದ್ದರು.

ಇತ್ತ ರಾಮನಗರದಲ್ಲಿ ನೆಲೆಸಿದ್ದ ಜೋಡಿ, ತಮ್ಮ ಅಕ್ರಮ ಸಂಬಂಧಕ್ಕೆ ಮಕ್ಕಳು ಅಡ್ಡಿಯಾಗುತ್ತಿವೆ ಎಂದು ಎರಡು ವರ್ಷದ ಕಬೀಲನನ್ನು ಅಕ್ಟೋಬರ್ 1ರಂದು ರಾತ್ರಿ ಹೊಡೆದು ಸಾಯಿಸಿದ್ದರು. ರಾಮನಗರದ ಎಪಿಎಂಸಿ ಬಳಿ ಮಸಣಕ್ಕೆ ಬೆಳಗ್ಗೆ ಶವ ತಂದಿದ್ದ ಜೋಡಿ, ಅನಾರೋಗ್ಯದಿಂದ ಮಗು ತೀರಿಕೊಂಡಿದೆ ಎಂದು ಕಾವಲುಗಾರನಿಗೆ ಸುಳ್ಳು ಹೇಳಿ ಅಂತ್ಯಕ್ರಿಯೆ ನಡೆಸಿದ್ದರು.

ಫೋಟೊ ತೆಗೆದಿದ್ದ ಕಾವಲುಗಾರ: ಅದಾದ ವಾರದ ಬಳಿಕ ಅ.7ರಂದು 11 ತಿಂಗಳ ಕೂಸು ಕಬೀಲನ್‌ನನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಶವವನ್ನು ಮತ್ತೇ ಅದೇ ಮಸಣಕ್ಕೆ ತಂದು ಮೊದಲ ಮಗುವನ್ನು ಹೂತಿದ್ದ ಸ್ಥಳದಲ್ಲೇ ಅಂತ್ಯಕ್ರಿಯೆ ನಡೆಸಿದ್ದರು.

ಈ ಬಾರಿ 'ಅನಾರೋಗ್ಯದಿಂದ ಬಳಲುತ್ತಿದ್ದ ಮಗು ಶಸ್ತ್ರಚಿಕಿತ್ಸೆ ಮಾಡಿಸಿದರೂ ಉಳಿಯಲಿಲ್ಲ' ಎಂದು ಕಾವಲುಗಾರನಿಗೆ ಸುಳ್ಳು ಹೇಳಿದ್ದರು ಎಂದು ಪೊಲೀಸರು ತಿಳಿಸಿದರು.

ವಾರದ ಅಂತರದಲ್ಲಿಯೇ ಎರಡು ಮಕ್ಕಳು ಸಾವನ್ನಪ್ಪಿದ ಬಗ್ಗೆ ಅನುಮಾನಗೊಂಡಿದ್ದ ಮಸಣದ ಕಾವಲುಗಾರ ಮಗುವಿನ ಶವದ ಜೊತೆಗೆ ಆರೋಪಿಗಳ ಫೋಟೊವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ. ಅದನ್ನು ಪೊಲೀಸರಿಗೆ ಕಳಿಸಿ ಕೊಟ್ಟಿದ್ದ. ಈ ಸುಳಿವು ಆಧರಿಸಿ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ.

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುತ್ತವೆ ಎಂದು ಮಕ್ಕಳನ್ನು ಕೊಲೆ ಮಾಡಿದ್ದಾಗಿ ಆರೋಪಿಗಳು ತನಿಖೆ ವೇಳೆ ಒಪ್ಪಿಕೊಂಡಿದ್ದಾರೆ. ಸೋಮವಾರ ಮಕ್ಕಳಿಬ್ಬರ ಶವವನ್ನು ಹೊರ ತೆಗೆದು ಪರೀಕ್ಷೆ ನಡೆಸಲಾಗುವುದು. ಸದ್ಯ ಆರೋಪಿಗಳಿಬ್ಬರು ಪೊಲೀಸ್ ವಶದಲ್ಲಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

ಹಿಂದೆಯೂ ಪರಾರಿಯಾಗಿದ್ದ ಪತ್ನಿ

ಆರೋಪಿ ಸ್ವೀಟಿ ಕೆಲಸ ಮಾಡುತ್ತಿದ್ದ ಮನೆಗಳ ಬಳಿ ಫ್ರಾನ್ಸಿಸ್ ವಾಕಿಂಗ್ ಮಾಡುತ್ತಿದ್ದ. ಆಗ, ಇಬ್ಬರ ನಡುವೆ ಶುರುವಾಗಿದ್ದ ಪರಿಚಯ ಕೆಲ ದಿನಗಳ ಬಳಿಕ ಪ್ರೇಮಕ್ಕೆ ತಿರುಗಿತ್ತು.

ಆಕೆಗೆ ಇಬ್ಬರು ಮಕ್ಕಳಿರುವ ಸಂಗತಿ ಫ್ರಾನ್ಸಿಸ್‌ಗೆ ಗೊತ್ತಿದ್ದರೂ ಆಗಾಗ ಭೇಟಿ ಮಾಡುತ್ತಿದ್ದ. ಆರು ತಿಂಗಳಿಂದ ಇಬ್ಬರೂ ಅಕ್ರಮ ಸಂಬಂಧ ಹೊಂದಿದ್ದರು.

ಜುಲೈ ತಿಂಗಳಲ್ಲಿ ಮಕ್ಕಳ ಸಮೇತ ಮನೆ ಬಿಟ್ಟು ಪ್ರಿಯಕರನ ಜೊತೆ ರಾಮನಗರಕ್ಕೆ ಬಂದು ಒಂದೂವರೆ ತಿಂಗಳು ವಾಸವಾಗಿದ್ದಳು. ಕೆಲವು ದಿನಗಳ ಬಳಿಕ ಮನೆಗೆ ಒಬ್ಬಳೇ ವಾಪಸ್ಸಾಗಿದ್ದಳು.

ದರ್ಶನ್ ಜಾಮೀನು ಅರ್ಜಿ ಇಂದು ಆದೇಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಅಪಹರಣ, ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ 57ನೇ ಸಿಸಿಎಚ್ ನ್ಯಾಯಾಲಯ, ಸೋಮವಾರ (ಅಕ್ಟೋಬರ್ 14) ಆದೇಶ ಪ್ರಕಟಿಸಲಿದೆ.

ಎರಡೂ ಕಡೆಯವರ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ಜೈಶಂಕರ್ ಅವರು ಅ. 14ಕ್ಕೆ ಜಾಮೀನು ಅರ್ಜಿಗೆ ಸಂಬಂಧಿಸಿದ ಆದೇಶ ಪ್ರಕಟಿಸುವುದಾಗಿ ಗುರುವಾರ ತಿಳಿಸಿದ್ದರು.

ಇದೇ ಪ್ರಕರಣದಲ್ಲಿ ಆರೋಪಿಗಳಾಗಿರುವ ದರ್ಶನ್ ಆಪ್ತರಾದ ಪವಿತ್ರಾಗೌಡ, ರವಿಶಂಕರ್, ನಾಗರಾಜ್, ಲಕ್ಷ್ಮಣ್ ಹಾಗೂ ದೀಪಕ್ ಅವರ ಜಾಮೀನು ಅರ್ಜಿಗಳಿಗೆ ಸಂಬಂಧಿಸಿದ ಆದೇಶವೂ ಸೋಮವಾರವೇ ಪ್ರಕಟ ಆಗಲಿದೆ.

ಕೊಲೆ ಆರೋಪದ ಅಡಿ ಜೂನ್ 11ರಂದು ದರ್ಶನ್ ಅವರನ್ನು ಬಂಧಿಸಲಾಗಿತ್ತು.

ದರ್ಶನ್

ದರ್ಶನ್ ಅವರು ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಪರವಾಗಿ ಸೆಪ್ಟೆಂಬರ್ 21ರಂದು ವಕೀಲರು ಜಾಮೀನು ಅರ್ಜಿ ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಪ್ರಸನ್ನ ಕುಮಾರ್ ಅವರು ವಾದ ಮಂಡಿಸಿದ್ದರು. ದರ್ಶನ್ ಸೇರಿ ನಾಲ್ವರಿಗೆ ಜಾಮೀನು ಮಂಜೂರು ಮಾಡದಂತೆ ಎಸ್‌ಪಿಪಿ ಆಕ್ಷೇಪಣೆ ಸಲ್ಲಿಸಿದ್ದಾರೆ.

ದರ್ಶನ್ ಪರ ವಕೀಲ ಸಿ.ವಿ. ನಾಗೇಶ್ ಹಾಗೂ ಪವಿತ್ರಾ ಗೌಡ ಪರವಾಗಿ ವಕೀಲ ಟಾಮಿ ಸೆಬಾಸ್ಟಿಯನ್ ವಾದ ಮಂಡಿಸಿದ್ದರು.

ಭಾರತದ ಮಹಿಳಾ ತಂಡವು ಥಾಯ್ಲೆಂಡ್ ಥ್ರೋಬಾಲ್ ಫೆಡರೇಷನ್ ಆಶ್ರಯದಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಇಂಡೊ– ಥಾಯ್ಲೆಂಡ್ ಅಂತರರಾಷ್ಟ್ರೀಯ ಥ್ರೋಬಾಲ್ ಟೆಸ್ಟ್ ಸರಣಿಯನ್ನು 3–0ಯಿಂದ ಗೆದ್ದುಕೊಂಡಿತು. (ನಿಂತವರು) ಎಡದಿಂದ; ಸಂತೋಷ್ (ರೆಫರಿ) ರವಿನಾ, ಸಾಹಿತಿ, ಅಮೃತಾ, ಅವಿನಾಶ್ (ಕೋಚ್) ಮಣಿದೀಪ, ಚೈತನ್ಯಾ, ಪ್ರಸನ್ನಕುಮಾರಿ, ರನಿತಾ, ರಾಣಿ (ಮ್ಯಾನೇಜರ್); (ಕುಳಿತವರು) ವೈಷ್ಣವಿ, ಸ್ವಾತಿ, ಮೈತ್ರಿ, ಸಾಯಿ ಪ್ರಿಯಾ, ಅನಿಷ್ಕಾ ಚಿತ್ರದಲ್ಲಿದ್ದಾರೆ

'ಒಳಮೀಸಲಾತಿ ಜಾರಿ: 'ಕೈ'ಗೆ ಬದ್ಧತೆ ಇಲ್ಲ'

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಒಳಮೀಸಲಾತಿ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆಯೇ ಹೊರತು ಅದನ್ನು ಜಾರಿಗೊಳಿಸುವ ಬದ್ಧತೆ ತೋರಿಸುತ್ತಿಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಜಾತಿ ಜನಗಣತಿ ಬಗ್ಗೆ ಮಾತನಾಡುವುದನ್ನು ಕಾಂಗ್ರೆಸ್ ನಾಯಕರು ನಿತ್ಯದ ಕಾಯಕ ಮಾಡಿಕೊಂಡಿದ್ದಾರೆ ಎಂದರು.

'ಒಳ ಮೀಸಲಾತಿಗೆ ಪ್ರಧಾನಿ ಮೋದಿಯವರ ಸಹಮತವಿದೆ. ಆದರೆ, ಕಾಂಗ್ರೆಸ್ ಸರ್ಕಾರ ಮಾತ್ರ ಒಳ ಮೀಸಲಾತಿ ಜಾರಿಗೆ ಮೀನಮೇಷ ಎಣಿಸುತ್ತಿದೆ. ಹಿಂದಿನ ನಮ್ಮ ಬಿಜೆಪಿ ಸರ್ಕಾರ ಒಳಮೀಸಲಾತಿ ವರ್ಗೀಕರಣ ಮಾಡಿತ್ತು. ಆದರೆ, ಅದನ್ನು ಅನುಷ್ಠಾನಗೊಳಿಸಲು ಸಿದ್ದರಾಮಯ್ಯ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ದೂರಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

ಕಸ ತೆರವುಗೊಳಿಸಿ

ಗಾಂಧಿನಗರದ ಮೂರನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಕೂಡಲೇ ಇಲ್ಲಿನ ಕಸ ತೆರವುಗೊಳಿಸುವ ಮೂಲಕ ಸ್ವಚ್ಛ ಮತ್ತು ಸುಂದರ ನಗರ ನಿರ್ಮಿಸಬೇಕು.

ಆರ್. ರಮೇಶ್, ಗಾಂಧಿನಗರ


ಗಾಂಧಿನಗರದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ

ಪೀಣ್ಯ: ರಸ್ತೆಗುಂಡಿ ಮುಚ್ಚಿ

ಪೀಣ್ಯ ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿರುವ ಭೈರವೇಶ್ವರ ಕೈಗಾರಿಕಾ ಪ್ರದೇಶ, ನಡಿಕೆರಪ್ಪ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕಿಸುವ ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ, ವಾಹನ ಸಂಚಾರ ದುಸ್ತರವಾಗಿದೆ. ರಸ್ತೆ ಹಾಳಾದ ಪರಿಣಾಮ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಮಳೆಯಾದರೆ ರಸ್ತೆ ಕೆಸರುಗದ್ದೆಯಾಗಿ ಮಾರ್ಪಡುತ್ತದೆ. ಕಾರ್ಖಾನೆಗಳಲ್ಲಿ ತಯಾರಾದ ಉತ್ಪನ್ನಗಳು ಮತ್ತು ವಸ್ತುಗಳನ್ನು ಸಾಗಿಸುವುದೇ ಕಷ್ಟವಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು.

ಆರ್. ಕುಮಾರ್, ಪೀಣ್ಯ

ಪೀಣ್ಯ ಎರಡನೇ ಹಂತದಲ್ಲಿರುವ ರಸ್ತೆಯ ದುಃಸ್ಥಿತಿ

ಅಪಾಯಕಾರಿ ಕಂಬ ತೆರವುಗೊಳಿಸಿ

ಪಾದಚಾರಿ ಮಾರ್ಗದಲ್ಲಿರಿಸಿರುವ ಬೃಹತ್ ಕಂಬ

ನಗರದ ಮಂತ್ರಿ ಮಾಲ್ ಮೆಟ್ರೊ ರೈಲು ನಿಲ್ದಾಣದ ಹೊರ ದ್ವಾರದ ಪಕ್ಕದಲ್ಲಿರುವ (ಮೆಜೆಸ್ಟಿಕ್‌ಗೆ ಹೋಗುವ ಮಾರ್ಗದ) ಪಾದಚಾರಿ ಮಾರ್ಗದ ಮೇಲೆ ಬೀದಿ ದೀಪ ಅಳವಡಿಸುವುದಕ್ಕಾಗಿ ತಂದಿರುವ ಬೃಹತ್ ಕಂಬವೊಂದು ಬಹಳ ದಿನಗಳಿಂದ ಮೈಚಾಚಿ ಮಲಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಸಂಚಾರ ದಟ್ಟಣೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಈ ವಿದ್ಯುತ್ ಕಂಬವನ್ನು ಪಾದಚಾರಿ ಮಾರ್ಗದಲ್ಲಿ ಇಟ್ಟಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದೆ. ಕೂಡಲೇ ಬಿಬಿಎಂಪಿ ಈ ಕಂಬವನ್ನು ಸ್ಥಳಾಂತರಿಸಬೇಕು.

ನಾಗರಾಜ್, ಮಲ್ಲೇಶ್ವರ

ಪಾದಚಾರಿ ಮಾರ್ಗ ದುರಸ್ತಿಗೊಳಿಸಿ

ಹೆಬ್ಬಾಳ ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಸಿಮೆಂಟ್ ಸ್ಲ್ಯಾಬ್ ಮುರಿದಿರುವುದು

ಹೆಬ್ಬಾಳದ ಕೆಂಪಾಪುರ ಮುಖ್ಯ ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಚಪ್ಪಡಿ ಕಲ್ಲು ಮುರಿದು ಬಿದ್ದಿದೆ. ಇಲ್ಲಿ ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ಓಡಾಡುವುದು ಕಷ್ಟವಾಗುತ್ತಿದೆ. ಚಪ್ಪಡಿ ಕಲ್ಲು ಮುರಿದು ಬಿದ್ದ ಪರಿಣಾಮ ಜನ ಮುಖ್ಯ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ, ಸಂಚಾರ ದಟ್ಟಣೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇಲ್ಲಿನ ಪಾದಚಾರಿ ಮಾರ್ಗದ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಹೆಬ್ಬಾಳ

ಉದ್ಯಾನದ ನೆಲಹಾಸು ಸರಿಪಡಿಸಿ


ಹನುಮಂತನಗರ ಉದ್ಯಾನದ ನೆಲಹಾಸು ಕಿತ್ತು ಹೋಗಿರುವುದು

ಹನುಮಂತನಗರದ ಕುಮಾರಸ್ವಾಮಿ ದೇವಸ್ಥಾನದ ಉದ್ಯಾನದಲ್ಲಿನ ನೆಲಹಾಸಿಗೆ ಅಳವಡಿಸಿದ್ದ ಟೈಲ್ಸ್‌ಗಳು ಕಿತ್ತು ಹೋಗಿವೆ. ಇದರಿಂದ, ವಾಯುವಿಹಾರಕ್ಕೆ ಬರುವ ವೃದ್ಧರು, ಮಹಿಳೆಯರು ಮತ್ತು ಮಕ್ಕಳ ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ಇಲ್ಲಿನ ನೆಲಹಾಸು ಸರಿಪಡಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಕೆ.ಎಸ್. ನಾಗರಾಜ್, ಹನುಮಂತನಗರ

ದಟ್ಟಣೆ ನಡುವೆ ಜನರು ಹೈರಾಣ, ಪರ್ಯಾಯ ಮಾರ್ಗಕ್ಕೆ ಮನವಿ

8ನೇ ಮೈಲಿಯಲ್ಲಿ ಸಂಚಾರ ಸಂಕಟ

• ಗಾಣಧಾಳು ಶ್ರೀಕಂಠ

ಬೆಂಗಳೂರು: 'ಸಿಗ್ನಲ್ ನೋಡ್ಕೊಂಡು, ಕೈಯಲ್ಲಿ ಜೀವ ಹಿಡ್ಕೊಂಡು ರಸ್ತೆ ದಾಟಬೇಕು. ರಸ್ತೆ ದಾಟಿ ಆ ಬದಿಗೆ ಹೋದರೆ ನಿಲ್ಲೋಕೂ ಜಾಗವಿರುವುದಿಲ್ಲ, ಫುಟ್‌ಪಾತ್‌ನಲ್ಲೂ ವಾಹನಗಳ ಸಾಲು. ಸ್ವಲ್ಪ ಹೊತ್ತು ನಿಂತು ಹೊರಡೋಣಾ ಅಂದರೆ, ವಾಹನಗಳ ಹಾರನ್, ಹೊಗೆ, ದೂಳು.. ಅಬ್ಬಾ! ತಲೆ ಚಿಟ್ ಹಿಡಿಯುತ್ತದೆ... ಬೆಳಿಗ್ಗೆ- ಸಂಜೆಯ ಓಡಾಟ ನಿಜಕ್ಕೂ ನರಕಯಾತನೆ...'

ತುಮಕೂರು ರಸ್ತೆಯ 8ನೇ ಮೈಲಿ ಜಂಕ್ಷನ್‌ನಲ್ಲಿ ರಸ್ತೆ ದಾಟುವ ಬಹುತೇಕ ನಾಗರಿಕರ ನೋವು, ಹತಾಶೆಯ ನುಡಿಗಳಿವು. ಈ ಸಮಸ್ಯೆ ಬಹಳ ವರ್ಷಗಳಿಂದ ಇದೆ. ಆದರೆ, ಒಂದೆರಡು ವರ್ಷಗಳಿಂದೀಚೆಗೆ ವಾಹನಗಳ ಸಂಚಾರ ಹೆಚ್ಚಾದಂತೆ, ಸಮಸ್ಯೆಗಳು ಹೊಸ ರೂಪ ಪಡೆದುಕೊಂಡಿವೆ.

ಬೆಂಗಳೂರು ಪ್ರವೇಶಿಸುವ ರಾಜ್ಯದ ಸುಮಾರು 20 ಜಿಲ್ಲೆಗಳ ಪ್ರಯಾಣಿಕರಿಗೆ 8ನೇ ಮೈಲಿ ಜಂಕ್ಷನ್ ಹೆಬ್ಬಾಗಿಲು. ಅಷ್ಟೇ ಅಲ್ಲ, ಹೆಸರಘಟ್ಟ ರಸ್ತೆ ಮೂಲಕ ದೊಡ್ಡಬಳ್ಳಾಪುರ, ನೆಲಗೆದರನಹಳ್ಳಿ ಮೂಲಕ ಮಾಗಡಿ ರಸ್ತೆ ಸಂಪರ್ಕಿಸಲು ಈ ವೃತ್ತವನ್ನು ದಾಟಬೇಕು. ಈ ಜಂಕ್ಷನ್‌ನ ನಾಲ್ಕೈದು ಕಿ.ಮೀ ಸುತ್ತಲಿನ ಬಡಾವಣೆಗಳಲ್ಲಿ ಸಣ್ಣ ಮತ್ತು ಮಧ್ಯವರ್ಗದ ಕೈಗಾರಿಕೆಗಳಿವೆ. ಹೀಗಾಗಿ ದಿನದ 24 ಗಂಟೆಯೂ ಜನದಟ್ಟಣೆ, ವಾಹನದಟ್ಟಣೆ ನಿರಂತರವಾಗಿರುತ್ತದೆ. ವಾರಾಂತ್ಯ, ಹಬ್ಬದ ರಜೆ ದಿನಗಳಲ್ಲಂತೂ ಇಲ್ಲಿನ ಸಂಚಾರ ನಿಜಕ್ಕೂ ಸಂಕಟವೇ.

ದಟ್ಟಣೆ ನಿರಂತರ: ವಾಹನ ಸಂಚಾರ ನಿಯಂತ್ರಣಕ್ಕಾಗಿ ವೃತ್ತದ ನಾಲ್ಕು ದಿಕ್ಕುಗಳಲ್ಲೂ ಮಾನವ ಚಾಲಿತ ಸಂಚಾರ ಸಿಗ್ನಲ್‌ಗಳಿವೆ. ಇದಕ್ಕೆ ಹೊಂದಿಕೊಂಡಂತಿರುವ ಸ್ಥಳಗಳಲ್ಲಿ ಬಸ್‌ಗಳನ್ನು ನಿಲ್ಲಿಸಿ, ಪ್ರಯಾಣಿಕರನ್ನು ಇಳಿಸಿ, ಹತ್ತಿಸಿಕೊಳ್ಳಲಾಗುತ್ತದೆ. ಇದರಿಂದಲೇ ವಾಹನ ದಟ್ಟಣೆ ಹೆಚ್ಚಾಗುತ್ತದೆ, ಪಾದಚಾರಿಗಳು ರಸ್ತೆ ದಾಟಲು ಹರಸಾಹಸಪಡಬೇಕು' ಎಂದು ಸ್ಥಳೀಯರು ಹೇಳುತ್ತಾರೆ.

'ರಸ್ತೆ ದಾಟುವಾಗ ಒಬ್ಬರೇ ಇದ್ದರೆ, ವಾಹನಗಳ ನಡುವೆ ನುಸುಳಿಕೊಂಡು ಹೋಗಬಹುದು. ಪುಟ್ಟ ಮಕ್ಕಳೋ, ಹಿರಿಯರು ಜೊತೆಯಲ್ಲಿದ್ದರೆ ಅಥವಾ ಕೈನಲ್ಲಿ ಲಗೇಜ್ ಇದ್ದರೆ, ಭಾರಿ ಸಾಹಸಪಡಬೇಕು. ಸಿಗ್ನಲ್ ನೋಡುತ್ತಾ ಭಯದಲ್ಲಿ ರಸ್ತೆ ದಾಟುವಾಗ ಹಲವರು ಉರುಳಿಬಿದ್ದು ಗಾಯಗೊಂಡಿರುವ ಉದಾಹರಣೆಗಳಿವೆ' ಎನ್ನುತ್ತಾರೆ ದಾಸರಹಳ್ಳಿಯ ನಿವಾಸಿ ರಾಜೇಂದ್ರ.

ನಾಲ್ಕು ದಿಕ್ಕುಗಳಲ್ಲೂ ಬಸ್ ನಿಲುಗಡೆಗೆ ವೃತ್ತದಿಂದ ಸ್ವಲ್ಪ ದೂರದಲ್ಲಿ ತಂಗುದಾಣಗಳಿವೆ. ಆದರೆ, ಕೆಲವು ಬಸ್‌ಗಳು ಮಾತ್ರ ಅಲ್ಲಿ ನಿಲ್ಲುತ್ತವೆ. ಬಹುತೇಕ ಪ್ರಯಾಣಿಕರು ಜಂಕ್ಷನ್ ಪಕ್ಕದಲ್ಲೇ ಕಾಯುವುದರಿಂದ, ಇಲ್ಲೇ ಬಸ್‌ಗಳನ್ನು ನಿಲ್ಲಿಸುತ್ತಾರೆ' ಎಂದು ಸುತ್ತಲಿನ ಅಂಗಡಿಯವರು ಹೇಳುತ್ತಾರೆ.

'8ನೇ ಮೈಲಿ ಸುತ್ತಮುತ್ತ ವಾಹನ ಸಂಚಾರ ಹೆಚ್ಚು. ಹಾಗಾಗಿ, ಈ ವೃತ್ತದಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಮತ್ತು ರಸ್ತೆ ದಾಟಲು ಪರ್ಯಾಯ ಮಾರ್ಗವನ್ನು ರೂಪಿಸಬೇಕು. ಜಂಕ್ಷನ್‌ನ ನಾಲ್ಕು ಭಾಗದಲ್ಲಿರುವ ನಿಲ್ದಾಣಗಳನ್ನು ವಿಸ್ತರಿಸಬೇಕು. ಅಲ್ಲೇ ಪ್ರಯಾಣಿಕರನ್ನು ಇಳಿಸಿ ಹತ್ತಿಸುವ ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕು. ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕು. ಇದರಿಂದ ಸಂಚಾರ ದಟ್ಟಣೆ ಸ್ವಲ್ಪ ನಿಯಂತ್ರಣಕ್ಕೆ ಬರುತ್ತದೆ' ಎಂಬುದು ಸ್ಥಳೀಯರ ಒತ್ತಾಯ.

ಎಂಟನೇ ಮೈಲಿ ಸರ್ಕಲ್‌ನಲ್ಲಿ ಜನ ರಸ್ತೆ ದಾಟುವುದಕ್ಕೆ ಕಷ್ಟಪಡುತ್ತಾರೆ. ರಸ್ತೆ ಅಗಲೀಕರಣ ಮಾಡಿದರೆ, ಟ್ರಾಫಿಕ್ ಕಿರಿಕಿರಿ, ಅಪಘಾತಗಳು ಕಡಿಮೆಯಾಗುತ್ತವೆ

ಶೇಖರ್, ಆಟೊ ಚಾಲಕ

ರಸ್ತೆಯ ಅಗಲೀಕರಣ ಮಾಡಿದರೆ, ಸಂಚಾರ ದಟ್ಟಣೆಗೆ ಪರಿಹಾರ ಸಿಗಬಹುದು. ಕಟ್ಟಡದ ಮಾಲೀಕರ ಅನುಮತಿ ಪಡೆದು ಯೋಜನೆ ರೂಪಿಸಿದರೆ ಒಳ್ಳೆಯದು

ನೀಲೇಶ್, ಅಂಗಡಿ ಮಾಲೀಕ

8ನೇ ಮೈಲಿ ಸಮೀಪದಲ್ಲಿ ಸಂಚಾರ ದಟ್ಟಣೆ (ಸಂಗ್ರಹ ಚಿತ್ರ)

'ಸರ್ವೀಸ್ ರಸ್ತೆ ವಿಸ್ತರಿಸಿ'

ಎಸ್.ಮುನಿರಾಜು

'8ನೇ ಮೈಲಿ ಜಂಕ್ಷನ್‌ನಲ್ಲಿ ಮೇಲ್ಸೇತುವೆ ಅಥವಾ ಕೆಳಸೇತುವೆ ನಿರ್ಮಾಣಕ್ಕೆ ಸ್ಥಳಾವಕಾಶವಿಲ್ಲ. ಗೊರಗುಂಟೆ ಪಾಳ್ಯದಿಂದ ಜಿಂದಾಲ್‌ವರೆಗೆ ಎರಡು ಬದಿಯಲ್ಲಿರುವ ಸರ್ವೀಸ್ ರಸ್ತೆಯನ್ನು ವಿಸ್ತರಿಸಿದರೆ ಈ ಭಾಗದಲ್ಲಿ ಸಂಚಾರ ಸುಗಮವಾಗುತ್ತದೆ. ರಾಜ್ಯ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು' ಎಂದು ಶಾಸಕ ಎಸ್. ಮುನಿರಾಜು ಒತ್ತಾಯಿಸಿದರು.

'ಜಂಕ್ಷನ್‌ಗಳಲ್ಲಿ ಅವಕಾಶವಿರುವೆಡೆ ವಾಹನಗಳು ಸಂಚರಿಸಲು ಎಡ/ಬಲ ತಿರುವಿಗೆ ಮುಕ್ತ ಅವಕಾಶ ಕಲ್ಪಿಸುವುದು ಕೂಡ ಸಂಚಾರ ಸಂಕಷ್ಟವನ್ನು ತಿಳಿಗೊಳಿಸಲು ಇರುವ ಮತ್ತೊಂದು ಪರಿಹಾರವಾಗಿದೆ' ಎಂದು ಅವರು ಅಭಿಪ್ರಾಯಪಡುತ್ತಾರೆ.

'ಸ್ವಯಂ ಚಾಲಿತ ಸಿಗ್ನಲ್ ಅಗತ್ಯ'

ವರ್ಷದ ಹಿಂದೆ ಸ್ಟ್ರಕ್ಚರ್ಡ್ ಇನ್ಫ್ರಾ ಟೀಂ ನಡೆಸಿದ ಅಧ್ಯಯನದ ಪ್ರಕಾರ, '8ನೇ ಮೈಲಿನಲ್ಲಿ ಒಂದು ತಾಸಿನಲ್ಲಿ 11,500 ವಾಹನಗಳು ಸುಗಮವಾಗಿ ಸಂಚರಿಸುವಂತಹ ವ್ಯವಸ್ಥೆ ಇದೆ. ಆದರೆ, ಒಂದು ತಾಸಿನಲ್ಲಿ ಅದಕ್ಕಿಂತ ಕಡಿಮೆ ವಾಹನಗಳು ಸಚರಿಸುತ್ತಿದ್ದರೂ ದಟ್ಟಣೆ ಕಡಿಮೆಯಾಗಿಲ್ಲ. ಅದಕ್ಕೆ ಕಾರಣ ಅವೈಜ್ಞಾನಿಕ ಸಂಚಾರ ನಿರ್ವಹಣೆ'. ಇಲ್ಲಿ, ಪೊಲೀಸರು ಸಿಗ್ನಲ್‌ಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ. ಇದು ಸ್ವಯಂ ಚಾಲಿತವಾಗಬೇಕು. ಆಯಾ ಪಥದಲ್ಲೇ ವಾಹನ ಚಲಿಸುವ ವ್ಯವಸ್ಥೆಯಾಗಬೇಕು' ಎಂದು ಅಧ್ಯಯನದಲ್ಲಿ ಸಲಹೆ ನೀಡಲಾಗಿದೆ.

'ಗ್ರಾಮೀಣ ವೈದ್ಯಕೀಯ ಶಿಕ್ಷಣಕ್ಕೆ ಉತ್ತೇಜನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಕನಸು ನನಸು ಮಾಡಬೇಕೆಂಬ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜು ಆರಂಭಿಸಲು ಸರ್ಕಾರ ನಿರ್ಧರಿಸಿದೆ. 11 ಹೊಸ ಕಾಲೇಜುಗಳ ಸ್ಥಾಪನೆಗಾಗಿ ಆರ್ಥಿಕ ಇಲಾಖೆಗೆ ಅನುಮತಿ ಕೇಳಿದ್ದೇವೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯ ಎಲೆಕ್ಟ್ರಾನಿಕ್ ಸಿಟಿ ಕ್ಯಾಂಪಸ್‌ನಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಥಮ ವರ್ಷದ ಎಂಬಿಬಿಎಸ್ ತರಗತಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಗ್ರಾಮೀಣ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣದ ಜೊತೆಗೆ ಗ್ರಾಮೀಣ ಭಾಗದವರಿಗೆ ಚಿಕಿತ್ಸೆ ಸಿಗಬೇಕೆಂಬ ಉದ್ದೇಶದಿಂದ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸ್ಥಾಪನೆ ಮಾಡಲಾಗುತ್ತಿದೆ' ಎಂದು ವಿವರಿಸಿದರು.

'ಕರ್ನಾಟಕದಲ್ಲಿ 71 ವೈದ್ಯಕೀಯ ಕಾಲೇಜುಗಳಿವೆ. ಇದು ದೇಶದ ಇತರ ರಾಜ್ಯಗಳಿಗಿಂತ ಅಧಿಕವಾಗಿದೆ. ಜೊತೆಗೆ ಈ ವರ್ಷ ಪಿಇಎಸ್, ಬಿಜಿಎಸ್ ಮತ್ತು ಎಸ್.ಆರ್. ಪಾಟೀಲ ವೈದ್ಯಕೀಯ ಕಾಲೇಜುಗಳು ಸೇರ್ಪಡೆಯಾಗಿವೆ. ಎಲ್ಲವನ್ನೂ ಸರ್ಕಾರದಿಂದಲೇ ಮಾಡಲು ಅಸಾಧ್ಯ. ಖಾಸಗಿ ಸಹಕಾರ ಕೂಡ ಅಷ್ಟೇ ಮುಖ್ಯ' ಎಂದು ಪ್ರತಿಪಾದಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಮಾತನಾಡಿ, 'ಮೊದಲಿಗೆ ಕುಪ್ಪಂನಲ್ಲಿ ವೈದ್ಯಕೀಯ ಕಾಲೇಜು ಆರಂಭಿಸಿದೆ. ಇದಕ್ಕೆಆಂಧ್ರಪ್ರದೇಶ ಸರ್ಕಾರ ಹೆಚ್ಚಿನ ಸಹಕಾರ ನೀಡಿತ್ತು. ಅಲ್ಲಿ ಯಶಸ್ವಿಯಾದ ಮೇಲೆ ನಮ್ಮ ರಾಜ್ಯದಲ್ಲಿ ಕಾಲೇಜು ಆರಂಭಿಸಿದ್ದೇನೆ. ಮೊದಲ ವರ್ಷದ ವಿದ್ಯಾರ್ಥಿಗಳಿಗೇ ಎಲ್ಲ ಮೂಲಸೌಕರ್ಯ ಒದಗಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಜೈಪುರದ ಮಹಾತ್ಮ ಗಾಂಧಿ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಅಚಲ್ ಗುಲಾಟಿ, ಪಿಇಎಸ್ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಡಿ.ಜವಾಹರ್, ಕುಲಪತಿ ಜೆ.ಸೂರ್ಯಪ್ರಸಾದ್, ವೈದ್ಯಕೀಯ ನಿರ್ದೇಶಕ ಸುರೇಶ್ ಕೃಷ್ಣಮೂರ್ತಿ, ಕುಲಸಚಿವ ಕೆ.ಎಸ್. ಶ್ರೀಧರ್, ಪಿಇಎಸ್‌ಯುಐಎಂಎಸ್‌ಆರ್ ಡೀನ್ ಟಿ.ಆರ್. ಹರಿಪ್ರಸಾದ್, ಪಿಇಎಸ್ ಸಂಸ್ಥೆಗಳ ಸಿಒಒ ಅಜೋಯ್ ಕುಮಾರ್ ಉಪಸ್ಥಿತರಿದ್ದರು.

ಪಿಇಎಸ್ ವಿಶ್ವವಿದ್ಯಾಲಯ ಎಲೆಕ್ಟ್ರಾನಿಕ್ ಸಿಟಿ ಕ್ಯಾಂಪಸ್‌ನಲ್ಲಿ ಭಾನುವಾರ ಪ್ರಥಮ ವರ್ಷದ ಎಂಬಿಬಿಎಸ್ ತರಗತಿಗಳನ್ನು ಉದ್ಘಾಟಿಸಲಾಯಿತು

ನಗರದಲ್ಲಿ ಇಂದು

ಕಳತಾವೂರ್ ಮಳಾವ್-02, ಸಜ್ಜನರ ಸಲ್ಲಾಪ-02: ಅತಿಥಿಗಳು: ಸಣ್ಣರಾಮ, ಸೂರಪ್ಪ ನಾಯಕ, ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ವಿಶೇಷ ಕಾರ್ಯಕ್ರಮ

ಸಾರ್ವಜನಿಕ ಉಪನ್ಯಾಸಗಳು: ಬಿ.ಎಸ್. ಶೈಲಜಾ, ಬಿ.ಆರ್. ಗುರುಪ್ರಸಾದ್, ಆಕಾಶ ವೀಕ್ಷಣೆ, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಸಂಜೆ 5ರಿಂದ

24ನೇ ವರ್ಷದ ಪ್ರವಚನ ವಾಹಿನಿ: 'ನರಸಿಂಹ ಪುರಾಣ' ಉಪನ್ಯಾಸ: ಗೋಪಾಲ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

ಅಮಿತ್ ಶಾ, ಜೋಶಿ ಕೇಂದ್ರದ ವೀಕ್ಷಕರು

ನವದೆಹಲಿ (ಪಿಟಿಐ): ಹರಿಯಾಣದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಬಿಜೆಪಿ ಸಂಸದೀಯ ಮಂಡಳಿಯು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರನ್ನು ಕೇಂದ್ರದ ವೀಕ್ಷಕರನ್ನಾಗಿ ಭಾನುವಾರ ನೇಮಕ ಮಾಡಿದೆ.

ಹರಿಯಾಣ ವಿಧಾನಸಭೆಯಲ್ಲಿ ಬಿಜೆಪಿಯು ಬಹುಮತ ಪಡೆದಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ವೀಕ್ಷಕರನ್ನಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್ ಅವರನ್ನು ನೇಮಕ ಮಾಡಲಾಗಿದೆ.

₹5 ಸಾವಿರ ಕೋಟಿ ಮೌಲ್ಯದ ಕೊಕೇನ್ ವಶ

ದೆಹಲಿ, ಗುಜರಾತ್ ಪೊಲೀಸರ ಜಂಟಿ ಕಾರ್ಯಾಚರಣೆ

ನವದೆಹಲಿ (ಪಿಟಿಐ): ಗುಜರಾತ್ ರಾಜ್ಯದ ಅಂಕ್ಲೇಶ್ವರದಲ್ಲಿ ದೆಹಲಿ ಮತ್ತು ಗುಜರಾತ್ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ₹5 ಸಾವಿರ ಕೋಟಿ ಮೌಲ್ಯದ 518 ಕೆ.ಜಿ. ಕೊಕೇನ್ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಐವರನ್ನು ಬಂಧಿಸಲಾಗಿದೆ.

ದೆಹಲಿಯಲ್ಲಿ 700 ಕೆ.ಜಿ. ಕೊಕೇನ್ ವಶಪಡಿಸಿಕೊಂಡಿದ್ದಕ್ಕೂ ಗುಜರಾತ್‌ನಲ್ಲಿ ಈಗ ಕೊಕೇನ್ ವಶಪಡಿಸಿಕೊಂಡಿರುವುದಕ್ಕೂ ಸಂಬಂಧ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇದರಿಂದಾಗಿ ಈವರೆಗೆ ಒಟ್ಟು 1,289 ಕೆ.ಜಿ. ಕೊಕೇನ್ ಹಾಗೂ 40 ಕೆ.ಜಿ. ಹೈಡ್ರೊಪೋನಿಕ್ ಗಾಂಜಾ ವಶಪಡಿಸಿಕೊಂಡಂತಾಗಿದೆ.

ಇವುಗಳ ಒಟ್ಟು ಮೌಲ್ಯವು ₹13 ಸಾವಿರ ಕೋಟಿಗಿಂತ ಹೆಚ್ಚು.

ಈ ಪ್ರಕರಣಗಳಲ್ಲಿ ಬಂಧಿತರ ಒಟ್ಟು ಸಂಖ್ಯೆ 12. ದೇಶದಲ್ಲಿ ಯಾವುದೇ ಕಾನೂನು ಜಾರಿ ಸಂಸ್ಥೆಯು ಈ ಪ್ರಮಾಣದಲ್ಲಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ದಾಖಲೆ ಇದುವರೆಗೆ ಇರಲಿಕ್ಕಿಲ್ಲ ಎಂದು ಮೂಲಗಳು ಹೇಳಿವೆ.

700 ಕೆ.ಜಿ. ಕೊಕೇನ್ ವಶಪಡಿಸಿಕೊಂಡಿದ್ದಕ್ಕೆ ಸಂಬಂಧಿಸಿದ ತನಿಖೆಯು, ಅಂಕ್ಲೇಶ್ವರದಲ್ಲಿ ಇರುವ ಅವ್ಕಾರ್ ಡ್ರಗ್ಸ್ ಲಿಮಿಟೆಡ್ ಕಂಪನಿಯಿಂದ ಮಾದಕ ವಸ್ತುಗಳನ್ನು ತರಲಾಗುತ್ತಿದೆ ಎಂಬುದನ್ನು ಬಹಿರಂಗಪಡಿಸಿತು ಎಂದು ದೆಹಲಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾನುವಾರ ಗುಜರಾತ್‌ಗೆ ತೆರಳಿದ ವಿಶೇಷ ಘಟಕದ ತಂಡವು, ಕಂಪನಿಯ ಗೋದಾಮಿನಿಂದ ಕೊಕೇನ್ ವಶಪಡಿಸಿಕೊಂಡಿದೆ ಎಂದು ಅವರು ಹೇಳಿದ್ದಾರೆ. ಆರೋಪಿಗಳನ್ನು ಇನ್ನಷ್ಟು ವಿಚಾರಣೆಗೆ ಒಳಪಡಿಸಲಾಗಿದೆ.

ನಗರದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಪ್ರಕರಣ

8 ತಿಂಗಳಲ್ಲಿ ₹1,242 ಕೋಟಿ ವಂಚನೆ

• ಚೇತನ್ ಬಿ.ಸಿ.

ಮುಖ್ಯಾಂಶಗಳು

- ಈ ವರ್ಷ 12,356 ಸೈಬರ್ ಅಪರಾಧ ಪ್ರಕರಣ ದಾಖಲು
- ಪ್ರತಿ ತಿಂಗಳು ಸರಾಸರಿ 1,546 ಪ್ರಕರಣ
- ಉದ್ಯೋಗದ ಹೆಸರಿನಲ್ಲಿ ವಂಚನೆ

ಬೆಂಗಳೂರು: ನಗರದಲ್ಲಿ ವರ್ಷದಿಂದ ವರ್ಷಕ್ಕೆ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪ್ರಸಕ್ತ ವರ್ಷ ಎಂಟು ತಿಂಗಳಲ್ಲಿ ₹1,242.7 ಕೋಟಿ ವಂಚಕರ ಪಾಲಾಗಿದೆ. 2021, 2022 ಮತ್ತು 2023ರವರೆಗಿನ ಮೂರು ವರ್ಷಗಳಲ್ಲಿ ಸಂತ್ರಸ್ತರು ಕಳೆದುಕೊಂಡ ಒಟ್ಟು ಮೊತ್ತಕ್ಕಿಂತ ₹214.6 ಕೋಟಿ ಹೆಚ್ಚು ಹಣ ಎಂಟೇ ತಿಂಗಳಲ್ಲಿ ವಂಚನೆಯಾಗಿದೆ.

ಅಂಕಿ ಅಂಶಗಳ ಪ್ರಕಾರ, ನಗರ ಪೊಲೀಸರು ಪ್ರಸಕ್ತ ವರ್ಷ ಆಗಸ್ಟ್ 31ರವರೆಗೆ 12,356 ಸೈಬರ್ ಅಪರಾಧ ಪ್ರಕರಣಗಳನ್ನು ದಾಖಲಿಸಿದ್ದಾರೆ. ಪ್ರತಿ ತಿಂಗಳು ಸರಾಸರಿ 1,546 ಪ್ರಕರಣಗಳು ದಾಖಲಾಗುತ್ತಿವೆ. 552 ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

2021ರಲ್ಲಿ 6,422 ಪ್ರಕರಣ ದಾಖಲಿಸಲಾಗಿತ್ತು. 2022ರಲ್ಲಿ 9,938 ಪ್ರಕರಣ ದಾಖಲಾದರೆ, 2023ರಲ್ಲಿ 17,633 ಪ್ರಕರಣಗಳು ದಾಖಲಾಗಿದ್ದವು. 2023ರಲ್ಲಿ ತಿಂಗಳಿಗೆ ಸರಾಸರಿ 1,470 ಪ್ರಕರಣಗಳು ದಾಖಲಾಗಿದ್ದವು. ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆ ಆಗಿರುವುದು ಕಂಡು ಬಂದಿದೆ.

ಸೈಬರ್ ಅಪರಾಧ ಪ್ರಕರಣದಲ್ಲಿ ನಗರದ ಜನತೆ 2023, 2022 ಮತ್ತು 2021 ರಲ್ಲಿ ಅನುಕ್ರಮವಾಗಿ ₹ 655 ಕೋಟಿ, ₹279 ಕೋಟಿ ಮತ್ತು ₹2,313 ಕೋಟಿ ಕಳೆದುಕೊಂಡಿದ್ದಾರೆ. ಈ ಮೂರು ವರ್ಷಗಳಲ್ಲಿ ಪತ್ತೆ ಪ್ರಮಾಣ ಸರಾಸರಿ ಶೇಕಡ 15ರ ಆಸುಪಾಸಿನಲ್ಲಿದೆ. ಪ್ರಸಕ್ತ ವರ್ಷ ಪತ್ತೆಯಾದ ಪ್ರಕರಣಗಳ ಪ್ರಮಾಣ ಶೇ 4ಕ್ಕೆ ಕುಸಿದಿದೆ.

'ಸೈಬರ್ ಪ್ರಕರಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ. ಈ ವರ್ಷದ ಅಂತ್ಯದ ವೇಳೆಗೆ 20 ಸಾವಿರ ತಲುಪುವ ಸಾಧ್ಯತೆ ಇದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಹಣ ಕಳೆದುಕೊಂಡವರ ಸಂಖ್ಯೆಯಲ್ಲೂ ವರ್ಷದಿಂದ ವರ್ಷಕ್ಕೆ ಹೆಚ್ಚಳ ಕಂಡು ಬಂದಿದೆ. ಪ್ರತಿ ವರ್ಷ, ಪತ್ತೆಯಾದ ಪ್ರಕರಣಗಳ ಸಂಖ್ಯೆಯಲ್ಲೂ ಕುಸಿತ ಕಂಡು ಬಂದಿದೆ.

'ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಸೈಬರ್ ಅಪರಾಧಗಳ ಸ್ವರೂಪವೂ ಬದಲಾಗುತ್ತಿದೆ. ವಂಚಕರ ಕಾರ್ಯವಿಧಾನದಲ್ಲಿಯೂ ಬದಲಾವಣೆ ಆಗಿದೆ. ಇತ್ತೀಚಿನ ದಿನಗಳಲ್ಲಿ ಹಣ ಹೂಡಿಕೆ ಹೆಸರಿನ ವಂಚನೆಗಳು ಹೆಚ್ಚುತ್ತಿದ್ದು, ವಂಚಕರ ಮಾತು ನಂಬಿದ ಜನರು ದೊಡ್ಡ ಮೊತ್ತ ಕಳೆದುಕೊಳ್ಳುತ್ತಿದ್ದಾರೆ' ಎಂದು ಸಿಐಡಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಕೊರಿಯರ್ ಸೇವೆ, ಆಧಾರ್ ನಂಬರ್, ಉದ್ಯೋಗದ ಹೆಸರಿನಲ್ಲಿ ವಂಚನೆ ನಡೆಯುತ್ತಿದೆ' ಎಂದು ಅವರು ವಿವರಿಸಿದರು.

ಕೆಲಸದ ಒತ್ತಡ, ಸಿಬ್ಬಂದಿ ಕೊರತೆ ಸೈಬರ್ ಅಪರಾಧ ಪ್ರಕರಣಗಳ ಆರೋಪಿಗಳ ಪತ್ತೆ ಮತ್ತು ಸ್ವತ್ತುಗಳನ್ನು ವಶಕ್ಕೆ ಪಡೆಯುವ ಪ್ರಮಾಣದಲ್ಲಿ ಕುಸಿತಕ್ಕೆ ಕಾರಣ ಎಂಬುದು ಅಧಿಕಾರಿಗಳ ವಾದ. ಮತ್ತೊಂದೆಡೆ ಮಂಜೂರಾದ ಹುದ್ದೆಗಳ ಪೈಕಿ ಶೇಕಡ 39ರಷ್ಟು ಹಲವು ತಿಂಗಳುಗಳಿಂದ ಖಾಲಿ ಉಳಿದಿರುವುದನ್ನು ಅಂಕಿ ಅಂಶಗಳು ಹೇಳುತ್ತವೆ.

'ರಾಜಕಾರಣಿಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗಾಗಿ ರಚಿಸಿರುವ ವಿಶೇಷ ತನಿಖಾ ತಂಡದಲ್ಲಿ ಸೈಬರ್ ಅಪರಾಧ ಪತ್ತೆಯಲ್ಲಿ ತಜ್ಞರಾಗಿರುವ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸಹಜವಾಗಿ ಇದು ಸಾಮಾನ್ಯ ಪ್ರಕರಣಗಳ ತನಿಖೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಅಧಿಕಾರಿಗಳು ಹೇಳುತ್ತಾರೆ.

ಹಳೇಹುಬ್ಬಳ್ಳಿ ಗಲಭೆ ಪ್ರಕರಣ ● ಬಿಜೆಪಿ ಆಡಳಿತ ಇದ್ದಾಗಲೂ ಹಲವು ಸೂಕ್ಷ್ಮ ಪ್ರಕರಣಗಳನ್ನು ಹಿಂಪಡೆದಿತ್ತು: ಸಿ.ಎಂ

‘ಕೋರ್ಟ್ ಅನುಮತಿ ನೀಡಿದರೆ ವಾಪಸ್’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ಹಿಂಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ. ಆದರೆ, ಅದಕ್ಕೆ ಕೋರ್ಟ್ ಅನುಮತಿ ಅಗತ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ನಗರದ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ‘ಕೋರ್ಟ್ ಅನುಮತಿ ನೀಡಿದರೆ ಮಾತ್ರ ಪ್ರಕರಣ ಹಿಂಪಡೆಯಲು ಆಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ’ ಎಂದರು.

‘ಸುಳ್ಳು ಪ್ರಕರಣಗಳು ದಾಖಲಾಗಿದ್ದರೆ, ಉದ್ದೇಶಪೂರ್ವಕವಾಗಿ ಪ್ರಕರಣಗಳನ್ನು ದಾಖಲಿಸಿದ್ದರೆ ಅಥವಾ ಹೋರಾಟಗಳಿಗೆ ಸಂಬಂಧಿಸಿ ಪ್ರಕರಣಗಳನ್ನು ದಾಖಲಿಸಿದ್ದರೆ, ಅವುಗಳನ್ನು ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗುತ್ತದೆ. ಇದು ಎಲ್ಲ ಸರ್ಕಾರದಲ್ಲೂ ಅಸ್ತಿತ್ವದಲ್ಲಿರುತ್ತದೆ. ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ಪರಿಶೀಲಿಸಿದ ಸಮಿತಿ, ಅದು ಸುಳ್ಳು ಪ್ರಕರಣ ಎಂದು ತಿಳಿಸಿತ್ತು. ಆ ವರದಿ ಸಚಿವ ಸಂಪುಟಕ್ಕೆ ಬಂದಿದ್ದು, ನಾವು ಒಪ್ಪಿಕೊಂಡಿದ್ದೇವೆ. ಬಿಜೆಪಿ ಆಡಳಿತವಿದ್ದಾಗಲೂ ಅನೇಕ ಅಪರಾಧ ಪ್ರಕರಣಗಳನ್ನು ಹಿಂಪಡೆದಿತ್ತು’ ಎಂದು ಅವರು ಸಮರ್ಥಿಸಿಕೊಂಡರು.

ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿರುವ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಬಿಜೆಪಿ ಸುಳ್ಳು ವಿಷಯಗಳ ಮೇಲೆ ಹಾಗೂ ನಿರಾಧಾರ ಆರೋಪದ ಮೇಲೆಯೇ ಯಾವಾಗಲೂ ಪ್ರತಿಭಟನೆ ಮಾಡುತ್ತಾರೆ’ ಎಂದು ಕಿಡಿಕಾರಿದರು.

‘ಕಾಂಗ್ರೆಸ್ ಭಯೋತ್ಪಾದನೆ ಬೆಂಬಲಿಸುವ ಪಕ್ಷ’ ಎನ್ನುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ, ‘ಜೋಶಿ ಅವರೇ ಭಯೋತ್ಪಾದಕರು’ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

ಸಿಎಂ ಕಾರಿಗೆ ಮುತ್ತಿಗೆ ಯತ್ನ; ಕಪ್ಪು ಬಟ್ಟೆ ಪ್ರದರ್ಶನ: ಹಳೇಹುಬ್ಬಳ್ಳಿ ಗಲಭೆ ಪ್ರಕರಣ ಹಿಂಪಡೆಯಲು ನಿರ್ಧರಿಸಿರುವ ಸರ್ಕಾರದ ನಡೆಯನ್ನು ಖಂಡಿಸಿ ಹಾಗೂ ಶಾಸಕ ವಿನಯ ಕುಲಕರ್ಣಿ ವಿರುದ್ಧದ ದೌರ್ಜನ್ಯ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಭಾನುವಾರ ಗೋಕುಲ ರಸ್ತೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಾಹನ ತಡೆದು ಮುತ್ತಿಗೆ ಹಾಕಲು ಯತ್ನಿಸಿದರು.

ವಿಮಾನ ನಿಲ್ದಾಣದಿಂದ ರಸ್ತೆ ಮಾರ್ಗವಾಗಿ ಸವದತ್ತಿಗೆ ತೆರಳುತ್ತಿದ್ದ ಅವರಿಗೆ ಅಕ್ಷಯ ಪಾರ್ಕ್ ವೃತ್ತದ ಬಳಿ ಬಿಜೆಪಿ ಕಾರ್ಯಕರ್ತರು ಪೊಲೀಸ್ ಬಿಗಿ ಭದ್ರತೆಯ ನಡುವೆಯೇ ಕಪ್ಪುಬಟ್ಟೆ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು. ಶಾಸಕರಾದ ಮಹೇಶ ಟೆಂಗಿನಕಾಯಿ, ಅರವಿಂದ ಬೆಲ್ಲದ ಸೇರಿದಂತೆ ನೂರಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

> ರಾಜಕೀಯ ಪ್ರೇರಿತವಾಗಿ ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ದಾಖಲಿಸಲಾಗಿದೆ. ಪ್ರಕರಣದಲ್ಲಿ ಹೆಸರಿದ್ದವರ್ಯಾರೂ ಯಾವುದರಲ್ಲೂ ಭಾಗಿಯಾಗಿಲ್ಲ ಎನ್ನುವುದು ಸಾಬೀತಾಗಿದೆ
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> ಪ್ರಕರಣದ ತನಿಖೆಯನ್ನು ಎನ್‌ಐಎ ನಡೆಸುತ್ತಿರುವಾಗ, ರಾಜ್ಯ ಸರ್ಕಾರಕ್ಕೆ ಪ್ರಕರಣ ಹಿಂಪಡೆಯುವ ಅಧಿಕಾರವಿಲ್ಲ. ಇದು ತುಷ್ಟೀಕರಣದ ಪರಮಾವಧಿ
> **ಬಸವರಾಜ ಬೊಮ್ಮಾಯಿ,** ಸಂಸದ

ಮಾನಸಿಕ ಸ್ಥಿಮಿತ ಕಳೆದುಕೊಂಡ ಸಿ.ಎಂ: ಜೋಶಿ ಟೀಕೆ

ಹುಬ್ಬಳ್ಳಿ: ‘ಸರ್ಕಾರದ ವಿವಿಧ ಹಗರಣಗಳಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದು, ಮೊದಲು ಚಿಕಿತ್ಸೆ ಪಡೆಯಲಿ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಯೋತ್ಪಾದಕ’ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಸಿದ್ದರಾಮಯ್ಯ ಅವರು ಅಧಿಕಾರ ಕಳೆದುಕೊಳ್ಳುವ ಹತಾಶೆಯಲ್ಲಿ ಮಾನಸಿಕ ಸ್ಥಿಮಿತ ಕಳೆದುಕೊಂಡು ಏನೇನೋ ಹೇಳುತ್ತಿದ್ದಾರೆ. ಮುಡಾ, ವಾಲ್ಮೀಕಿ ಹಗರಣದಿಂದ ಅವರು ಮುಖ್ಯಮಂತ್ರಿ ಕುರ್ಚಿ ಕಳೆದುಕೊಳ್ಳುವುದು ಪಕ್ಕಾ ಆಗಿದೆ. ರಾಜಕಾರಣದಲ್ಲಿ ಅಧಿಕಾರ ಬರುತ್ತದೆ, ಹೋಗುತ್ತದೆ. ಈ ಹತಾಶೆಯಲ್ಲಿ ಅಪ್ರಬುದ್ಧ ಮತ್ತು ಚಿಲ್ಲರೆ ಹೇಳಿಕೆ ಕೊಡುವುದು ಸರಿಯಲ್ಲ’ ಎಂದು ತಿಳಿಸಿದರು.

‘ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲು ಯತ್ನಿಸಿದವರು, ಪೊಲೀಸರ ಮೇಲೆ ಹಲ್ಲೆ, ಕೊಲೆಗೆ ಮುಂದಾದವರು ಇವರಿಗೆ ಅಮಾಯಕರು’ ಎಂದು ಪ್ರಶ್ನಿಸಿದ ಜೋಶಿ, ‘ಕಾಂಗ್ರೆಸ್ ಆಡಳಿತದಲ್ಲಿ ಪೊಲೀಸರಿಗೂ ರಕ್ಷಣೆ ಇಲ್ಲದಂತಾಗಿದೆ’ ಎಂದರು.

ಅಂಬಾರಿ ಕೊಡುವಲ್ಲಿ ವಿಳಂಬವಾಗಿಲ್ಲ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಇಲ್ಲಿ ಶನಿವಾರ ನಡೆದ ದಸರಾದ ವಿಜಯದಶಮಿ ಮೆರವಣಿಗೆಗೆಂದು ಚಿನ್ನದ ಅಂಬಾರಿಯನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸುವಲ್ಲಿ ಸ್ವಲ್ಪವೂ ವಿಳಂಬವಾಗಿಲ್ಲ’ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ‘ಮೆರವಣಿಗೆ ಆರಂಭವಾದ ಕೆಲವೇ ನಿಮಿಷಗಳಲ್ಲಿ ಅಂದರೆ ಮಧ್ಯಾಹ್ನ 2.05ಕ್ಕೇ ಅಂಬಾರಿ ಹಸ್ತಾಂತರಿಸಲಾಯಿತು’ ಎಂದು ತಿಳಿಸಿದ್ದಾರೆ. ಅಂಬಾರಿಯು 2.05ಕ್ಕೆ ದೊರೆತ ಬಳಿಕ ಅರಮನೆ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್ ಅವರಿಂದ ಅರಮನೆ ಕಾರ್ಯದರ್ಶಿ ಎಲ್.ಜಿ. ನಾರಾಯಣ್ ಸ್ವೀಕೃತಿ ಪಡೆದಿರುವ ಪ್ರತಿಯನ್ನೂ ಪ್ರಕಟಣೆಯೊಂದಿಗೆ ಲಗತ್ತಿಸಿದ್ದಾರೆ.

‘ಮೆರವಣಿಗೆ ವೇಳೆ ಅಭಿಮನ್ಯು ಆನೆಯು ಚಿನ್ನದ ಅಂಬಾರಿಯನ್ನು ಸಾಗಿಸುವಲ್ಲಿ ಹಾಗೂ ಮುಹೂರ್ತದೊಳಗೆ ಪುಷ್ಪಾರ್ಚನೆ ಮಾಡಲು ಆಗಿರುವ ವಿಳಂಬಕ್ಕೆ ನಾವು ಕಾರಣವಲ್ಲ’ ಎಂದು ತಿಳಿಸಿದ್ದಾರೆ.

‘ಕೆಲವು ಸರ್ಕಾರಿ ಕಾರ್‌ಗಳು ಮತ್ತು ಸರ್ಕಾರಿ ಅತಿಥಿಗಳು ಹಾಗೂ ಪಾಲ್ಗೊಳ್ಳುವವರನ್ನು ಕರೆತಂದ ಖಾಸಗಿ ಬಸ್ ಅಂಬಾರಿ, ಆನೆಗಳು ಸಾಗುವ ಮಾರ್ಗದಲ್ಲಿ ನಿಂತಿದ್ದರಿಂದ ತೊಂದರೆಯಾಯಿತು. ಅಂಬಾರಿಯನ್ನು ಆನೆ ಮೇಲೆ ಕಟ್ಟುವ ಸ್ಥಳಕ್ಕೆ ಸಾಗಿಸಲು ಹಾಗೂ ಅಭಿಮನ್ಯುವಿನ ಮೇಲೆ ಕಟ್ಟಲು ಸ್ವಲ್ಪಮಟ್ಟಿಗೆ ಕಷ್ಟವಾಯಿತು’ ಎಂದು ಹೇಳಿದ್ದಾರೆ.

‘ಅವರ ಪದ್ಧತಿ ಮೇಲೆ ಅಂಬಾರಿ ಕೊಡುವುದು ಸ್ವಲ್ಪ ತಡವಾದ್ದರಿಂದ, ಜಂಬೂಸವಾರಿ ಕೊಂಚ ವಿಳಂಬವಾಯಿತು. ಆದರೂ ಎಲ್ಲವೂ ಚೆನ್ನಾಗಿ ನಡೆಯಿತು’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೈಸೂರಿನಲ್ಲಿ ಬೆಳಿಗ್ಗೆ ಹೇಳಿದ್ದರು.

ಕರ್ನಾಟಕದ ಜನರಿಗೆ ಬಿಜೆಪಿ ದ್ರೋಹ: ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೇಂದ್ರ ಬಿಜೆಪಿ ಸರ್ಕಾರದಿಂದ ಕರ್ನಾಟಕಕ್ಕೆ ದ್ರೋಹ ಬಗೆಯಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಇಲ್ಲಿ ಕಿಡಿಕಾರಿದರು.

ತಮ್ಮ ನಿವಾಸದ ಬಳಿ ಪತ್ರಕರ್ತರ ಜತೆ ಮಾತನಾಡಿದ ಅವರು, ‘ನಮಗೆ ತೆರಿಗೆ ಪಾಲಿನಲ್ಲಿ ಅನ್ಯಾಯ ಆಗಿರುವುದಕ್ಕೆ ರಾಜ್ಯದ ಜನರು ಕೇಂದ್ರದ ವಿರುದ್ಧ ಧ್ವನಿ ಎತ್ತಬೇಕು. ಬಿಜೆಪಿಯವರು, ಕೇಂದ್ರ ಸರ್ಕಾರವನ್ನು ಸಮರ್ಥಿಸಿಕೊಂಡು ಮಾತನಾಡುತ್ತಿರುವುದು ಕರ್ನಾಟಕದ ಜನರಿಗೆ ಮಾಡುವ ದ್ರೋಹ’ ಎಂದರು.

‘ತೆರಿಗೆ ಪಾಲಿನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮತ್ತೆ ಅನ್ಯಾಯ ಮಾಡಲಾಗಿದೆ. ನಮಗೆ ₹6,498 ಕೋಟಿ ಕೊಡಲಾಗಿದೆ. ಆದರೆ, ಉತ್ತರಪ್ರದೇಶಕ್ಕೆ 31ಸಾವಿರ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ನಮಗೂ–ಅವರಿಗೂ ಎಷ್ಟೊಂದು ವ್ಯತ್ಯಾಸ ಮಾಡಲಾಗಿದೆ ನೋಡಿ’ ಎಂದರು.

‘ಪ್ರಲ್ಹಾದ ಜೋಶಿ ಇರಬಹುದು ಅಥವಾ ಇತರ ಸಂಸದರಿರಬಹುದು, ಅವರೆಲ್ಲರೂ ಕರ್ನಾಟಕಕ್ಕೆ ದ್ರೋಹ ಮಾಡುತ್ತಿದ್ದಾರೆ. ಜನರು ಅಷ್ಟೊಂದು ಜನ ಸಂಸದರನ್ನು ಗೆಲ್ಲಿಸಿಕೊಟ್ಟರಲ್ಲಾ? ಆ ಸಂಸದರೆಲ್ಲರೂ ಕರ್ನಾಟಕದ ಪರವಾಗಿ ಧ್ವನಿ ಎತ್ತಬೇಕಲ್ಲವೇ? ಕರ್ನಾಟಕಕ್ಕೆ ತೆರಿಗೆ ಹಂಚಿಕೆಯಲ್ಲಿ ಕಳೆದ ಐದು ವರ್ಷಗಳಲ್ಲಿ ₹ 60ಸಾವಿರ ಕೋಟಿ ನಷ್ಟವಾಗಿದೆ. ಕೇಂದ್ರದ ವಿರುದ್ಧ ಹೋರಾಟದ ಬಗ್ಗೆ ಮುಂದೆ ಮಾತನಾಡುತ್ತೇನೆ’ ಎಂದು ಹೇಳಿದರು.

‘ಸಭೆಯಲ್ಲಿ ಕಡಲೆಕಾಯಿ ತಿನ್ನುತ್ತಾರಾ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಡಾ ಮತ್ತು ವಾಲ್ಮೀಕಿ ನಿಗಮದ ಹಗರಣಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೆರಿಗೆ ತಾರತಮ್ಯ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಜಿಎಸ್‌ಟಿ ಸಭೆಗೆ ಹೋಗುವ ರಾಜ್ಯದ ಪ್ರತಿನಿಧಿ ಕಡಲೆಕಾಯಿ ತಿನ್ನುತ್ತಾರಾ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯದಿಂದ ಆಯ್ಕೆಯಾದ ಕಾಂಗ್ರೆಸ್ ಸಂಸದರು ಸಂಸತ್ತಿನಲ್ಲಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರು ರಾಜ್ಯ ಸಭೆಯಲ್ಲಿ ಈ ಪ್ರಶ್ನೆ ಏಕೆ ಪ್ರಸ್ತಾಪಿಸುತ್ತಿಲ್ಲ’ ಎಂದರು.

‘ತೆರಿಗೆ ಪಾಲಿನಲ್ಲಿ ಕೇಂದ್ರದಿಂದ ತಾರತಮ್ಯ ಆಗುತ್ತಿದೆ ಎನ್ನುತ್ತಾರೆ. ಇಲ್ಲಿ ರಾಜ್ಯದ ಎಲ್ಲ ಕ್ಷೇತ್ರಗಳಿಗೂ ಸಮಾನ ಅನುದಾನ ಕೊಡುತ್ತಿದ್ದಾರಾ? ವಿಧಾನ ಸಭಾ ಕ್ಷೇತ್ರಗಳು, ಜಿಲ್ಲೆ–ಜಿಲ್ಲೆಗಳ ಮಧ್ಯೆ ತಾರತಮ್ಯ ಮಾಡುತ್ತಿಲ್ಲವೇ? ಮೊದಲಿಗೆ ನೀವು ಮಾಡುತ್ತಿರುವ ತಾರತಮ್ಯ ನಿಲ್ಲಿಸಿ’ ಎಂದು ಅವರು ಒತ್ತಾಯಿಸಿದರು.

‘ಉತ್ತರದ ರಾಜ್ಯಗಳಿಗೆ ಅಲ್ಲಿನ ಜನ ಸಂಖ್ಯೆಗೆ ಅನುಗುಣವಾಗಿ ಕೇಂದ್ರ ಸರ್ಕಾರ ಅನುದಾನ ಹಂಚಿಕೆ ಮಾಡುತ್ತಿದೆ. ಈ ನೀತಿ ಮಾಡಿದವರೇ ಮನಮೋಹನ್ ಸಿಂಗ್ ಅವರು. ಆ ನೀತಿಗೆ ಅನುಗುಣವಾಗಿಯೇ ರಾಜ್ಯಗಳಿಗೆ ತೆರಿಗೆ ಪಾಲು ಬರುತ್ತಿದೆ’ ಎಂದು ಹೇಳಿದರು.

ಕ್ಷೇತ್ರದ ಅಭಿವೃದ್ಧಿ ಮಂಡಳಿ, ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನ ಪ್ರಾಧಿಕಾರ ಉದ್ಘಾಟನೆ, ಕಾಮಗಾರಿಗಳ ಲೋಕಾರ್ಪಣೆ

ಯಲ್ಲಮ್ಮನಗುಡ್ಡ ಅಭಿವೃದ್ಧಿಗೆ ಸಿ.ಎಂ ಮುನ್ನುಡಿ

ಪ್ರಜಾವಾಣಿ ವಾರ್ತೆ

ಯಲ್ಲಮ್ಮನಗುಡ್ಡ (ಬೆಳಗಾವಿ ಜಿಲ್ಲೆ): ‘ದೇವಿ ಯಲ್ಲಮ್ಮನ ದರ್ಶನಕ್ಕೆ ಪ್ರತಿವರ್ಷ ಒಂದೂವರೆ ಕೋಟಿ ಭಕ್ತರು ಬರುತ್ತಾರೆ. ಯಾರಿಗೂ ತೊಂದರೆ ಆಗದಂತೆ ಅಭಿವೃದ್ಧಿ ಕೈಗೊಳ್ಳಬೇಕು. ತಿರುಪತಿ ಕ್ಷೇತ್ರದ ಮಾದರಿಯಲ್ಲಿ ಯಲ್ಲಮ್ಮನ ಗುಡ್ಡದಲ್ಲೂ ಮೂಲ ಸೌಕರ್ಯ ಕಲ್ಪಿಸಿ ಅಂತರರಾಷ್ಟ್ರೀಯ ಮಟ್ಟದ ಆಕರ್ಷಣೆ ತಂದುಕೊಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡಕ್ಕೆ ಭಾನುವಾರ ಭೇಟಿ ನೀಡಿದ ಅವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಬಳಿಕ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಲೋಕಾರ್ಪಣೆ ಮಾಡಿದರು. ಶ್ರೀರೇಣುಕಾ ಯಲ್ಲಮ್ಮ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಹಾಗೂ ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಉದ್ಘಾಟಿಸಿದರು.

ಮಂಡಳಿ ಹಾಗೂ ಪ್ರಾಧಿಕಾರದ ಮೊದಲ ಸಭೆ ನಡೆಸಿದ ಅವರು, ‘ದೇವಸ್ಥಾನಕ್ಕೆ ವಾರ್ಷಿಕ ಅಂದಾಜು ₹25 ಕೋಟಿ ಆದಾಯ ಬರುತ್ತಿದ್ದು ಉತ್ತಮ ಸೌಲಭ್ಯ ಒದಗಿಸಿ ಭಕ್ತರ ಭೇಟಿಯ ಪ್ರಮಾಣ ಹೆಚ್ಚಿಸಬೇಕು. ಗುಡ್ಡದ ಸುತ್ತಮುತ್ತ ಖಾಲಿ ಇರುವ 1,087 ಎಕರೆ ಜಾಗವನ್ನು ಸಂಪೂರ್ಣ ಬಳಸಿಕೊಂಡು ಅಭಿವೃದ್ಧಿ ಪರ್ವ ಆರಂಭಿಸಬೇಕು. ಕ್ಷೇತ್ರಕ್ಕೆ ಬರುವವರಲ್ಲಿ ಬಡವರು, ಮಧ್ಯಮ ವರ್ಗದವರೇ ಹೆಚ್ಚು. ಅವರ ವಸತಿಗೆ, ಮಹಾಪ್ರಸಾದಕ್ಕೆ, ಎತ್ತಿನ ಬಂಡಿಗಳ ನಿಲುಗಡೆಗೆ ಮತ್ತು ಎತ್ತುಗಳ ಮೇವು-ನೀರಿಗೆ ಕೊರತೆ ಆಗದಂತೆ ರೂಪುರೇಷೆ ಸಿದ್ಧಪಡಿಸಬೇಕು’ ಎಂದೂ ಸೂಚಿಸಿದರು.

ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ಬರೀ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಿದ ಬಿಜೆಪಿಯವರು ಇದುವರೆಗೆ ಯಲ್ಲಮ್ಮನಗುಡ್ಡಕ್ಕೆ ಏನೂ ಮಾಡಲಿಲ್ಲ. ಭಕ್ತರ ಅನುಕೂಲಕ್ಕಾಗಿ ನಮ್ಮ ಸರ್ಕಾರ ಕ್ಷೇತ್ರವನ್ನು ಮಾದರಿ ಮಾಡಲು ಮುಂದಾಗಿದೆ. ‘ಶಕ್ತಿ’ ಯೋಜನೆ ತಂದ ಮೇಲೆ ಇಂಥ ಕ್ಷೇತ್ರಗಳ ಆರ್ಥಿಕ ಶಕ್ತಿ ವೃದ್ಧಿಸಿದೆ. ಇದನ್ನು ಸಹಿಸಿಕೊಳ್ಳುವ ಶಕ್ತಿ ಬಿಜೆಪಿಗೆ ಇಲ್ಲ. ಕ್ಷುಲ್ಲಕ ಕಾರಣ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ’ ಎಂದರು.

ಇದಕ್ಕೆ ದನಿಗೂಡಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ನಮ್ಮ ಪ್ರಯತ್ನ ವಿಫಲವಾಗಬಹುದು. ಆದರೆ, ಪ್ರಾರ್ಥನೆ ವಿಫಲವಾಗುವುದಿಲ್ಲ. ನಾವಿಲ್ಲಿ ಬಂದು ಪ್ರಾರ್ಥನೆ ಮಾಡಿದ್ದೇವೆ. ರಾಜ್ಯದ ಅರ್ಚಕರ ಮಕ್ಕಳ ಭವಿಷ್ಯಕ್ಕೆ ನಾವು ಯೋಜನೆ ರೂಪಿಸಿದ್ದೆವು. ಆದರೆ, ಬಿಜೆಪಿಯವರು ಅದಕ್ಕೆ ರಾಜ್ಯಪಾಲರ ಮೂಲಕ ತಡೆಯೊಡ್ಡಿದರು. ಯಲ್ಲಮ್ಮತಾಯಿ ಇವರನ್ನು ರಕ್ಷಿಸುತ್ತಾಳೆಯೇ?’ ಎಂದು ಪ್ರಶ್ನಿಸಿದರು.

ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿದರು. ಶಾಸಕ ವಿಶ್ವಾಸ ವೈದ್ಯ ಅಧ್ಯಕ್ಷತೆ ವಹಿಸಿದ್ದರು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಲೋಕಾರ್ಪಣೆಗೊಳಿಸಿದರು

> ಯಾರು ಏನೇ ಕಸರತ್ತು ಮಾಡಲಿ; ಜನಶಕ್ತಿ ನನ್ನ ಬೆನ್ನಿಗಿದೆ. ಇನ್ನೂ ಮೂರು ವರ್ಷ ನಮ್ಮದೇ ಸರ್ಕಾರ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ವಿಜಯೇಂದ್ರ ಜ್ಯೋತಿಷಿಯೇ?’

ಯಲ್ಲಮ್ಮನಗುಡ್ಡ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನನ್ನ ರಾಜೀನಾಮೆ ಬಗ್ಗೆ ಪದೇಪದೇ ಹೇಳುತ್ತಲೇ ಇದ್ದಾನೆ. ಅವನೇನು ಭವಿಷ್ಯ ಹೇಳುವ ಜ್ಯೋತಿಷಿಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

‘ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೆ ಹೊಸ ಸಿ.ಎಂ ಬರುತ್ತಾರೆ’ ಎಂಬ ವಿಜಯೇಂದ್ರ ಮಾತಿಗೆ, ಮಾಧ್ಯಮದವರಿಗೆ ಪ್ರತಿಕ್ರಿಯಿಸಿ,‘ಅವರ ತಂದೆ ಯಡಿಯೂರಪ್ಪ ಪೋಕ್ಸೊ ಪ್ರಕರಣದಲ್ಲಿ ಸಿಲುಕಿದ್ದಾರೆ. ವಿಜಯೇಂದ್ರ ಮೊದಲು ಅವರನ್ನು ಪ್ರಶ್ನಿಸಲಿ. ಅವರ ಹುದ್ದೆಯ ರಾಜೀನಾಮೆ ಕೇಳಲಿ. ತಂದೆ ಮೇಲಿನ ಆರೋಪದ ಜವಾಬ್ದಾರಿ ಹೊತ್ತು ವಿಜಯೇಂದ್ರ ತಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿ’ ಎಂದರು.

‘ದಸರಾ ಆರಂಭಕ್ಕೂ ಮೊದಲೇ ಮುಖ್ಯಮಂತ್ರಿ ಬದಲಾಗುತ್ತಾರೆ ಎನ್ನುತ್ತಿದ್ದರು. ದಸರಾ ಮುಗಿದಿದ್ದು, ಇದೀಗ ಬೆಳಗಾವಿ ಅಧಿವೇಶನಕ್ಕೆ ಹೊಸ ಮುಖ್ಯಮಂತ್ರಿಯನ್ನು ಸ್ವಾಗತಿಸಲಾಗುವುದು ಎನ್ನುತ್ತಿದ್ದಾರೆ’ ಎಂದು ಮೂದಲಿಸಿದರು.

‘ಪತ್ನಿ ಪಾರ್ವತಿ- ಧನಿಷ್ಠಾ ನಕ್ಷತ್ರ...’

ಯಲ್ಲಮ್ಮನಗುಡ್ಡ (ಬೆಳಗಾವಿ ಜಿಲ್ಲೆ): ವಿವಿಧ ಕಾಮಗಾರಿಗಳ ಉದ್ಘಾಟನೆಗಾಗಿ, ಯಲ್ಲಮ್ಮನಗುಡ್ಡಕ್ಕೆ ಭಾನುವಾರ ಮಧ್ಯಾಹ್ನ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ರೇಣುಕಾ ಯಲ್ಲಮ್ಮ ದೇವಿ ದರ್ಶನ ಪಡೆದರು. ಅರ್ಚಕರು ನೀಡಿದ್ದ ಲಿಂಬೆಹಣ್ಣುಗಳನ್ನು ದೇವಿಗೆ ಅರ್ಪಿಸಿ ಪ್ರಾರ್ಥಿಸಿದರು. ತಮ್ಮ ಪತ್ನಿ ಪಾರ್ವತಿ ಅವರ ಹೆಸರಲ್ಲೂ ವಿಶೇಷ ಅರ್ಚನೆ ಮಾಡಿಸಿದರು.ಅರ್ಚಕರು ತಿಲಕ ಕೊಟ್ಟು, ಮಂಗಳಾರತಿ ನೀಡಿ, ದೇವಿಯ ಬೆಳ್ಳಿ ಕಿರೀಟವನ್ನು ಸಿದ್ದರಾಮಯ್ಯ ತಲೆಗೆ ಮುಟ್ಟಿಸಿ ಆಶೀರ್ವದಿಸಿದರು. ಈ ವೇಳೆ, ‘ಪತ್ನಿ ಪಾರ್ವತಿ, ಧನಿಷ್ಠಾ ನಕ್ಷತ್ರ...’ ಎಂದು ಹೇಳಿದ ಸಿ.ಎಂ ಪತ್ನಿ ಹೆಸರಲ್ಲೂ ವಿಶೇಷ ಪೂಜೆ ಮಾಡಿಸಿದರು.

ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ದೇವಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಕೆಲ ನಿಮಿಷ ಅಲ್ಲೇ ಕುಳಿತು ಪ್ರಾರ್ಥಿಸಿದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರೂ ಅರ್ಚಕರು ನೀಡಿದ ಲಿಂಬೆಹಣ್ಣುಗಳನ್ನು ಹಿಡಿದು ದೇವಸ್ಥಾನ ಪ್ರವೇಶಿಸಿ ದೇವಿಗೆ ಅರ್ಪಿಸಿದರು.

ಕೆಐಒಸಿಎಲ್: 300 ಕಾರ್ಮಿಕರ ವಜಾ?

ಒಂದನೇ ಪುಟದಿಂದ...

ಈ ಕುರಿತು ಪ್ರತಿಕ್ರಿಯಿಸಿದ ಕೇಂದ್ರ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ, ‘ಕೆಐಒಸಿಎಲ್ ಕಾರ್ಯಾಚರಣೆಗೆ ಸಣ್ಣ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ಅಡ್ಡಿಪಡಿಸುತ್ತಿದೆ. ಇದರಿಂದ ಆ ಸಂಸ್ಥೆ ಪ್ರತಿ ತಿಂಗಳು ಭಾರಿ ಪ್ರಮಾಣದ ನಷ್ಟ ಅನುಭವಿಸುವಂತಾಗಿದೆ. ವಿಶಾಖಪಟ್ಟಣದಲ್ಲಿರುವ ರಾಷ್ಟ್ರೀಯ ಉಕ್ಕು ಕಾರ್ಖಾನೆ –ಆರ್‌ಎನ್‌ಐಎಲ್ (ವೈಜಾಗ್ ಉಕ್ಕು ಕಾರ್ಖಾನೆ) 4,200 ಗುತ್ತಿಗೆ ಕಾರ್ಮಿಕರನ್ನು ಸೆಪ್ಟೆಂಬರ್ 27ರಂದು ಕೆಲಸದಿಂದ ವಜಾ ಮಾಡಿದ ಮಾಹಿತಿ ಸಿಕ್ಕಿದ ತಕ್ಷಣ ಮಧ್ಯಪ್ರವೇಶಿಸಿ, 48 ಗಂಟೆಗಳಲ್ಲಿ ಅವರನ್ನು ಮರು ನೇಮಕ ಮಾಡಿಸಿದ್ದೇನೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಎಲ್ಲ ರೀತಿಯ ಸಹಕಾರ ನೀಡಿದ್ದಾರೆ. ಆದರೆ, ಇಲ್ಲಿನ ಸರ್ಕಾರ ನನ್ನ ಮೇಲಿನ ವೈಯಕ್ತಿಕ ದ್ವೇಷದಿಂದ ಈ ರೀತಿ ಮಾಡುತ್ತಿದೆ’ ಎಂದು ಆರೋಪಿಸಿದರು.

‘ಹಣದ ಕೊರತೆ ಇಲ್ಲ. ರಾಜ್ಯ ಸರ್ಕಾರ ಸಹಕಾರ ಕೊಟ್ಟರೆ ಕೆಐಒಸಿಎಲ್ ಕಾರ್ಯಾಚರಣೆ ಮತ್ತೆ ಹಾದಿಗೆ ಮರಳಲಿದೆ. ಹಬ್ಬ ಮುಗಿಯುವವರೆಗೆ ಕಾರ್ಮಿಕರನ್ನು ಮುಂದುವರಿಸುವಂತೆ ಕಂಪನಿಗೆ ಸಲಹೆ ನೀಡಿದ್ದೇನೆ. ನವ ಮಂಗಳೂರು ಬಂದರು ಮಂಡಳಿ (ಎನ್‌ಎಂಪಿಟಿ) ಜೊತೆ ಕೆಐಒಸಿಎಲ್ ವಿಲೀನಗೊಳಿಸಿ ಜಂಟಿಯಾಗಿ ಕಾರ್ಯಾಚರಿಸುವಂತೆ ಮಾಡುವ ಪ್ರಸ್ತಾವವನ್ನೂ ಸಿದ್ಧಪಡಿಸುತ್ತಿದ್ದೇನೆ. ಕಂಪನಿ ಉಳಿಸುವ ಜೊತೆಗೆ ಕಾರ್ಮಿಕರ ಹಿತ ಕಾಪಾಡುವುದು ಮುಖ್ಯ’ ಎಂದರು.

ಕುಮಾರಸ್ವಾಮಿ ಆರೋಪಗಳಿಗೆ ಪ್ರತಿಕ್ರಿಯಿಸಿದ ರಾಜ್ಯದ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ‘ಕೆಐಒಸಿಎಲ್ ಪ್ರಸ್ತಾಪಿತ ದೇವದಾರಿ ಪ್ರದೇಶದ ಗಣಿಗಾರಿಕೆಗೆ ಅನುಮತಿಯನ್ನು ರಾಜ್ಯ ಸರ್ಕಾರ ನಿರಾಕರಿಸಿಲ್ಲ. ಈ ಹಿಂದೆ ಈ ಕಂಪನಿಯು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಸಿದ ಸಂದರ್ಭದಲ್ಲಿ ಪರಿಸರಕ್ಕೆ ಉಂಟು ಮಾಡಿರುವ ಹಾನಿಗೆ ಸಂಬಂಧಿಸಿದಂತೆ ಕೇಂದ್ರದ ಉನ್ನತ ಅಧಿಕಾರ ಸಮಿತಿ (ಸಿಇಸಿ) ನಿರ್ದೇಶನಗಳನ್ನು ಪಾಲನೆ ಮಾಡಬೇಕೆಂದು ಸೂಚಿಸಲಾಗಿದೆ. ಹದಿಮೂರನೇ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ (ಪಿಎಸಿ) ಮೂರನೇ ವರದಿಯಲ್ಲೂ ಈ ಬಗ್ಗೆ ಸ್ಪಷ್ಟ ಉಲ್ಲೇಖ ಇದೆ’ ಎಂದರು.

ಕೆಐಒಸಿಎಲ್ ಸಿಬ್ಬಂದಿ ಬಲ



ಮುರುಘಾ ಮಠ: ಪೊಲೀಸ್ ಭದ್ರತೆಯಲ್ಲಿ ಶೂನ್ಯ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದಲ್ಲಿ ಇದೇ ಮೊದಲ ಬಾರಿಗೆ ಚಿನ್ನದ ಕಿರೀಟ, ಚಿನ್ನದ ಪಾದುಕೆ ಹಾಗೂ ಚಿನ್ನದ ರುದ್ರಾಕ್ಷಿ ಸರವನ್ನು ಗದ್ದುಗೆ ಬಳಿಯಿಟ್ಟು ಪೂಜೆ ಸಲ್ಲಿಸದೇ ಶೂನ್ಯ ಪೀಠಾರೋಹಣದ ಕೈಂಕರ್ಯ ನಡೆಸಲಾಯಿತು. ಆಡಳಿತ ಮಂಡಳಿಯ ಈ ನಡೆ ಭಕ್ತರು, ಹಿರಿ–ಕಿರಿಯ ಸ್ವಾಮೀಜಿಗಳಲ್ಲಿ ಅಚ್ಚರಿ ಮೂಡಿಸಿತು.

ಶೂನ್ಯಪೀಠದ ಪ್ರಥಮ ಅಧ್ಯಕ್ಷ ಅಲ್ಲಮಪ್ರಭು ದೇವರ ಭಾವಚಿತ್ರ ಹಾಗೂ ಜಯದೇವ ಸ್ವಾಮೀಜಿಯ ಬೆಳ್ಳಿ ಪುತ್ಥಳಿ ಇಟ್ಟು ಶೂನ್ಯ ಪೀಠಾರೋಹಣ ನೆರವೇರಿಸಲಾಯಿತು.

ಶರಣ ಸಂಸ್ಕೃತಿ ಉತ್ಸವದಲ್ಲಿ ಮಠದ ಪೀಠಾಧ್ಯಕ್ಷರು ಶೂನ್ಯ ಪೀಠಾರೋಹಣ ಮಾಡಿ ಭಕ್ತರಿಗೆ ದರ್ಶನ ನೀಡುವುದು ವಾಡಿಕೆ. ಆದರೆ, ಪೀಠಾಧ್ಯಕ್ಷ ಶಿವಮೂರ್ತಿ ಶರಣರು ಪೋಕ್ಸೊ ಪ್ರಕರಣದಲ್ಲಿ 2022ರಿಂದ ನ್ಯಾಯಾಂಗ ಬಂಧನದಲ್ಲಿದ್ದರು. ಹೀಗಾಗಿ 2022ರಲ್ಲಿ ಕರ್ತೃ ಮುರುಗಿ ಶಾಂತವೀರ ಸ್ವಾಮೀಜಿಯ ಭಾವಚಿತ್ರ, 2023ರಲ್ಲಿ ಮುರುಗಿ ಶಾಂತವೀರ ಸ್ವಾಮೀಜಿಯ ಕಂಚಿನ ಪುತ್ಥಳಿ ಇಟ್ಟು ಪೀಠಾರೋಹಣದ ವಿಧಿ–ವಿಧಾನ ಪೂರೈಸಲಾಗಿತ್ತು. ಆಗ ಸಂಪ್ರದಾಯದಂತೆ ಚಿನ್ನದ ಕಿರೀಟ, ಪಾದುಕೆ ಹಾಗೂ ರುದ್ರಾಕ್ಷಿ ಸರವನ್ನೂ ಗದ್ದುಗೆ ಬಳಿಯಿಟ್ಟು ಪೂಜೆ ಸಲ್ಲಿಸಲಾಗಿತ್ತು.

ಆದರೆ ಈ ಬಾರಿ ಗದ್ದುಗೆ ಬಳಿ ಅವುಗಳನ್ನು ಇಟ್ಟಿರಲಿಲ್ಲ. ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಸಿ. ಕಳಸದ ಅವರು ಜಯದೇವ ಶ್ರೀಗಳ ಬೆಳ್ಳಿ ಪುತ್ಥಳಿಗೆ ಪೂಜೆ ಸಲ್ಲಿಸಿ, ಬಳಿಕ ಭದ್ರತೆಯಲ್ಲಿ ರಾಜಾಂಗಣಕ್ಕೆ ತಂದು ಶೂನ್ಯ ಪೀಠಾರೋಹಣ ನೆರವೇರಿಸಿದರು.

ಉತ್ಸವದ ಗೌರವಾಧ್ಯಕ್ಷ ಹೆಬ್ಬಾಳು ಮಹಾಂತ ರುದ್ರೇಶ್ವರ ಸ್ವಾಮೀಜಿ ಸೇರಿದಂತೆ ಅನೇಕರನ್ನು ಪೊಲೀಸರು ರಾಜಾಂಗಣದಲ್ಲೇ ತಡೆದರು. ಈ ನಡೆಯಿಂದ ಬೇಸರಗೊಂಡ ಹೆಬ್ಬಾಳು ಸ್ವಾಮೀಜಿ ಮಠದಿಂದ ಹೊರ ನಡೆದರು. ಸದಸ್ಯರಾದ ಬಸವಕುಮಾರ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಮಠದ ಮಾದಾರ ಚನ್ನಯ್ಯ ಸ್ವಾಮೀಜಿ, ಹರಿಹರದ ಪಂಚಮಸಾಲಿ ಪೀಠದ ಪೀಠಾಧಿಪತಿ ವಚನಾನಂದ ಸ್ವಾಮೀಜಿ, ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ ಇದ್ದರು.

ಸಂಕ್ಷಿಪ್ತ ಸುದ್ದಿ

‘ಬಿಗ್ ಬಾಸ್’ಗೆ ನೋಟಿಸ್

ರಾಮನಗರ: ಖಾಸಗಿ ಚಾನೆಲ್‌ನಲ್ಲಿ ಪ್ರಸಾರವಾಗುತ್ತಿರುವ ‘ಬಿಗ್ ಬಾಸ್’ ರಿಯಾಲಿಟಿ ಷೋನಲ್ಲಿ ಸ್ವರ್ಗ ಮತ್ತು ನರಕ ಟಾಸ್ಕ್‌ನಲ್ಲಿ ಮಹಿಳೆಯರನ್ನು ಅಕ್ರಮವಾಗಿ ಬಂಧನದಲ್ಲಿಟ್ಟ ಬಗ್ಗೆ ಷೋ ಆಯೋಜಕರಿಗೆ ಕುಂಬಳಗೋಡು ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ಮಹಿಳಾ ಆಯೋಗವು ಪೊಲೀಸರಿಗೆ ದೂರು ನೀಡಿತ್ತು.

‘ದೂರಿಗೆ ಸಂಬಂಧಿಸಿದಂತೆ ಹೇಳಿಕೆ ಪಡೆಯಲು ಷೋ ನಡೆಯುತ್ತಿರುವ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದಾಗ ಆಯೋಜಕರು ಸಿಕ್ಕಿರಲಿಲ್ಲ. ಹಾಗಾಗಿ, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು. ಭಾನುವಾರ ಆಯೋಜಕರು ಬಂದು ಹೇಳಿಕೆ ನೀಡಿ ಹೋಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಡಿಸೆಂಬರ್‌ನಲ್ಲಿ ಪ್ರಶಸ್ತಿ ಪ್ರದಾನ

ಬಾಗಲಕೋಟೆ: ‘ಕರ್ನಾಟಕ ಬಯಲಾಟ ಅಕಾಡೆಮಿಯ ಬಾಕಿ ಇರುವ ಮೂರು ವರ್ಷಗಳ ಪ್ರಶಸ್ತಿಯನ್ನು ಡಿಸೆಂಬರ್‌ನಲ್ಲಿ ಪ್ರದಾನ ಮಾಡಲಾಗುವುದು’ ಎಂದು ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್. ದುರ್ಗಾದಾಸ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ‘ಅಕಾಡೆಮಿ ಅಧ್ಯಕ್ಷನಾಗಿ ಮೂರು ತಿಂಗಳಾಗಿವೆ. ಬಯಲಾಟ ಕಲೆ ಸಂರಕ್ಷಣೆಗಾಗಿ ಕಲಾವಿದರು, ವಿದ್ವಾಂಸರೊಂದಿಗೆ ಸಭೆ ನಡೆಸಿದ್ದೇನೆ’ ಎಂದು ತಿಳಿಸಿದ್ದಾರೆ.

‘ಹುಕ್ಕೇರಿಯಲ್ಲಿ ಬಯಲಾಟಗಳ ಸಮ್ಮೇಳನ, ಬಬಲೇಶ್ವರದಲ್ಲಿ ಶ್ರೀಕೃಷ್ಣ ಪಾರಿಜಾತ ಸಮ್ಮೇಳನ, ತಿಂಗಳ ಕೊನೆಯಲ್ಲಿ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಬಯಲಾಟ ಪರಂಪರೆ ಕಾರ್ಯಕ್ರಮ ಆಯೋಜಿಸಲಾಗಿದೆ. ಅಪ್ರಕಟಿತ ಬಯಲಾಟ ಹಸ್ತಪ್ರತಿಗಳ ಸಂಗ್ರಹ, ಪ್ರಕಟಣೆ ಹಾಗೂ ಬಯಲಾಟ ಕಲಾವಿದರ ಮಾಹಿತಿ ಕೋಶ ಯೋಜನೆ ಕೈಗೆತ್ತಿಕೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ. ‘ಟ್ರಸ್ಟ್, ಅಕಾಡೆಮಿ: ಖರ್ಚಾಗದ ಅನುದಾನ’ ಎಂಬ ವಿಶೇಷ ವರದಿ ‘ಪ್ರಜಾವಾಣಿ’ಯಲ್ಲಿ ಅ.11ರಂದು ಪ್ರಕಟವಾಗಿತ್ತು.

ದಸರಾ ವೇದಿಕೆಯಲ್ಲಿ ರೌಡಿ ಶೀಟರ್: ಟೀಕೆ

ಬೆಂಗಳೂರು: ನಾಡಹಬ್ಬ ದಸರಾ ವೇದಿಕೆಯಲ್ಲಿ ಪ್ರಕಾಶ್ ಮುಧೋಳ ಎಂಬ ರೌಡಿ ಶೀಟರ್‌ನನ್ನು ಗಣ್ಯರ ಸಾಲಿನಲ್ಲಿ ಕೂರಿಸುವ ಮೂಲಕ ಸರ್ಕಾರವು ನಾಡಹಬ್ಬದ ಘನತೆಗೆ ಮಸಿ ಬಳಿದಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

‘ಅಪರಾಧದ ಹಿನ್ನೆಲೆಯವರನ್ನು ಅತಿಥಿಗಳನ್ನಾಗಿ ಗೌರವಿಸುವುದು ದುರಂತವೇ ಸರಿ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಚಿವರ ಸಾಲಿನಲ್ಲಿ ರೌಡಿ ಶೀಟರ್ ಪ್ರಕಾಶ್ ಕೂಡ ಇದ್ದಾನೆ. ಇದರಿಂದ ನಾಡಿಗೆ ಯಾವ ಸಂದೇಶ ರವಾನೆಯಾಗುತ್ತದೆ? ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು’ ಎಂದು ‘ಎಕ್ಸ್’ ಮೂಲಕ ಆಗ್ರಹಿಸಿದ್ದಾರೆ.

82 ಸಾವಿರ ಕ್ಯುಸೆಕ್ ನೀರು ಹೊರಕ್ಕೆ

ಹೊಸಪೇಟೆ (ವಿಜಯನಗರ): ಹಿಂಗಾರು ಮಳೆ ಉತ್ತಮವಾಗಿ ಸುರಿಯುತ್ತಿರುವುದರಿಂದ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 84,504 ಕ್ಯುಸೆಕ್‌ನಷ್ಟಿದ್ದು, 82,504 ಕ್ಯುಸೆಕ್ ನೀರನ್ನು ಹೊರಕ್ಕೆ ಬಿಡಲಾಗುತ್ತಿದೆ.

‘ಸಭೆಯ ಮಾಹಿತಿ ಸಿಎಂ ನೀಡಲಿ’

ಬಸವ ಮೃತ್ಯುಂಜಯ ಸ್ವಾಮೀಜಿ

ಕೂಡಲಸಂಗಮ: ‘24 ಗಂಟೆಯೊಳಗೆ ಮುಖ್ಯಮಂತ್ರಿ ಸಭೆ ನಡೆಸುವ ಸಮಯ, ಸ್ಥಳ ತಿಳಿಸಬೇಕು. ಇಲ್ಲವಾದರೆ ಅ. 14 ರಂದು ಬೆಳಗಾವಿಯಲ್ಲಿ ಪಂಚಮಸಾಲಿ ವಕೀಲರ ಪರಿಷತ್‌ನ ತುರ್ತು ಸಭೆ ಕರೆದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಭೇಟಿಯಾಗುವ ದಿನಾಂಕ ಘೋಷಿಸಲಾಗುವುದು’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಈಚೆಗೆ ಬೆಳಗಾವಿಯಲ್ಲಿ ಪಂಚಮಸಾಲಿ ವಕೀಲರ ಮಹಾಪರಿಷತ್ತು ಸಭೆ ನಡೆಸಿ ಚರ್ಚಿಸಿತ್ತು. ಅಂದು ಮುಖ್ಯಮಂತ್ರಿ ದೂರವಾಣಿಯ ಮೂಲಕ ಅಕ್ಟೋಬರ್ 15 ರಂದು ಬೆಂಗಳೂರಿನಲ್ಲಿ ಸರಕಾರ ಮಟ್ಟದ ಸಭೆ ಕರೆಯುವ ಘೋಷಣೆ ಮಾಡಿದ್ದರು. ಆದರೆ ಇದುವರೆಗೂ ಯಾವುದೇ ಮಾಹಿತಿ ಬಂದಿಲ್ಲ ’ ಎಂದು ಹೇಳಿದರು.

ನಾಳೆಯಿಂದ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಂಗಳವಾರದಿಂದ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದ ಬಹುತೇಕ ಕಡೆ ಸೋಮವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನಜಿಲ್ಲೆಗಳಹಲವುಕಡೆಗಳಲ್ಲಿಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

17ರಂದು ಬಹುತೇಕ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ.

ಹೆಚ್ಚಿದ ಕೆಲಸದ ಹೊರೆ ●ಕಾರ್ಯಕರ್ತೆಯರು, ಸಹಾಯಕಿಯರ ಸಂಕಷ್ಟ

ಅಂಗನವಾಡಿ: 3 ತಿಂಗಳ ಗೌರವ ಧನ ಬಾಕಿ

● ಖಲೀಲ ಅಹ್ಮದ ಶೇಖ

ಎಸ್‌. ವರಲಕ್ಷ್ಮಿ

ಬೆಂಗಳೂರು: ರಾಜ್ಯದಲ್ಲಿನ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಮೂರು ತಿಂಗಳಾದರೂ ಗೌರವಧನ ಬಿಡುಗಡೆ ಆಗಿಲ್ಲ.

ರಾಜ್ಯದಲ್ಲಿ 69 ಸಾವಿರಕ್ಕಿಂತ ಅಧಿಕ ಅಂಗನವಾಡಿ ಕೇಂದ್ರಗಳಿವೆ. ಪ್ರತಿ ಅಂಗನವಾಡಿಯಲ್ಲಿ ಇಬ್ಬರಂತೆ ಸುಮಾರು 1.40 ಲಕ್ಷ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಬಹುತೇಕರಿಗೆ ಈ ಕೆಲಸವೇ ಜೀವನಾಧಾರವಾಗಿದೆ. ಗೌರವಧನ ಬಿಡುಗಡೆ ಆಗದೇ ಇರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ಕಾರ್ಯಕರ್ತೆಯರು ಅಳಲು ತೋಡಿಕೊಂಡಿದ್ದಾರೆ.

‘ಗೌರವಧನ ಬಿಡುಗಡೆ ಆದರೂ ಆಗದಿದ್ದರೂ ಕೆಲಸ ಮಾತ್ರ ಮುಂದುವರಿದಿದೆ. ಅಂಗನವಾಡಿಯಿಂದ ಒದಗಿಸಬೇಕಾದ ಸೇವೆಗಳ ಸಂಖ್ಯೆ ಹೆಚ್ಚಾಗುತ್ತಲೇ ಇವೆ’ ಎಂದೂ ಅವರು ಹೇಳುತ್ತಾರೆ.

ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳಿಗೆ ಅ, ಆ, ಇ, ಈ ಕಲಿಸುವುದರ ಜೊತೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯದಲ್ಲಿ ಸರ್ಕಾರದ ಮಹತ್ವದ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ಜವಾಬ್ದಾರಿ ನಿಭಾಯಿಸುತ್ತಾರೆ. ಪೂರ್ವ ಪ್ರಾಥಮಿಕ ಶಿಕ್ಷಣ, ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ ವಿತರಣೆ, ಸೇರಿದಂತೆ ನಾನಾ ಜಾಗೃತಿ ಕಾರ್ಯಕ್ರಮಗಳ ಹೊಣೆಗಾರಿಕೆಯೂ ಇವರ ಮೇಲಿದೆ.

‘ದಾವಣಗೆರೆ, ಹಾವೇರಿ, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಗಳ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಹಾಗೂ ಅಡುಗೆ ಅನಿಲ ಹಣ ಬಾಕಿ ಉಳಿಸಲಾಗಿದೆ. ರಾಜ್ಯದ ಬಹುತೇಕ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ, ಅಡುಗೆ ಅನಿಲ ಖರೀದಿಗೆ ಅನುದಾನ ಬಿಡುಗಡೆ ಆಗಿಲ್ಲ’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ದೂರಿದರು.

‘ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಜುಲೈ ತಿಂಗಳ ಗೌರವಧನ ಬಿಡುಗಡೆ ಆಗಿದೆ. ಆದರೆ, ಜೂನ್, ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಗೌರವಧನ ಬಿಡುಗಡೆಯಾಗಿಲ್ಲ. ಈ ಬಗ್ಗೆ ಇಲಾಖೆಯ ಯೋಜನಾಧಿಕಾರಿಗಳನ್ನು ಪ್ರಶ್ನಿಸಿದರೆ ನಿರ್ದೇಶಕರ ಕಚೇರಿಯಿಂದ ಅನುದಾನ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಂಗನವಾಡಿ ಸಿಬ್ಬಂದಿ ಹಬ್ಬಗಳನ್ನು ಆಚರಿಸಲಾಗುತ್ತಿಲ್ಲ. ನಿಯಮಿತವಾಗಿ ಸಂಬಳ ಬಾರದೇ ಇದ್ದರೆ ಜೀವನ ಸಾಗಿಸುವುದು ಹೇಗೆ’ ಎಂದು ಅವರು ಪ್ರಶ್ನಿಸಿದರು.

ಪ್ರತಿ ತಿಂಗಳ ಗೌರವಧನ

₹11,500
ಅಂಗನವಾಡಿ ಕಾರ್ಯಕರ್ತೆಯರಿಗೆ

₹7,225
ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ

₹6,525
ಅಂಗನವಾಡಿ ಸಹಾಯಕಿಯರಿಗೆ

‘ಗೌರವಧನ ಬಿಡುಗಡೆಗೆ ಆಗ್ರಹ’

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ತಿಕ್ಕಾಟ ಹಾಗೂ ತಾಂತ್ರಿಕ ಸಮಸ್ಯೆಗಳಿಂದ ಪ್ರತಿಬಾರಿ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಬಿಡುಗಡೆಯಲ್ಲಿ ಸಮಸ್ಯೆ ಆಗುತ್ತಿದೆ. ಇದನ್ನು ಪರಿಹರಿಸಿ ಕೂಡಲೇ ಗೌರವಧನ ಬಿಡುಗಡೆಗೊಳಿಸಬೇಕು’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್‌. ವರಲಕ್ಷ್ಮಿ ಆಗ್ರಹಿಸಿದರು.

‘ಕೇಂದ್ರ ಸರ್ಕಾರದಿಂದ ಅನುದಾನ ಬರಲಿ, ಬಾರದೇ ಇರಲಿ ರಾಜ್ಯ ಸರ್ಕಾರ ಪ್ರತೀ ತಿಂಗಳು ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನದ ಖಾತ್ರಿ ನೀಡಬೇಕು’ ಎಂದು ಒತ್ತಾಯಿಸಿದರು.

‘ಕೇಂದ್ರದಿಂದ ಬಾರದ ಅನುದಾನ’

‘ಕೇಂದ್ರ ಸರ್ಕಾರದಿಂದ ಅನುದಾನ ಬಾರದ ಕಾರಣ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಎರಡು ತಿಂಗಳ ಗೌರವಧನ ಬಾಕಿ ಇದೆ’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕ ಎನ್‌. ಸಿದ್ದೇಶ್ವರ ಹೇಳಿದರು.

‘ಅನುದಾನ ಬಿಡುಗಡೆಯಾದ ತಕ್ಷಣ ಗೌರವಧನ ಬಿಡುಗಡೆ ಮಾಡಲಾಗುವುದು. ಸೆಪ್ಟೆಂಬರ್‌ವರೆಗೂ ಮೊಟ್ಟೆ ಖರೀದಿ ಹಣ ಬಿಡುಗಡೆ ಮಾಡಲಾಗಿದೆ’ ಎಂದು ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-ACDM0TRG/1/2024-ADMN-FPI ದಿನಾಂಕ: 10.10.2024

“ತರಬೇತಿ, ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬೋಧಕರ ಹುದ್ದೆಗಾಗಿ ಅರ್ಜಿ ಆಹ್ವಾನ”

ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು ಇಲ್ಲಿ ಗುತ್ತಿಗೆ ಆಧಾರದ ಮೇಲೆ “ತರಬೇತಿ, ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬೋಧಕರ” ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅರ್ಜಿದಾರರು ಸಂಸ್ಥೆಯ ವೆಬ್ ವಿಳಾಸ: https://fpibengaluru.karnataka.gov.in ರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.
ಅರ್ಜಿಗಳನ್ನು ಅಂಚೆ ಅಥವಾ ಇ–ಮೇಲ್ director@fpibangalore.gov.in ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 31.10.2024.

ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/2490/2024-25

ಸುಭಾಷಿತ

ಅಳತೆ ಮೀರಿ ಕಟ್ಟಿದ ಮನೆ, ಅತಿಯಾದ ಸಾಲ, ತೋರಿಕೆಯ ಬದುಕು, ಒಬ್ಬರ ಮೇಲೆ ಅತಿಯಾದ ನಂಬಿಕೆ ಯಾವತ್ತೂ ಒಳ್ಳೆಯದಲ್ಲ. -ಚಾಣಕ್ಯ

ಮತ್ತೊಂದು ರೈಲು ಅಪಘಾತ ಉತ್ತರದಾಯಿತ್ವದ ಕೊರತೆ ತೀವ್ರ

ಮತ್ತೊಂದು ರೈಲು ಅಪಘಾತ ನಡೆದಿದೆ. ಮೈಸೂರು–ದರ್ಭಾಂಗ ಎಕ್ಸ್‌ಪ್ರೆಸ್ ರೈಲು ಅಪಘಾತಕ್ಕೆ ಈಡಾಗಿ ಕನಿಷ್ಠ 19 ಮಂದಿ ಗಾಯಗೊಂಡಿದ್ದಾರೆ. ಇದರೊಂದಿಗೆ, ರೈಲ್ವೆಯನ್ನು ಕಾಡುತ್ತಿರುವ ಸುರಕ್ಷತೆಯ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ನಿಂತಿದ್ದ ಸರಕು ಸಾಗಣೆ ರೈಲಿಗೆ ಡಿಕ್ಕಿ ಹೊಡೆದ ಬಳಿಕ ಈ ರೈಲಿನ 13 ಬೋಗಿಗಳು ಹಳಿ ತಪ್ಪಿವೆ. 2023ರಲ್ಲಿ ಒಡಿಶಾದ ಬಾಲೇಶ್ವರದಲ್ಲಿ ನಡೆದ ರೈಲು ಅಪಘಾತದ ರೀತಿಯಲ್ಲಿಯೇ ಈ ಅಪಘಾತವೂ ನಡೆದಿದೆ. ಬಾಲೇಶ್ವರದಲ್ಲಿ ನಡೆದ ಅಪಘಾತದಲ್ಲಿ 300 ಮಂದಿ ಮೃತಪಟ್ಟಿದ್ದರು. ಚೆನ್ನೈ–ಗೂಡೂರು ವಲಯದ ಕವರೈಪೇಟೈ ಎಂಬಲ್ಲಿ ಈ ಅಪಘಾತ ನಡೆದಿದೆ. ಸರಕು ಸಾಗಣೆ ರೈಲಿನ ಹಿಂಭಾಗದಲ್ಲಿ ಇದ್ದ ಬ್ರೇಕ್ ವ್ಯಾನ್ ಮತ್ತು ಕವರೈಪೇಟೈ ನಿಲ್ದಾಣದ ಸಮೀಪ ಇದ್ದ ವೇಗ ನಿಯಂತ್ರಕಗಳಿಂದಾಗಿ ಹೆಚ್ಚಿನ ಅಪಾಯ ತಪ್ಪಿದೆ. ಸಿಗ್ನಲ್‌ನಲ್ಲಿ ಆಗಿರುವ ದೋಷದಿಂದ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಆದರೆ, ಅಪಘಾತಕ್ಕೆ ಕಾರಣ ಏನು ಎಂಬುದು ತನಿಖೆಯಿಂದ ದೃಢಪಡಬೇಕಿದೆ. ರೈಲ್ವೆ ಇಲಾಖೆಯು ತನಿಖೆ ಆರಂಭಿಸಿದೆ. ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ಕೂಡ ತನಿಖೆ ನಡೆಸುತ್ತಿದೆ. ಅಪಘಾತಕ್ಕೆ ಏನು ಕಾರಣ ಎಂಬುದು ತನಿಖೆಯಿಂದ ತಿಳಿದುಬರುವುದು ಎಂಬ ವಿಶ್ವಾಸ ಇದೆ.

ಪಶ್ಚಿಮ ಬಂಗಾಳದಲ್ಲಿ ಕೆಲವು ವಾರಗಳ ಹಿಂದೆ ಕಾಂಚನಜುಂಗಾ ಎಕ್ಸ್‌ಪ್ರೆಸ್ ಅಪಘಾತಕ್ಕೆ ಒಳಗಾಗಿತ್ತು. ಈ ಅಪಘಾತದಲ್ಲಿ ಒಂಬತ್ತು ಮಂದಿ ಜೀವ ಕಳೆದುಕೊಂಡಿದ್ದರು. ಕಳೆದ ಹತ್ತು ವರ್ಷಗಳಲ್ಲಿ ರೈಲು ಅಪಘಾತಗಳ ಸಂಖ್ಯೆಯು ಕಡಿಮೆಯಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಇತ್ತೀಚೆಗೆ ಹೇಳಿಕೊಂಡಿದ್ದರು. ಆದರೆ, ಮನುಷ್ಯನ ಲೋಪ, ತಾಂತ್ರಿಕ ತೊಂದರೆ, ಸಿಗ್ನಲ್ ಸಮಸ್ಯೆ ಮತ್ತು ಇತರ ಕಾರಣಗಳಿಂದಾಗಿ ರೈಲು ಅಪಘಾತಗಳು ನಡೆಯುತ್ತಲೇ ಇವೆ. ರೈಲು ಸುರಕ್ಷತೆಗೆ ಕೊಡಬೇಕಾದಷ್ಟು ಗಮನ ಕೊಡಲಾಗುತ್ತಿಲ್ಲ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಅತಿವೇಗದ ರೈಲು ಮತ್ತು ವಂದೇ ಭಾರತ್‌ನಂತಹ ಐಷಾರಾಮಿ ರೈಲುಗಳಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ರೈಲು ಪ್ರಯಾಣಿಕರ ಪೈಕಿ ಅತಿ ಹೆಚ್ಚು ಸಾಮಾನ್ಯ ಜನರು ಸಂಚರಿಸುವ ರೈಲುಗಳ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ಧೋರಣೆ ತಳೆದಿದೆ ಎಂಬ ಭಾವನೆ ಬಲಗೊಳ್ಳತೊಡಗಿದೆ. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಸುರಕ್ಷತಾ ವ್ಯವಸ್ಥೆ 'ಕವಚ'ದ ಅಳವಡಿಕೆ ನಿಧಾನವಾಗುತ್ತಿದೆ. ನಿರ್ವಹಣೆಗೆ ಮಾಡುತ್ತಿರುವ ವೆಚ್ಚ ಬಹಳ ಕಡಿಮೆ ಎಂದು ಮಹಾಲೇಖಪಾಲರ ವರದಿಯಲ್ಲಿ ಹೇಳಲಾಗಿತ್ತು. 2022–23ರಲ್ಲಿ ಒಟ್ಟು ವರಮಾನದ ಶೇ 15ರಷ್ಟನ್ನು ಹಳಿ ನವೀಕರಣ ಮತ್ತು ನಿರ್ವಹಣೆಗೆ ವೆಚ್ಚ ಮಾಡಲಾಗಿತ್ತು. ಈ ವರ್ಷ ಇದಕ್ಕಾಗಿ ಶೇ 10ರಷ್ಟು ವೆಚ್ಚ ಆಗಬಹುದು ಎಂದು ಅಂದಾಜಿಸಲಾಗಿದೆ.

ರೈಲ್ವೆ ಯೋಜನೆಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕಿದೆ ಮತ್ತು ಸುರಕ್ಷತೆಗೆ ಆದ್ಯತೆ ಕೊಡಬೇಕಿದೆ

ರೈಲ್ವೆಯು ದೇಶದಲ್ಲಿಯೇ ಅತಿ ಹೆಚ್ಚು ನೌಕರರನ್ನು ಹೊಂದಿರುವ ಸಂಸ್ಥೆ. ಆದರೆ, ನಿರ್ಣಾಯಕ ವಿಭಾಗಗಳಲ್ಲಿ ಸಿಬ್ಬಂದಿಯ ಕೊರತೆ ಇದೆ. ರೈಲು ಚಾಲಕರು ಮತ್ತು ಸಹಾಯಕ ಚಾಲಕರ 18 ಸಾವಿರಕ್ಕೂ ಹೆಚ್ಚು ಹುದ್ದೆಗಳು ವರ್ಷಗಳಿಂದ ಖಾಲಿ ಇವೆ ಎಂದು ವರದಿಯಾಗಿದೆ. ಸಿಬ್ಬಂದಿಯ ಕೊರತೆಯು ಇರುವ ನೌಕರರ ಮೇಲೆ ಹೆಚ್ಚಿನ ಹೊರೆ ಹಾಕಿದೆ. ದೀರ್ಘಕಾಲ ಬಿಡುವಿಲ್ಲದೆ ಕೆಲಸ ಮಾಡಬೇಕಾದುದರಿಂದ ಲೋಪಗಳಾಗುವ ಸಾಧ್ಯತೆ ಹೆಚ್ಚು. ಎಲ್ಲ ವಿಭಾಗಗಳಲ್ಲಿಯೂ ಮೂಲಸೌಕರ್ಯವನ್ನು ಉತ್ತಮಪಡಿಸಬೇಕಿದೆ, ಆಧುನೀಕರಣಗೊಳಿಸಬೇಕಿದೆ, ನಿರ್ವಹಣೆಯೂ ಉತ್ತಮಗೊಳ್ಳಬೇಕಿದೆ. ಸುರಕ್ಷತೆಯ ದೃಷ್ಟಿಯಿಂದ ರೈಲ್ವೆ ಯೋಜನೆಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕಿದೆ ಮತ್ತು ಸುರಕ್ಷತೆಗೆ ಆದ್ಯತೆ ಕೊಡಬೇಕಿದೆ. ಪ್ರಯಾಣಿಕರ ಸುರಕ್ಷತೆಯನ್ನು ಖಾತರಿಪಡಿಸುವುದು ರೈಲ್ವೆ ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಉತ್ತರದಾಯಿತ್ವಕ್ಕೆ ಎಷ್ಟು ಮಹತ್ವ ನೀಡಬೇಕೋ ಅಷ್ಟು ಮಹತ್ವ ನೀಡಲಾಗುತ್ತಿಲ್ಲ. ತಳಮಟ್ಟದ ನೌಕರರಿಂದ ಹಿಡಿದು ರೈಲ್ವೆ ಸಚಿವರವರೆಗೆ, ಪ್ರತಿಯೊಬ್ಬರನ್ನೂ ಅವರ ಕೆಲಸಗಳಿಗೆ ಉತ್ತರದಾಯಿಯನ್ನಾಗಿ ಮಾಡಬೇಕು. ದುರದೃಷ್ಟವಶಾತ್ ಆ ಕೆಲಸ ಆಗುತ್ತಿಲ್ಲ.

ದಿನದ ಟ್ವೀಟ್

ನಮ್ಮ ನಾಡಹಬ್ಬ ನಮ್ಮ ಹೆಮ್ಮೆ

'ಮೈಸೂರು ದಸರಾ ನೋಡ್ಬೇಕು' ಅಂದುಕೊಂಡಿದ್ದೆ. ಅಂತೆಯೇ ನೋಡಿದೆ. ಸರಿಯಾದ ಜಾಗಕ್ಕೆ ಸಕಾಲದಲ್ಲಿ ಹೋಗುವಂತಾಗಿ, ಜಗನ್ಮಾತೆ ಇದ್ದ ಅಂಬಾರಿಯನ್ನು ಹೊತ್ತ ಅಭಿಮನ್ಯು ನಮ್ಮ ಮುಂದೆಯೇ ಸಾಗಿದ ಗಳಿಗೆಗೆ ಸಾಕ್ಷಿಯಾಗಿದ್ದಕ್ಕೆ ನಾನು ಎಂದೆಂದಿಗೂ ಆಭಾರಿ.

ಸನತ್ ಕುಮಾರ್

ಕಿಡಿನುಡಿ

ಅವಿವೇಕದ ನಡೆ. ನಾವು ಪ್ರತಿದಿನವೂ ಇನ್ನಷ್ಟು ಕುಸಿಯುತ್ತಿದ್ದೇವೆ, ಅಲ್ಲವೇ?!

(ಜಾಮೀನಿನ ಮೇಲೆ ಹೊರಬಂದಿರುವ ಗೌರಿ ಲಂಕೇಶ್ ಹತ್ಯೆ ಆರೋಪಿಗಳನ್ನು ವಿಜಯಪುರದಲ್ಲಿ ಕೆಲವು ಹಿಂದೂ ಸಂಘಟನೆಗಳ ಮುಖಂಡರು ಅದ್ದೂರಿಯಾಗಿ ಸ್ವಾಗತಿಸಿರುವುದಕ್ಕೆ ಪ್ರತಿಕ್ರಿಯೆ)

ಜಿ.ಎಂ.ರಾವ್, ಅರಿವಳಿಕೆ ತಜ್ಞ

25 ವರ್ಷಗಳ ಹಿಂದೆ

ಗುರುವಾರ, 14-10-1999

● 3ನೇ ಬಾರಿಗೆ ಅಟಲ್ ಪ್ರಧಾನಿ

ನವದೆಹಲಿ, ಅ. 13– ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟಕ್ಕೆ ಕರ್ನಾಟಕದಿಂದ ಹೆಚ್ಚಿನ ಸಂಖ್ಯಾಬಲ ನೀಡುವಲ್ಲಿ ವಿಫಲರಾದ ಜನತಾ ದಳ (ಯು) ಹಿರಿಯ ನಾಯಕ ರಾಮಕೃಷ್ಣ ಹೆಗಡೆ ಅವರನ್ನು ಹೊರತುಪಡಿಸಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಎಪ್ಪತ್ತು ಸದಸ್ಯರ ಮಂತ್ರಿಮಂಡಲದೊಡನೆ ಇಂದು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು.

ರಾಷ್ಟ್ರಪತಿ ಭವನದ ಮುಂಭಾಗದ ಹೊರಾಂಗಣದಲ್ಲಿ ನಡೆದ ಪ್ರಮಾಣವಚನ ಸಮಾರಂಭದಲ್ಲಿ ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟದ ಹೆಸರಿನ ಸಮ್ಮಿಶ್ರ ಸರ್ಕಾರದ ನೂತನ ಸಚಿವರಿಗೆ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಪ್ರಮಾಣವಚನ ಬೋಧಿಸಿದರು.

ಕರ್ನಾಟಕದಿಂದ ಬಿಜೆಪಿಯ ಕೋಟಾದಲ್ಲಿ ಅನಂತ ಕುಮಾರ್ ಎರಡನೇ ಬಾರಿಗೆ ಮಂತ್ರಿಯಾಗಿ ಮುಂದುವರಿದರೆ, ಹದಿಮೂರು ದಿನಗಳ ಬಿಜೆಪಿ ಆಳ್ವಿಕೆಯಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದ ವಿ. ಧನಂಜಯ ಕುಮಾರ್ ಅವರು ಈ ಬಾರಿ ರಾಜ್ಯ ಮಟ್ಟದ ಸಚಿವರಾಗಿ ಅವಕಾಶ ಪಡೆದರು.

● ಪಾಕ್‌ನಲ್ಲಿ ಸೇನಾಡಳಿತ ಜಾರಿ

ಇಸ್ಲಾಮಾಬಾದ್, ಅ. 13 (ಪಿಟಿಐ, ಯುಎನ್‌ಐ)– ಪಾಕಿಸ್ತಾನದಲ್ಲಿ ಕ್ಷಿಪ್ರಕ್ರಾಂತಿ ನಡೆಸಿದ ಸೇನಾ ಮುಖ್ಯಸ್ಥ ಜನರಲ್ ಪರ್ವೇಜ್ ಮುಷರಫ್ ಅವರು ದೇಶದಲ್ಲಿ ಸೇನಾಡಳಿತ ಜಾರಿ ಮಾಡಿರುವುದಾಗಿ ಇಂದು ಅಧಿಕೃತವಾಗಿ ಘೋಷಿಸಿದ್ದಾರೆ. ಅಲ್ಲದೆ ಎಲ್ಲ ನಾಲ್ಕು ಪ್ರಾಂತ್ಯಗಳ ಸರ್ಕಾರಗಳನ್ನೂ ವಜಾ ಮಾಡಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 14-10-1974

● ಕೆ.ಪಿ.ಸಿ.ಸಿ. ಗಾದಿಗೆ ಕೆ.ಎಚ್. ಪಾಟೀಲ್ ಅವಿರೋಧ ಆಯ್ಕೆ

ಬೆಂಗಳೂರು, ಅ.13– ಕರ್ನಾಟಕ ಪ್ರದೇಶ ಆಡಳಿತ ಕಾಂಗ್ರೆಸ್ಸಿನ ದ್ವಿತೀಯ ಚುನಾಯಿತ ಅಧ್ಯಕ್ಷರಾಗಿ 49 ವರ್ಷ ವಯಸ್ಸಿನ ಆಹಾರ ಸಚಿವ ಕೃಷ್ಣೇಗೌಡ ಹನುಮಂತಗೌಡ ಪಾಟೀಲರು ಇಂದು ಅವಿರೋಧವಾಗಿ ಆಯ್ಕೆಯಾದರು.

ಸರ್ವಾನುಮತದ ಆಯ್ಕೆ ಸುಮಾರು ಮೂರು ಗಂಟೆಗಳ ಕಾಲ ಡೋಲಾಯಮಾನ ಪರಿಸ್ಥಿತಿಯಲ್ಲಿ ಇತ್ತು. ಎ.ಐ.ಸಿ.ಸಿ ಪ್ರತಿನಿಧಿಗಳಾದ ಕೇಂದ್ರದ ಶಾಖಾರಹಿತ ಸಚಿವ ಉಮಾಶಂಕರ ದೀಕ್ಷಿತ್ ಅವರು ಸೂಚಿತವಾಗಿದ್ದ ಅಭ್ಯರ್ಥಿಗಳಲ್ಲಿ ವಿ.ಎಲ್. ಪಾಟೀಲ್ ಮತ್ತು ಆರ್. ದಯಾನಂದಸಾಗರ್ ಅವರು ಸ್ಪರ್ಧೆಯಿಂದ ಹಿಂದೆ ಸರಿದಿರುವುದರಿಂದ ಕೆ.ಎಚ್.ಪಾಟೀಲರು ಅವಿರೋಧವಾಗಿ ಆಯ್ಕೆಯಾಗಿರುವರೆಂದು ಪ್ರಕಟಿಸಿದ್ದು, ಹೊರಗೆ ಕಾದು ನಿಂತಿದ್ದವರಿಗೆ ಹಾಗೂ ಅನೇಕ ಮಂದಿ ಕೆ.ಪಿ.ಸಿ.ಸಿ ಸದಸ್ಯರಿಗೆ ತೀರಾ ಅನಿರೀಕ್ಷಿತವಾದ ಸುದ್ದಿಯಂತಿತ್ತು.

● ಐಟಿಐನಲ್ಲಿ ಎಂಜಿನಿಯರ್ ಹುದ್ದೆಗೆ ಪರೀಕ್ಷೆ ಗೊಂದಲದಲ್ಲಿ ಅಂತ್ಯ

ಬೆಂಗಳೂರು, ಅ. 13– ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಎಂಜಿನಿಯರ್‌ಗಳ ಆಯ್ಕೆಗಾಗಿ ಇಂದು ಇಂಡಿಯನ್ ಟೆಲಿಫೋನ್ ಕಾರ್ಖಾನೆ ಏರ್ಪಡಿಸಿದ್ದ ಪರೀಕ್ಷೆ ಅವ್ಯವಸ್ಥೆಯ ಫಲವಾಗಿ ಗೊಂದಲಕ್ಕೆಡೆಗೊಟ್ಟಿತೆಂದು ವರದಿಯಾಗಿದೆ.

ದೂರವಾಣಿ ನಗರದ ವಿದ್ಯಾಮಂದಿರದಲ್ಲಿ ಬೆಳಿಗ್ಗೆ 9ಕ್ಕೆ ನಡೆಯಬೇಕಾಗಿದ್ದ ಪರೀಕ್ಷೆಗಾಗಿ ನೂರಾರು ಮಂದಿ ಅಭ್ಯರ್ಥಿಗಳಿಗೆ ಸಾಕಷ್ಟು ಸ್ಥಳಾವಕಾಶವೇ ಇಲ್ಲದ್ದು ಗೊಂದಲದ ಪರಿಸ್ಥಿತಿಗೆ ಕಾರಣವಾಗಿ, ಪರೀಕ್ಷೆ ಪ್ರಾರಂಭವಾಗಲು ಒಂದೂಕಾಲು ಗಂಟೆ ಸಮಯ ಬೇಕಾಯಿತೆಂದು ಹೇಳಲಾಗಿದೆ. ಜೊತೆಗೆ ಗಲಿಬಿಲಿಯಲ್ಲಿ ಕೆಲ ಅಭ್ಯರ್ಥಿಗಳು ದಾಖಲೆಪತ್ರ ಕಳೆದುಕೊಂಡದ್ದು ಅದಕ್ಕೆ ಕಾರಣವಾಯಿತೆನ್ನಲಾಗಿದೆ.

ಅಧಿಕಾರಿಗಳು ಅಭ್ಯರ್ಥಿಗಳಿಗೆ ಸ್ಥಾನಗಳನ್ನು ಸರಿಯಾಗಿ ಗುರುತಿಸಿರಲಿಲ್ಲವೆಂದು ಅದಕ್ಕೆ ಹಾಜರಾಗಿದ್ದ ಹಲವು ವಿದ್ಯಾರ್ಥಿಗಳು ದೂರಿದ್ದಾರೆ. ಸುಮಾರು ಒಂದು ಸಾವಿರ ಮಂದಿ ಅಭ್ಯರ್ಥಿಗಳು ಪರೀಕ್ಷೆಗೆ ಕೂರಬಯಸಿದ್ದರು.

ದೇಶದಲ್ಲಿ ಮೊದಲಿನ ಸ್ಥಿತಿಗೆ ಮರಳುವಂತಾಗಲು ಪಕ್ಷ ಬಹಳಷ್ಟು ಪ್ರಯಾಸಪಡಬೇಕಾಗುತ್ತದೆ

ಸತ್ವಪರೀಕ್ಷೆಗೆ ಸಿದ್ಧವಿದೆಯೇ ಕಾಂಗ್ರೆಸ್?

ವಿಶ್ಲೇಷಣೆ

ಬಿ.ಎಸ್.ಅರುಣ್

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿನ ಅನಿರೀಕ್ಷಿತ ಸೋಲು ಹಾಗೂ ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿನ ಕಳಪೆ ಪ್ರದರ್ಶನವು ಕಾಂಗ್ರೆಸ್ ಪಕ್ಷವನ್ನು ಧೃತಿಗೆಡಿಸಿವೆ. ಅಷ್ಟೇ ಅಲ್ಲ, ಇವು ಇನ್ನು ಕೆಲವೇ ವಾರಗಳಲ್ಲಿ ನಡೆಯಲಿರುವ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭಾ ಚುನಾವಣೆಗಳ ಮೇಲೂ ಪರಿಣಾಮ ಬೀರಬಹುದು. ಈ ಪರಿಣಾಮ ಬೇರೆ ಬೇರೆ ರೀತಿಯಾಗಿರಬಹುದು. ಕಾಂಗ್ರೆಸ್‌ಗೆ ಲೋಕಸಭಾ ಚುನಾವಣೆಯ ನಂತರ ದೊರೆತ ಉಮೇದು ಕಡಿಮೆ ಆಗಬಹುದು, ಪಕ್ಷದ ಕಾರ್ಯಕರ್ತರು ನಿರುತ್ಸಾಹಗೊಳ್ಳಬಹುದು, ಮಿತ್ರಪಕ್ಷಗಳ ಜೊತೆಗಿನ ಕ್ಷೇತ್ರ ಹೊಂದಾಣಿಕೆಯ ಮಾತುಕತೆಯಲ್ಲಿ ಕಾಂಗ್ರೆಸ್‌ನ ಪ್ರಭಾವ ಕೂಡ ಕುಗ್ಗಬಹುದು.

ಲೋಕಸಭೆ ಚುನಾವಣೆಯ ಹಣಾಹಣಿಯಲ್ಲಿ ಮಹಾರಾಷ್ಟ್ರದಲ್ಲಿ ಛಲದಿಂದ ಕೆಲಸ ಮಾಡಿ, 48 ಸ್ಥಾನಗಳ ಪೈಕಿ 30ರಲ್ಲಿ ಗೆಲುವು ಸಾಧಿಸಿದ ವಿರೋಧ ಪಕ್ಷಗಳ ಮೈತ್ರಿಕೂಟವಾದ ಮಹಾ ವಿಕಾಸ್ ಆಘಾಡಿಯು ವಿಧಾನಸಭಾ ಚುನಾವಣೆಯಲ್ಲಿ ಮತದಾರರ ಮನ ಗೆಲ್ಲಲು ಮೊದಲಿಗಿಂತ ಹೆಚ್ಚು ಕೆಚ್ಚಿನಿಂದ ಪ್ರಯತ್ನಿಸುವುದೇ ಎಂದು ನೋಡಬೇಕು. ಆದರೆ, ಇದು ಮತದಾರರ ಮೇಲೆ ಪರಿಣಾಮ ಉಂಟು ಮಾಡುವುದೇ? ಈ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಭಾರತದ ಪ್ರತಿ ರಾಜ್ಯವೂ ವಿಭಿನ್ನ, ವೈವಿಧ್ಯ. ಪ್ರತಿ ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳೂ ಬೇರೆ ಬೇರೆ.

ಈ ದಿಸೆಯಲ್ಲಿ ಹರಿಯಾಣದ ಫಲಿತಾಂಶ ಹಾಗೂ ಮುಂಬರುವ ಮಹಾರಾಷ್ಟ್ರ ಚುನಾವಣೆಯನ್ನು ಗಮನಿಸೋಣ. ಹರಿಯಾಣದಲ್ಲಿ ಹೆಚ್ಚಿನ ಹಣಾಹಣಿ ಇದ್ದದ್ದು ಎರಡು ರಾಷ್ಟ್ರೀಯ ಪಕ್ಷಗಳ ನಡುವೆ. ಮಹಾರಾಷ್ಟ್ರದಲ್ಲಿ 6 ಮುಖ್ಯ ಪಕ್ಷಗಳಿವೆ. ಹರಿಯಾಣದಲ್ಲಿ ರೈತರ ಉತ್ಪನ್ನಗಳಿಗೆ ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಒಂದು ಮುಖ್ಯ ಬೇಡಿಕೆ. ಮಹಾರಾಷ್ಟ್ರದಲ್ಲಿ ಇದು ಮಹತ್ವದ ಬೇಡಿಕೆ ಆಗಿಲ್ಲ. ಅಲ್ಲಿನ ರೈತರ ಬೇಡಿಕೆಗಳು ತಮ್ಮ ಬೆಳೆಗಳಿಗೆ ಒಳ್ಳೆಯ ಬೆಲೆ, ಸಾಲಮನ್ನಾ, ಮಳೆಯಿಂದಾದ ಬೆಳೆ ನಷ್ಟಕ್ಕೆ ಪರಿಹಾರದಂತಹವು.

ಹಿಂದಿನ ವರ್ಷದ ವಿಧಾನಸಭಾ ಚುನಾವಣೆಗಳನ್ನು ಗಮನಿಸಿದರೆ, ಮೇ ತಿಂಗಳಲ್ಲಿ ನಡೆದ ಕರ್ನಾಟಕದ ಚುನಾವಣೆಯು ನವೆಂಬರ್‌ನಲ್ಲಿ ನಡೆದ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಚುನಾವಣೆಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ತೆಲಂಗಾಣದಲ್ಲಿ ಕಾಂಗ್ರೆಸ್ ಗೆದ್ದರೂ ಅಲ್ಲಿನ ಜನರ ಸಮಸ್ಯೆ, ಬೇಡಿಕೆಗಳೇ ಬೇರೆಯಾಗಿದ್ದವು. ಉತ್ತರದ ಈ ಸೋಲುಗಳ ನಂತರ 'ಇಂಡಿಯಾ' ಮೈತ್ರಿಕೂಟದಲ್ಲಿ ಕಾಂಗ್ರೆಸ್‌ನ ಬಲ ಕಡಿಮೆಯಾಗುವ ಲಕ್ಷಣಗಳು ಆಗಲೇ ಕಾಣುತ್ತಿವೆ. ಉತ್ತರಪ್ರದೇಶದಲ್ಲಿ 10 ವಿಧಾನಸಭಾ ಸ್ಥಾನಗಳಿಗೆ ಉಪಚುನಾವಣೆ ನಡೆಯಬೇಕಿದೆ. ಕಾಂಗ್ರೆಸ್ ಇದರಲ್ಲಿ 5 ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಇರಾದೆ ಹೊಂದಿತ್ತು. ಆದರೆ ಸಮಾಜವಾದಿ ಪಕ್ಷ 6 ಕ್ಷೇತ್ರಗಳಿಗೆ ಏಕಪಕ್ಷೀಯವಾಗಿ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಇಂಡಿಯಾ ಮೈತ್ರಿ ಕೂಟದ ಶಿವಸೇನಾ, ಆರ್‌ಜೆಡಿ, ಎನ್‌ಸಿ, ಜೆಎಂಎಂ ಈ ಎಲ್ಲ ಪಕ್ಷಗಳೂ ಕಾಂಗ್ರೆಸ್ ಅನ್ನು ಟೀಕಿಸಿವೆ.

ಇನ್ನು ತಾನು ಗೆದ್ದೇ ಗೆಲ್ಲುತ್ತೇನೆಂಬ ಹುಮ್ಮಸ್ಸಿನಲ್ಲಿದ್ದ ಕಾಂಗ್ರೆಸ್‌ಗೆ ಹರಿಯಾಣದಲ್ಲಿ ಆಗಿದ್ದಾದರೂ ಏನು? ಇದಕ್ಕೆ ಕಾರಣಗಳು ಅನೇಕ. ಮೊದಲನೆಯದಾಗಿ, ಒಬ್ಬ ನಾಯಕ (ಭೂಪಿಂದರ್ ಸಿಂಗ್ ಹೂಡ), ಒಂದು ಕುಟುಂಬ ಹಾಗೂ ಒಂದು ಜಾತಿಯ (ಜಾಟ್) ಮೇಲೆ ಪಕ್ಷದ ವಿಪರೀತ ಅವಲಂಬನೆ. ಪಕ್ಷದ ಇತರ ಮುಖಂಡರಾದ ದಲಿತ ನಾಯಕಿ ಸೆಲ್ಜಾ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಕಡೆಗಣಿಸಲಾಯಿತು. ಸಂಸದೆ ಸೆಲ್ಜಾ ಪ್ರಚಾರದಿಂದ ದೂರ ಉಳಿದರು. ಫಲಿತಾಂಶದ ಬಳಿಕ ಪತ್ರಿಕೆಯೊಂದಕ್ಕೆ ಕೊಟ್ಟ ಸಂದರ್ಶನದಲ್ಲಿ ಸೆಲ್ಜಾ ಅವರು ಹೂಡ ಗುಂಪನ್ನು ತರಾಟೆಗೆ ತೆಗೆದುಕೊಂಡರು: 'ಕಾಂಗ್ರೆಸ್‌ಗೆ ಇದು ನಂಬಲಾಗದ ಸೋಲು. ಈ (ಹೂಡ) ಗುಂಪು (ಹೂಡ, ಅವರ ಮಗ ದೀಪಿಂದರ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಹಾಗೂ ದಲಿತ ನಾಯಕ ಉದಯ್ ಭಾನ್, ಪಕ್ಷದ ಹರಿಯಾಣ ಉಸ್ತುವಾರಿ ದೀಪಕ್ ಬಬಾರಿಯಾ) ಟಿಕೆಟ್ ಹಂಚಿಕೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ನನ್ನ ಜೊತೆ ಅವರು ಯಾರೂ ಮಾತನಾಡುತ್ತಿರಲಿಲ್ಲ. ಈ ಗುಂಪು ಹರಿಯಾಣ ಮತದಾರರನ್ನು ಲಘುವಾಗಿ ತೆಗೆದುಕೊಂಡಿತು'.

ಟಿಕೆಟ್ ಹಂಚಿಕೆಯಲ್ಲಿ ಸಿಂಹಪಾಲು ಪಡೆದ ಹೂಡ ಬಣ, 90 ಕ್ಷೇತ್ರಗಳ ಪೈಕಿ 72ರಲ್ಲಿ ತನ್ನ ಗುಂಪಿನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಪಕ್ಷ ಸೋಲಲು ಇದು ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ಅನೇಕ ವಿಧಾನಸಭಾ ಸದಸ್ಯರು ಜನಪ್ರಿಯತೆ ಕಳೆದುಕೊಂಡಿದ್ದರೂ ಅವರಿಗೇ ಟಿಕೆಟ್ ಕೊಡಲಾಯಿತು. ಪಕ್ಷದ 36 ಬಂಡುಕೋರ ಅಭ್ಯರ್ಥಿಗಳು ಸ್ವತಂತ್ರವಾಗಿ ಸ್ಪರ್ಧಿಸಿದ್ದರು. ಇದರಲ್ಲಿ 17 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿತು. ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗದಿರುವುದು ಕಾಂಗ್ರೆಸ್‌ಗೆ ಮುಳುವಾಯಿತು.

ಜಾಟ್ ಸಮುದಾಯಕ್ಕೆ ಮಾತ್ರ ಮಣೆ ಹಾಕಿದ್ದನ್ನು ಬಿಜೆಪಿ ಬಳಸಿಕೊಂಡಿತು. 'ಕಾಂಗ್ರೆಸ್‌ಗೆ ಮತ ಹಾಕಿದರೆ ನಿಮಗೆ ಸಿಕ್ಕುವುದು ಜಾಟ್ ಸಮುದಾಯದ ಸರ್ಕಾರ' ಎಂದ ಬಿಜೆಪಿ, ಕಾಂಗ್ರೆಸ್ ಪಕ್ಷವು ದಲಿತರೂ ಸೇರಿದಂತೆ ಬೇರೆ ಎಲ್ಲ ಸಮುದಾಯಗಳನ್ನೂ ಕಡೆಗಣಿಸಿದೆ ಎಂದು ಮತದಾರರಿಗೆ ಮನದಟ್ಟು ಮಾಡಿಕೊಡುವಲ್ಲಿ ಸಫಲವಾಯಿತು. ಜನರಲ್ಲಿ ಈ ಭಾವನೆಯನ್ನು ಹೋಗಲಾಡಿಸಲು ಕಾಂಗ್ರೆಸ್ ನಾಯಕತ್ವ ಏನನ್ನೂ ಮಾಡಲಿಲ್ಲ.

ಹರಿಯಾಣದಲ್ಲಿ ಒಟ್ಟು 36 ಜಾತಿಗಳಿವೆ ಎನ್ನುವುದು ಬಹಳ ಹಿಂದಿನಿಂದಲೂ ಕೇಳಿಬರುವ ಮಾತು. ಈ ಬಾರಿಯ ಪ್ರಚಾರದಲ್ಲಿ ಬಿಜೆಪಿ ಮುಖಂಡರು 'ನಮ್ಮ ಬಳಿ 35 ಜಾತಿಗಳಿವೆ. ಇನ್ನುಳಿದ ಒಂದು ಜಾತಿಯ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ' ಎಂದು ಹೇಳುತ್ತಾ ಬಂದರು. ಇಲ್ಲಿ ಒಂದು ಜಾತಿ ಎಂದರೆ ಜಾಟ್ ಎಂದರ್ಥ. ಬಿಜೆಪಿಯು ಜಾಟ್ ಸಮುದಾಯವನ್ನು ಹೊರತುಪಡಿಸಿ ಬೇರೆ ಜಾತಿಗಳಿಗೆ ಪ್ರಾಮುಖ್ಯ ಕೊಟ್ಟಿತು. ಇದರಲ್ಲಿ ಹಿಂದುಳಿದ ವರ್ಗಗಳು (ಒಬಿಸಿ) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರಮುಖವಾದವು. ಈ ವರ್ಗಗಳನ್ನು ಬಿಜೆಪಿ ಮೊದಲಿನಿಂದಲೂ ಕಡೆಗಣಿಸಲಿಲ್ಲ. ಒಬಿಸಿ ವರ್ಗದವರೇ ಆದ ಮನೋಹರ ಲಾಲ್ ಖಟ್ಟರ್ ಮತ್ತು ಅನಂತರ ಸೈನಿ ಅವರನ್ನು ಪಕ್ಷವು ಮುಖ್ಯಮಂತ್ರಿಯನ್ನಾಗಿ ಮಾಡಿತು.

ಜಾಟ್ ಸಮುದಾಯವನ್ನು ಕಾಂಗ್ರೆಸ್ ಓಲೈಸಿದರೂ ಆ ಸಮುದಾಯದ ಮತಗಳು ಇಂಡಿಯನ್ ನ್ಯಾಷನಲ್ ಲೋಕದಳ, ಕಾಂಗ್ರೆಸ್ ಹಾಗೂ ಬಿಜೆಪಿಗೆ ಹಂಚಿಹೋದವು. ಅದೇ ರೀತಿ ಪರಿಶಿಷ್ಟರ ಮತಗಳೂ ಬಿಜೆಪಿ, ಕಾಂಗ್ರೆಸ್ ಮತ್ತು ಬಿಎಸ್‌ಪಿಗೆ ಹಂಚಿಹೋದವು. ಲೋಕದಳ- ಬಿಎಸ್‌ಪಿ ಮೈತ್ರಿಕೂಟ ಒಟ್ಟು ಸುಮಾರು ಶೇ 6ರಷ್ಟು ಮತ ಪಡೆಯುವಲ್ಲಿ ಯಶಸ್ವಿಯಾಯಿತು. ಇದರಲ್ಲಿ ಹೆಚ್ಚಾಗಿ ಜಾಟ್ ಹಾಗೂ ಪರಿಶಿಷ್ಟರ ಮತಗಳು ಒಳಗೊಂಡಿವೆ. ಪರಿಶಿಷ್ಟರಿಗೆ ಮೀಸಲಾದ 17 ಕ್ಷೇತ್ರಗಳಲ್ಲಿ ಕಾಂಗ್ರೆಸ್ 9 ಹಾಗೂ ಬಿಜೆಪಿ 8 ಕ್ಷೇತ್ರಗಳನ್ನು ತಮ್ಮದಾಗಿಸಿಕೊಂಡವು. ಏಪ್ರಿಲ್- ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ, ಈ 17 ಕ್ಷೇತ್ರಗಳಲ್ಲಿ ಕಾಂಗ್ರೆಸ್ 13ರಲ್ಲಿ ಮುನ್ನಡೆ ಸಾಧಿಸಿತ್ತು. ಆ ಮುನ್ನಡೆಯನ್ನು ವಿಧಾನಸಭಾ ಚುನಾವಣೆಯಲ್ಲಿ ಕಾಯ್ದುಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಉದಯ್ ಭಾನ್ ಕೂಡ ಸೋಲನ್ನಪ್ಪಿದರು.

ತಾವೇ ಗೆಲ್ಲುತ್ತೇವೆ ಎನ್ನುವ ಅತಿಯಾದ ಆತ್ಮವಿಶ್ವಾಸ ಹಾಗೂ ಒಳಜಗಳವು ಪಕ್ಷ ಸೋಲಲು ಪ್ರಮುಖ ಕಾರಣಗಳು. ಪಕ್ಷವನ್ನು ಒಟ್ಟಾಗಿ ಕೊಂಡೊಯ್ಯಲು ಅಥವಾ ಗುಂಪುಗಾರಿಕೆಯನ್ನು ಹೋಗಲಾಡಿಸಲು ಹೈಕಮಾಂಡ್ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇದರ ಜೊತೆಗೆ ಗ್ಯಾರಂಟಿಗಳ ಭರವಸೆ ಕೂಡ ಕಾಂಗ್ರೆಸ್‌ನ ಕೈಹಿಡಿಯಲಿಲ್ಲ.

ಕಾಂಗ್ರೆಸ್–ಬಿಜೆಪಿ ನಡುವೆ ನೇರ ಸ್ಪರ್ಧೆ ಇರುವ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಪರಿಸ್ಥಿತಿ ದಯನೀಯವಾಗಿದೆ. ಹಿಂದಿನ 12 ವರ್ಷಗಳಲ್ಲಿ ಪಕ್ಷ ಎಲ್ಲೂ ಸತತ ಎರಡನೇ ಬಾರಿ ಜಯ ಗಳಿಸಿಲ್ಲ. ಆದರೆ ಬಿಜೆಪಿ ಕೆಲವು ರಾಜ್ಯಗಳಲ್ಲಿ ಹ್ಯಾಟ್ರಿಕ್ ಜಯ ಗಳಿಸಿದೆ: ಗುಜರಾತ್ (2001ರಿಂದ ಅಧಿಕಾರದಲ್ಲಿದೆ), ಮಧ್ಯಪ್ರದೇಶ (2003ರಿಂದ, ಆದರೆ 2018– 20ರಲ್ಲಿ 15 ತಿಂಗಳು ಬಿಟ್ಟು), ಉತ್ತರಾಖಂಡ ಮತ್ತು ಈಗ ಹರಿಯಾಣ. ಹಿಮಾಚಲ ಪ್ರದೇಶವೊಂದನ್ನು ಬಿಟ್ಟರೆ ಉತ್ತರ ಭಾರತದಲ್ಲಿ ಹಿಂದಿನ 6 ವರ್ಷಗಳಲ್ಲಿ ಬಿಜೆಪಿಯನ್ನು ಕಾಂಗ್ರೆಸ್ ನೇರ ಹಣಾಹಣಿಯಲ್ಲಿ ಒಮ್ಮೆಯೂ ಸೋಲಿಸಿಲ್ಲ.

ಈ ಎಲ್ಲಾ ವಿಷಯಗಳನ್ನು ಗಮನಿಸಿದರೆ, ದೇಶದಲ್ಲಿ ತಾನು ಮೊದಲಿನ ಸ್ಥಿತಿಗೆ ಮರಳುವಂತಾಗಲು ಕಾಂಗ್ರೆಸ್ ಬಹಳಷ್ಟು ಪ್ರಯಾಸ ಪಡಬೇಕಾಗುತ್ತದೆ ಹಾಗೂ ಇದಕ್ಕೆ ಅನೇಕ ವರ್ಷಗಳೇ ಬೇಕಾಗಬಹುದು. ಆ ಶ್ರಮಕ್ಕೆ, ದೀರ್ಘ ಸಮಯದ ಪರೀಕ್ಷೆಗೆ ಪಕ್ಷ ತಯಾರಿದೆಯೇ?

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಜಾಹೀರಾತು ಕವಿ!

● ಗುರು ಪಿ.ಎಸ್.

ಜುಬ್ಬಾ, ಪೈಜಾಮ ಹಾಕಿಕೊಂಡು, ಜೋಳಿಗೆಯಂಥ ಬ್ಯಾಗು ನೇತು ಹಾಕಿಕೊಂಡು ಎದುರು ಬಂದು ನಿಂತ ಮುದ್ದಣ್ಣ, 'ಏನ್ ಮುದ್ದಣ್ಣ ಇದು ಹೊಸ ಅವತಾರ! ಥೇಟ್ ಸಾಹಿತಿಯಂತೆ ಕಾಣ್ತಿದ್ದೀಯಲ್ಲ' ಅಚ್ಚರಿಯಿಂದ ಕೇಳಿದ ವಿಜಿ.

'ಸಾಹಿತಿಯಂತೆ ಅಲ್ಲ, ಸಾಹಿತಿಯೇ' ಹೆಮ್ಮೆಯಿಂದ ಹೇಳಿದ ಮುದ್ದಣ್ಣ.

'ಈಗ ಎಲ್ಲಿಗೆ ಪಯಣ?'

'ಚಾಮರಾಜಪೇಟೆಯಲ್ಲಿರೋ ಕನ್ನಡ ಸಾಹಿತ್ಯ ಪರಿಷತ್ ಕಚೇರಿಗೆ, ಅಧ್ಯಕ್ಷರ ಹತ್ತಿರ ಸ್ವಲ್ಪ ಕೆಲಸ ಇದೆ'.

'ಏನ್ ಕೆಲಸವಪ್ಪ, ಅದೂ ಅವರ ಹತ್ತಿರ...'

'ಮಂಡ್ಯದಲ್ಲಿ ನಡೀತಿರೋ ಸಾಹಿತ್ಯ ಸಮ್ಮೇಳನಕ್ಕೆ ನನ್ನ ಅಧ್ಯಕ್ಷರನ್ನಾಗಿ ಮಾಡಿ ಅಂತ ಹೇಳಬೇಕಾಗಿದೆ'.

ಮುದ್ದಣ್ಣನನ್ನ ಮೇಲಿನಿಂದ ಕೆಳಗಿನವರೆಗೆ ನೋಡಿದ ವಿಜಿ, ಕೆಟ್ಟ ನಗುವನ್ನು ಮನದಲ್ಲೇ ತಡೆದುಕೊಂಡು ಹೇಳಿದ, 'ಸಾಹಿತ್ಯಕ್ಕೂ, ನಿನಗೂ ಏನಣ್ಣ ಸಂಬಂಧ?'

'ಸಮ್ಮೇಳನದ ಅಧ್ಯಕ್ಷರಾಗೋಕೆ ಸಾಹಿತಿಗಳೇ ಆಗಿರಬೇಕು ಅಂತೇನಿಲ್ಲ, ಯಾರಾದರೂ ಆಗಬಹುದು ಅಂತ ಕಸಾಪ ಅಧ್ಯಕ್ಷರೇ ಹೇಳಿಲ್ವೆ'.

'ಹಾಗಾದರೆ, ಈಗ ಯಾವ ಕೆಟಗರಿ ಅಡಿ ಬರುವ ಅಧ್ಯಕ್ಷ ನೀನು?'

'ಯಾರಾದರೂ ಆಗಿ ಅಂತ ಹೇಳಿಬಿಟ್ರೆ ಆಗಿಬಿಡೋಕಾಗುತ್ತಾ, ನಮಗೂ ಆತ್ಮಸಾಕ್ಷಿ ಬೇಡವಾ? ಅದಕ್ಕೆ ನಾನೂ ಸ್ವಲ್ಪ ಸಾಹಿತ್ಯ ಕೃಷಿ ಮಾಡಿದೀನಿ. ಮೊನ್ನೆ, ದಸರಾಗೆ ಸರ್ಕಾರದವರು ಕೊಟ್ಟ ಜಾಹೀರಾತು ಬರೆದಿದ್ದು ನಾನೇ!'

'ನೀನಾ, ಅದರಲ್ಲೇನಿತ್ತು ಸಾಹಿತ್ಯ?'

'ಒಬ್ಬ ಓದುಗನಿಗಿರಬೇಕಾದ ಒಳಗಣ್ಣು ನಿನಗಿಲ್ಲವೇ ಇಲ್ಲ ನೋಡು. ನಮ್ಮ ವೈಯಕ್ತಿಕ ತೊಳಲಾಟವನ್ನು ಸಾರ್ವಜನಿಕವಾಗಿ ಹೇಗೆ ಹೇಳಬೇಕು, ಪರೋಕ್ಷವಾಗಿ ಯಾರಿಗೆ ಚುಚ್ಚಬೇಕು, ಪ್ರತ್ಯಕ್ಷವಾಗಿ ಯಾರಿಗೆ ವಿಷ್ ಮಾಡಬೇಕು ಅನ್ನೋ ಎಲ್ಲ ಭಾವನೆಗಳೂ ಅದರಲ್ಲಿ ಅಡಗಿರಲಿಲ್ವ?'

'ಓಹೋ, ಹಾಗೆ... ಅದು ಸರಿ, ಸಾಹಿತಿಗಳಲ್ಲಿ ನವ್ಯ, ನವೋದಯ, ಬಂಡಾಯ ಕವಿ ಅಂತೆಲ್ಲ ಇರ್ತಾರೆ. ಈಗ ನೀನ್ಯಾವ ಕವಿ ಮಾರಾಯ?'

'ಜಾಹೀರಾತು ಕವಿ!'

ಸಂಗತ

ಸೊರಗದಿರಲಿ ಸಾಹಿತ್ಯ ಸಂವಾದ

ಲೇಖಕನಿಗೆ ಹೇಳುವ ಪ್ರೋತ್ಸಾಹದಾಯಕ ಮಾತುಗಳು ಆತನನ್ನು ಖುಷಿಯಾಗಿ ಇರಿಸುತ್ತವೆ. ಬರೆಯುತ್ತಲೇ ಇರಬೇಕು ಎನ್ನುವ ತುಡಿತವನ್ನು ಹೆಚ್ಚಿಸುತ್ತವೆ

● ಮಲ್ಲಿಕಾರ್ಜುನ ಹೆಗ್ಗಳಗಿ

ಲೇಖಕ ಚಂದ್ರಕಾಂತ ಪೋಕಳೆ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿರುವ 'ಗಾಂಧೀಜಿ ಮತ್ತು ಅವರ ಟೀಕಾಕಾರರು' ಕೃತಿ ಓದಿ, ಮೂಲ ಲೇಖಕ ಸುರೇಶ ದ್ವಾದಶೀವಾರ ಅವರಿಗೆ ಫೋನ್ ಮಾಡಿ ಮೆಚ್ಚುಗೆ ಮಾತುಗಳನ್ನು ಹೇಳಿದೆ. ಅವರು ತುಸು ಚಕಿತಗೊಂಡು, 'ಈ ಪುಸ್ತಕ ಕನ್ನಡದಲ್ಲಿ ಪ್ರಕಟವಾಗಿ 8 ವರ್ಷಗಳಾದವು. ಕರ್ನಾಟಕದಿಂದ ಈ ಕೃತಿಯ ಬಗ್ಗೆ ನನ್ನೊಂದಿಗೆ ಮಾತನಾಡಿದವರು ನೀವು ಒಬ್ಬರೇ' ಎಂದರು. ಮಹತ್ವದ ಈ ಪುಸ್ತಕದ ಬಗ್ಗೆ ಪ್ರತಿಕ್ರಿಯೆಗಳು ಬಂದಿಲ್ಲ ಎಂಬ ನೋವು ಆ ಮಾತಿನಲ್ಲಿತ್ತು.

ವಿದೇಶದಲ್ಲಿ ನೆಲಸಿರುವ ಭಾರತೀಯ ಲೇಖಕಿಯೊಬ್ಬರ ಇಂಗ್ಲಿಷ್ ಕಾದಂಬರಿಯನ್ನು ಲೇಖಕರೊಬ್ಬರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಅವರನ್ನು ಈಚೆಗೆ ಭೇಟಿಯಾಗುವಂತಹ ಸಂದರ್ಭ ಒದಗಿಬಂತು. ಮೂಲ ಲೇಖಕಿ ಕರ್ನಾಟಕದಲ್ಲೇ ಇದ್ದರೂ ಕೃತಿ ಬಿಡುಗಡೆ ಕಾರ್ಯಕ್ರಮಕ್ಕೆ ಬರಲಿಲ್ಲ, ಸೌಜನ್ಯಕ್ಕೆ ಒಂದು ಮಾತನ್ನು ಕೂಡ ಆಡಲಿಲ್ಲ ಎಂದು ಬಹಳ ನೊಂದುಕೊಂಡು ಹೇಳಿದರು.

ಗ್ರಂಥಾಲಯಗಳಿಗಾಗಿ ಪುಸ್ತಕ ಖರೀದಿಸುವ ಕ್ರಿಯೆಯಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ, ಸಕಾಲದಲ್ಲಿ ಹಣ ಪಾವತಿ ಮಾಡುವುದಿಲ್ಲ, ಕೆಲವು ಪ್ರಕಾಶಕರು ಶೋಷಣೆ ಮಾಡುತ್ತಾರೆ ಎಂಬೆಲ್ಲ ಆರೋಪಗಳು ಕೇಳಿಬರುತ್ತಿವೆ. ಈ ಎಲ್ಲ ಸಮಸ್ಯೆಗಳ ನಡುವೆಯೂ ಹಲವರು ಸ್ವಂತ ದುಡ್ಡು ಹಾಕಿ ತಮ್ಮ ಕೃತಿಗಳನ್ನು ಉತ್ಸಾಹದಿಂದ ಪ್ರಕಟಿಸುತ್ತಿದ್ದಾರೆ. ಆದರೆ ಕೃತಿಗಳ ಬಗ್ಗೆ ಓದುಗರಿಂದ ಪ್ರತಿಕ್ರಿಯೆಯೇ ಬರುವುದಿಲ್ಲ, ಕೊಂಡು ಓದುವ ಮನೋಭಾವ ಕಡಿಮೆಯಾಗಿದೆ ಎನ್ನುವ ನೋವು ಲೇಖಕರನ್ನು ಕಾಡುತ್ತಿದೆ. ಇದು, ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಪ್ರೀತಿಸುವವರೆಲ್ಲ ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿ.

ನನ್ನ ಪರಿಚಿತ ಯುವ ಕವಿಯೊಬ್ಬರು ಸ್ವಂತ ದುಡ್ಡು ಹಾಕಿ ಕವನ ಸಂಕಲನ ಪ್ರಕಟಿಸಿದ್ದಾರೆ. ಇದು ಅವರ ಮೊದಲ ಪುಸ್ತಕವಾದ್ದರಿಂದ ಹಿರಿಯ ಸಾಹಿತಿಗಳನ್ನು ಕರೆದು ಅದ್ದೂರಿಯಾಗಿ ಬಿಡುಗಡೆ ಸಮಾರಂಭ ಏರ್ಪಡಿಸಿದ್ದರು. ಆಗ ರಿಯಾಯಿತಿ ದರದಲ್ಲಿ ತಮ್ಮ ಪುಸ್ತಕ ಮಾರಾಟದ ವ್ಯವಸ್ಥೆ ಮಾಡಿದ್ದರು. ಅಂದು ಎರಡು ಪ್ರತಿಗಳು ಮಾತ್ರ ಮಾರಾಟವಾದವು. 100ಕ್ಕೂ ಹೆಚ್ಚು ಸಾಹಿತ್ಯಾಸಕ್ತರಿಗೆ ಗೌರವ ಪ್ರತಿಗಳನ್ನು ಕಳಿಸಿಕೊಟ್ಟರು. ವರ್ಷ ಕಳೆದರೂ ಯಾರಿಂದಲೂ ಪ್ರತಿಕ್ರಿಯೆ ಬರಲಿಲ್ಲ. ಈಚೆಗೆ ಭೇಟಿಯಾದಾಗ ಅವರು ಇದನ್ನೆಲ್ಲ ಒಂದೇ ಉಸಿರಿನಲ್ಲಿ ಹೇಳಿ, 'ಬರೆಯುವ ಉತ್ಸಾಹವೇ ಉಡುಗಿಹೋಗಿದೆ' ಎಂದಾಗ ಬಹಳ ನೋವಾಯಿತು.

ನಾನು 1981ರಲ್ಲಿ ಬರೆದು, ಪ್ರಕಟಿಸಿದ 'ಬೀದಿಯಲ್ಲಿ ಬಿದ್ದ ಭಗವಂತ' ಕಾದಂಬರಿಯನ್ನು ಹಾ.ಮಾ.ನಾಯಕ, ಬಸವರಾಜ ಕಟ್ಟೀಮನಿ, ರಾವಬಹಾದ್ದೂರ, ಕೃಷ್ಣಮೂರ್ತಿ ಪುರಾಣಿಕ, ದು.ನಿಂ. ಬೆಳಗಲಿ, ಗೀತಾ ಕುಲಕರ್ಣಿ, ಸಿದ್ಧಲಿಂಗ ಪಟ್ಟಣಶೆಟ್ಟಿ... ಇವರಿಗೆಲ್ಲ ಕಳಿಸಿಕೊಟ್ಟಿದ್ದೆ. ಎಲ್ಲರೂ ಉತ್ತರ ಬರೆದಿದ್ದರು. ಅವುಗಳನ್ನು ಗೆಳೆಯರಿಗೆ ತೋರಿಸಿ ಬಹಳ ಸಂಭ್ರಮಿಸಿದ್ದೆ. ಈ ಪತ್ರಗಳೇ ಈಗಲೂ ಕೈ ಹಿಡಿದು ಬರೆಸುತ್ತಿವೆ. ಪ್ರೋತ್ಸಾಹಕ್ಕೆ ಜಡತ್ವವನ್ನು ಕಳೆಯುವ ಅಗಾಧವಾದ ಶಕ್ತಿ ಇದೆ. 'ನಿಮ್ಮ ಕಥೆಗಳನ್ನು ಓದಿದ್ದೇನೆ. ಬಹಳ ಸೊಗಸಾಗಿವೆ' ಎನ್ನುವಂತಹ ಮಾತುಗಳು ನೆನೆಸಿಕೊಂಡಾಗಲೆಲ್ಲಾ ಲೇಖಕನನ್ನು ಖುಷಿಯಾಗಿ ಇರಿಸುತ್ತವೆ. ಬರೆಯುತ್ತಲೇ ಇರಬೇಕು ಎನ್ನುವ ತುಡಿತವನ್ನು ಹೆಚ್ಚಿಸುತ್ತವೆ.

ಕೃತಿಗಳ ಕುರಿತು ಶೈಕ್ಷಣಿಕ ಸಂಸ್ಥೆ, ಅಕಾಡೆಮಿ, ಸಾಂಸ್ಕೃತಿಕ ವೇದಿಕೆಗಳಲ್ಲಿ ಚರ್ಚೆ, ಸಂವಾದಗಳು ಬಹಳಷ್ಟು ಕಡಿಮೆಯಾಗಿವೆ. ಹೊಸ ಪುಸ್ತಕದ ಬರುವಿಕೆಯ ದಾರಿಯನ್ನು ಸಾಹಿತ್ಯಪ್ರಿಯರೆಲ್ಲ ಕುತೂಹಲದಿಂದ ಕಾಯುವ ದಿನಗಳು ಮಾಯವಾಗಿವೆ. ಜನ ತನ್ನನ್ನು ಗುರುತಿಸಬೇಕು, ಗೌರವಿಸಬೇಕು ಎಂಬ ಬಯಕೆ ಹೊಟ್ಟೆಯ ಹಸಿವಿಗಿಂತ ದೊಡ್ಡದಾಗಿರುತ್ತದೆ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ.

ತಾವು ರಚಿಸಿದ ಪುಸ್ತಕಗಳ ಬಗ್ಗೆ ಅಭಿಪ್ರಾಯ, ವಿಮರ್ಶೆ ಬರಲಿ ಎಂಬುದು ಎಲ್ಲ ಲೇಖಕರ ಸಹಜ ಹಂಬಲವಾಗಿರುತ್ತದೆ. ಪ್ರತಿಕ್ರಿಯೆ ಇಲ್ಲದಿದ್ದರೆ ಲೇಖಕರಲ್ಲಿ ಬರೆಯುವ ತುಡಿತ ಕಡಿಮೆಯಾಗುತ್ತದೆ. ಬಜೆಟ್ ಮಂಡಿಸುವಾಗ ಕವಿಗಳ ಕಾವ್ಯವನ್ನು ಉಲ್ಲೇಖಿಸುವುದು ಒಳ್ಳೆಯ ಪರಿಪಾಟ. ಕಾವ್ಯವು ಬಜೆಟ್‌ಗಿಂತ ಹೆಚ್ಚು ತೂಗುತ್ತದೆ ಎಂದು, ಉಪಮುಖ್ಯಮಂತ್ರಿಯಾಗಿದ್ದ ಎಂ.ಪಿ.ಪ್ರಕಾಶ್ ಹೇಳುತ್ತಿದ್ದರು. ಇದೇ ಮಾದರಿಯಲ್ಲಿ ಸ್ಥಳೀಯ ಸಭೆ, ಸಮಾರಂಭಗಳಲ್ಲಿ, ಸ್ಥಳೀಯ ಸಂಸ್ಥೆಗಳ ಬಜೆಟ್ ಮಂಡನೆಯಲ್ಲಿ ಆಯಾ ಭಾಗದ ಕವಿಗಳ ಸಾಲುಗಳು ಉಲ್ಲೇಖವಾಗಬೇಕು.



'ನಾಲಿಗೆಯಲ್ಲಿ ಉಳಿಯಬಹುದಾದ ಕೆಲವಾದರೂ ಸಶಕ್ತ ಸಾಲುಗಳು ನಿಮ್ಮ ಪುಸ್ತಕದಲ್ಲಿ ಇರಲಿ' ಎಂದು ಸಾಹಿತಿ ಸತ್ಯಕಾಮ ಅವರು ಹೇಳಿರುವ ಮಾತನ್ನು ಲೇಖಕರು ಕೂಡ ಗಮನದಲ್ಲಿ ಇಟ್ಟುಕೊಂಡು ಕೃತಿ ರಚಿಸಬೇಕು. ಬರಹವು ಓದುಗರನ್ನು ಚಕಿತಗೊಳಿಸಬೇಕು, ರಂಜಿಸಬೇಕು, ಚಿಂತನೆಗೆ ತೊಡಗಿಸಬೇಕು.

ಅಮೆರಿಕದಲ್ಲಿ ಪುಸ್ತಕ ಮಾರಾಟ ಕುಸಿತ ಕಂಡ ಸಂದರ್ಭದಲ್ಲಿ, ಅಲ್ಲಿ ಉದ್ಯಮಿಯಾಗಿದ್ದ ಆ್ಯಂಡ್ರೂ ಕಾನಗಿ ಗ್ರಂಥಾಲಯಗಳ ನಿರ್ಮಾಣ ಹಾಗೂ ಪುಸ್ತಕ ಖರೀದಿಗೆ ಬಹಳಷ್ಟು ಹಣವನ್ನು ಕೊಡುಗೆಯಾಗಿ ನೀಡಿದ್ದರು. ಸಂಸ್ಕೃತಿ ಮತ್ತು ಆಯಾ ಕಾಲಘಟ್ಟದ ಚಿಂತನೆಗಳನ್ನು ತಿಳಿಯುವ ವಿಧಾನವೆಂದರೆ, ಪುಸ್ತಕಗಳ ಕುರಿತು ಸಂವಾದ ನಡೆಸುವುದು ಎಂದು ಅವರು ನಂಬಿದ್ದರು.

ಪುಸ್ತಕವನ್ನು ಪ್ರೀತಿಸುವವರು ಮನುಷ್ಯರನ್ನೂ ಪ್ರೀತಿಸುತ್ತಾರೆ ಎನ್ನುವ ಮಾತೊಂದಿದೆ. ವಿಚಾರಗೋಷ್ಠಿ, ಚರ್ಚೆ, ವಿಮರ್ಶೆಯ ಮೂಲಕ ಪುಸ್ತಕ ಪ್ರೀತಿ ಬೆಳೆಸುವ ಕೆಲಸ ನಡೆಯಬೇಕು.

ವಾಚಕರ ವಾಣಿ

ಸಮ್ಮೇಳನ: ಪರಂಪರೆಗೆ ಧಕ್ಕೆಯಾಗದಿರಲಿ

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲು ಸಾಹಿತಿ ಅಲ್ಲದವರಿಂದಲೂ ಲಾಬಿ ಹೆಚ್ಚಿದೆ ಎಂದು ವರದಿಯಾಗಿದೆ (ಪ್ರ.ವಾ., ಅ. 13). ಆದರೆ ಇದು ಸರ್ವಥಾ ಸರಿಯಲ್ಲ. ಹೆಸರೇ ಹೇಳುವಂತೆ ಅದು ಸಾಹಿತ್ಯ ಸಮ್ಮೇಳನ. ಸಾಹಿತ್ಯಕ್ಕೆ ಸಂಬಂಧಪಟ್ಟ ಸಮ್ಮೇಳನದಲ್ಲಿ ಸಾಹಿತಿಗಳಾದವರಿಗೆ ಮಾತ್ರ ಸಮ್ಮೇಳನಾಧ್ಯಕ್ಷರಾಗುವ ಅವಕಾಶ ಇರಬೇಕೆ ವಿನಾ ಬೇರೆಯವರಿಗಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಎಂದು ಇದೆಯೇ ವಿನಾ ಕನ್ನಡ ಪರಿಷತ್ತು ಎಂದಲ್ಲ. ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ಅದರದೇ ಆದ ಒಂದು ಪರಂಪರೆ ಇದೆ. ಸರ್ಕಾರವು ಸಮ್ಮೇಳನ ನಡೆಸಲು ಆರ್ಥಿಕ ಸಹಾಯ ನೀಡುತ್ತದೆ ಎನ್ನುವ ಕಾರಣಕ್ಕೆ ರಾಜಕಾರಣಿಗಳನ್ನಾಗಲಿ ಅಥವಾ ಸಾಹಿತಿಗಳಲ್ಲದವರನ್ನಾಗಲಿ ಅಧ್ಯಕ್ಷರನ್ನಾಗಿ ಮಾಡಿದರೆ 'ಸಾಹಿತ್ಯ ಸಮ್ಮೇಳನ' ಅನ್ನುವುದಕ್ಕೆ ಅರ್ಥವೇ ಇರುವುದಿಲ್ಲ (ಸಾಹಿತಿಗಳಾದಂತಹ ರಾಜಕಾರಣಿಗಳನ್ನು ಹೊರತುಪಡಿಸಿ).

ಸಮ್ಮೇಳನಕ್ಕೆ ಸರ್ಕಾರ ನೀಡುವುದು ಸಾರ್ವಜನಿಕರ ತೆರಿಗೆಯ ಹಣ. ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯ ಮತ್ತು ಸಾಹಿತಿ ಮುಖ್ಯವಾಗದಿದ್ದರೆ ಮುಂದೆ ಅಧಿಕಾರಸ್ಥರು, ಹಣ ಇರುವವರು ಸಮ್ಮೇಳನಾಧ್ಯಕ್ಷರಾಗುವ ಕೆಟ್ಟ ಚಾಳಿ ಪ್ರಾರಂಭವಾಗಬಹುದು. ಕ್ರಮೇಣ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿಯೂ ಲಾಬಿ ನಡೆಸಿ ಹಣಬಲ ಇದ್ದವರು, ಅಧಿಕಾರಬಲ ಇದ್ದವರು ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಇರುತ್ತದೆ. ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿಯೂ ಬಹಳಷ್ಟು ಸಾಹಿತಿಗಳು ಎಲೆ ಮರೆಯ ಕಾಯಿಯಂತೆ ಬೆಳಕಿಗೆ ಬಾರದೇ ಇದ್ದಾರೆ. ಆಯಾ ಮಟ್ಟದಲ್ಲಿ ಅವರಿಗೆ ಅವಕಾಶ ಸಿಗುವಂತೆ ಆಗಬೇಕು.

ವೆಂಕಟೇಶ ಬೈಲೂರು, ಕುಮಟಾ

ಪ್ರಕರಣ ವಾಪಸ್: ಪ್ರಶ್ನೆ ಹುಟ್ಟುಹಾಕಿದ ನಿರ್ಧಾರ

ಹುಬ್ಬಳ್ಳಿಯಲ್ಲಿ 2022ರ ಏಪ್ರಿಲ್‌ನಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ ಗುಂಪೊಂದರ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಮೊಕದ್ದಮೆಯನ್ನು, ಗೃಹ ಸಚಿವರ ಅಧ್ಯಕ್ಷತೆಯ ಸಂಪುಟ ಉಪ ಸಮಿತಿಯ ಶಿಫಾರಸಿನಂತೆ ಹಿಂಪಡೆಯಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿರುವುದಾಗಿ ವರದಿಯಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಆರೋಪಿಯೊಬ್ಬ ಮಾಡಿದ್ದನೆಂಬ ಅವಹೇಳನಕಾರಿ ಪೋಸ್ಟ್‌ನಿಂದ ಅಸಮಾಧಾನಗೊಂಡಿದ್ದ ಅಲ್ಪಸಂಖ್ಯಾತ ಸಮುದಾಯದ ಸುಮಾರು 150 ಜನ ಕಲ್ಲು ಮತ್ತು ದೊಣ್ಣೆಗಳೊಂದಿಗೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಕಲ್ಲು ತೂರಾಟ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಸಚಿವ ಸಂಪುಟ ಸಭೆಯ ಈ ತೀರ್ಮಾನ ಸಹಜವಾಗಿಯೇ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ:

1. ಸಮರ್ಪಕ ಸಾಕ್ಷ್ಯಾಧಾರಗಳಿಲ್ಲದೆ, ಉದ್ದೇಶಪೂರ್ವಕವಾಗಿ ಕೆಲವರನ್ನು ಸಿಲುಕಿಸಲು ಪೊಲೀಸರು ಈ ಪ್ರಕರಣ ದಾಖಲಿಸಿದ್ದರೇ? 2. ಹಾಗಾಗಿರದಿದ್ದಲ್ಲಿ, ಇಂತಹ ಮೊಕದ್ದಮೆಗಳನ್ನು ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಹಿಂತೆಗೆದುಕೊಳ್ಳುವುದು ರಾಜಕೀಯಪ್ರೇರಿತ ಆಗುವುದಿಲ್ಲವೇ ಮತ್ತು ಇಂತಹ ನಿರ್ಣಯಗಳಿಂದ, ಗಲಭೆ ಹತ್ತಿಕ್ಕಿ ಕಾನೂನಿನ ಅನ್ವಯ ಪ್ರಕರಣ ದಾಖಲಿಸಿದ ಪೊಲೀಸರ ನೈತಿಕ ಸ್ಥೈರ್ಯ ಕುಸಿಯುವುದಿಲ್ಲವೇ? 3. ಪ್ರಕರಣವೊಂದು ದಾಖಲಾದ ನಂತರ, ಆರೋಪಿತರು ಅಪರಾಧಿಗಳೇ ಅಥವಾ ನಿರಪರಾಧಿಗಳೇ ಎಂಬುದು ಸಕ್ಷಮ ನ್ಯಾಯಾಲಯದಿಂದ ತೀರ್ಮಾನವಾಗಬೇಕೇ ಅಥವಾ ಆಡಳಿತ ನಡೆಸುವ ಸರ್ಕಾರಗಳ ವಿವೇಚನೆಗೆ ಒಳಪಡಬೇಕೇ? 4. ಇಂತಹ ರಾಜಕೀಯ ಪ್ರೇರಿತ ನಿರ್ಣಯಗಳು ಅಪರಾಧ ಪ್ರವೃತ್ತಿಯ ಹಿನ್ನೆಲೆಯುಳ್ಳವರಿಗೆ ಭಯವನ್ನೇ ಇಲ್ಲದಂತಾಗಿಸಿ, ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ ಕಷ್ಟಕರವಾಗುವಂತೆ ಮಾಡುವುದಿಲ್ಲವೇ?

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಶುಭ-ಅಶುಭ: ಸಂದರ್ಭಾನುಸಾರ ನಂಬಿಕೆ!

'ಮೈಸೂರಿನ ಬಿಜೆಪಿ ಸಂಸದ ಯದುವೀರ್ ದಂಪತಿಗೆ ಇದೇ ಶುಕ್ರವಾರ (ಅ. 11) ಗಂಡುಮಗು ಜನಿಸಿದ್ದು, ಆ ಸೂತಕದ ಕಾರಣ ಶನಿವಾರ ಅವರು ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿಲ್ಲ' ಎಂದು ವರದಿಯಾಗಿದೆ. ಆದರೆ ಯದುವೀರ್ ಶುಕ್ರವಾರ ಮೈಸೂರು ಒಡೆಯರ ಪವಿತ್ರ ಸಿಂಹಾಸನಾರೋಹಣ ಮಾಡಿದರಷ್ಟೆ! ಅದಕ್ಕೆ ಇಲ್ಲದ ಸೂತಕ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಅಡ್ಡಿಯಾಯಿತೆ? ಅಥವಾ ಕಾಂಗ್ರೆಸ್ ಪಕ್ಷದವರ ಜೊತೆ ಕಾಣಿಸಿಕೊಳ್ಳಲು ಮುಜುಗರವಾಗಿ ಈ ನೆಪ ಒಡ್ಡಿದರೆ? ಒಟ್ಟಾರೆ, ಜನನ– ಮರಣದ ಬಗ್ಗೆ ನಮಗಿರುವ ಶುಭ– ಅಶುಭ ನಂಬಿಕೆಗಳು ಸಂದರ್ಭಾನುಸಾರ ಆಗಿರುತ್ತವೆ ಎನ್ನಬಹುದಾಗಿದೆ!

ಪ್ರೊ. ಶಿವರಾಮಯ್ಯ, ಬೆಂಗಳೂರು

ತೆರಿಗೆ ಪಾಲು: ಬೇಕು ರಾಜಕೀಯರಹಿತ ಪ್ರಯತ್ನ

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಬಿಡುಗಡೆ ಮಾಡಿರುವ ತೆರಿಗೆ ಪಾಲಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಗಮನಿಸಿದಾಗ, ಕರ್ನಾಟಕ ಸಹಿತ ಕೆಲವು ರಾಜ್ಯಗಳಿಗೆ ಕಡಿಮೆ ಪಾಲು ದೊರೆತಿರುವುದು, ಉತ್ತರದ ರಾಜ್ಯಗಳಿಗೆ ಅಧಿಕ ಪಾಲು ದೊರೆತಿರುವುದು ಮೇಲ್ನೋಟಕ್ಕೆ ಕಂಡುಬರುವ ಅಂಶವಾಗಿದೆ. ಯಾವ ಯಾವ ಮಾನದಂಡಗಳನ್ನು ಅನುಸರಿಸಿ ತೆರಿಗೆ ಪಾಲನ್ನು ನಿರ್ಧರಿಸಲಾಗುತ್ತಿದೆಯೋ ಆ ಮಾನದಂಡಗಳು ತಾರತಮ್ಯದಿಂದ ಕೂಡಿವೆ ಎಂಬುದು ಕರ್ನಾಟಕ ಮತ್ತು ಇತರ ಕೆಲವು ದಕ್ಷಿಣದ ರಾಜ್ಯಗಳ ಆಕ್ಷೇಪ. ಹೆಚ್ಚು ತೆರಿಗೆ ಸಂಗ್ರಹಿಸಿ ನೀಡುವ ರಾಜ್ಯಗಳಿಗೆ ಸ್ವಲ್ಪ ಹೆಚ್ಚು ಪ್ರಮಾಣದ ಅನುದಾನ ನೀಡುವುದು ಕೂಡ ಒಂದು ಮಾನದಂಡವಾಗಬೇಕು.

ಕರ್ನಾಟಕಕ್ಕೆ ಕಡಿಮೆ ಅನುದಾನ ಬಂದರೂ ರಾಜಕೀಯ ಕಾರಣಗಳಿಗಾಗಿ ಕೇಂದ್ರ ಸರ್ಕಾರ ಮಾಡಿದ್ದೇ ಸರಿ ಎನ್ನುವ ರಾಜ್ಯದ ಜನಪ್ರತಿನಿಧಿಗಳ ಧೋರಣೆ ರಾಜ್ಯಕ್ಕೆ ಮಾರಕವಾದುದು. ಇಂತಹ ವಿಷಯದಲ್ಲಿ ರಾಜಕೀಯ ವೈಮನಸ್ಸು, ಪಕ್ಷಭೇದ ಮರೆತು ರಾಜ್ಯದ ಸಂಸದರು, ಕೇಂದ್ರ ಸಚಿವರು ನಿಲ್ಲಬೇಕು. ರಾಜ್ಯಕ್ಕೆ ಬಿಡುಗಡೆ ಆಗುವ ಹಣ ಮುಖ್ಯಮಂತ್ರಿಗಾಗಲಿ ಅಥವಾ ಇಲ್ಲಿನ ಆಳುವ ಪಕ್ಷದ ವೈಯಕ್ತಿಕ ಖಾತೆಗಾಗಲಿ ಹೋಗುವುದಿಲ್ಲ. ಅದು ನಾಡು, ನಾಡಿನ ಜನರ ಅಭಿವೃದ್ಧಿಗೆ ಒದಗಿಬರುವ ನ್ಯಾಯಯುತ ಹಣ. ಆದ್ದರಿಂದ ನಮ್ಮ ಜನಪ್ರತಿನಿಧಿಗಳು ರಾಜಕೀಯ ಮೀರಿ, ರಾಜ್ಯದಿಂದ ಸಂಗ್ರಹವಾಗುವ ತೆರಿಗೆಯ ಪ್ರಮಾಣ ಹಾಗೂ ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರದಿಂದ ಹೆಚ್ಚಿನ ಪಾಲು ದೊರೆಯುವಂತೆ ಯತ್ನಿಸಬೇಕು. ಮುಂಬರುವ ಹಣಕಾಸು ಆಯೋಗದ ಪ್ರಸ್ತಾವಗಳಲ್ಲಿ ಮತ್ತೆ ರಾಜ್ಯಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಪಕ್ಷ ರಾಜಕಾರಣಕ್ಕೆ ನಾಡ ಹಿತವನ್ನು ಬಲಿ ಕೊಡುವುದು ನಾಡದ್ರೋಹದ ಕೆಲಸವಾಗುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮುದಾಯದಲ್ಲೇ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಹಿಳೆಯರು

ಮೀಸಲು: ಮಹಿಳೆಗೂ ಬೇಕಿದೆ ಸಮಪಾಲು

ಮನೆಯ ಹೊರಗೆ ಸಾಮಾಜಿಕ ತಾರತಮ್ಯದ ಅಡೆತಡೆಗಳು ಮತ್ತು ಮನೆಯ ಒಳಗೆ ಪಿತೃ ಪ್ರಧಾನ ವ್ಯವಸ್ಥೆಯ ರೂಢಿಗಳು ದಲಿತ ಮಹಿಳೆಯರು ಸಾರ್ವಜನಿಕ ರಂಗದಲ್ಲಿ ಮತ್ತು ಸರ್ಕಾರಿ ವಲಯದಲ್ಲಿ ಮುಂದುವರಿಯಲು ಅಡ್ಡಿಯಾಗಿವೆ. ಇವು ಪರಿಶಿಷ್ಟ ಜಾತಿಯ ವರ್ಗದಲ್ಲಿ ಹೆಚ್ಚು ಹಿಂದುಳಿದಿರುವ ಮಹಿಳೆಯರ ಸಬಲೀಕರಣದ ಮೇಲೆ ಪರಿಣಾಮ ಬೀರುತ್ತಿವೆ. ದಲಿತ ಮಹಿಳೆಯರಿಗೆ ಸಾರ್ವಜನಿಕ ಸ್ಥಳಗಳನ್ನು ಪ್ರವೇಶಿಸಲು ಮತ್ತು ಸಾರ್ವಜನಿಕ ಸ್ಥಾನಗಳನ್ನು ಗಳಿಸಲು ಇವು ದೊಡ್ಡ ಅಡಚಣೆಗಳಾಗಿವೆ. ಈ ವ್ಯವಸ್ಥೆ ಬದಲಾಗುವವರೆಗೂ ಶಿಕ್ಷಣ, ಸಂಘಟನೆ ಮತ್ತು ಹೋರಾಟ... ಈ ಮೂರು ಸೂತ್ರಗಳನ್ನು ನಾವು ಅನುಸರಿಸುತ್ತಲೇ ಇರಬೇಕು

• ಅಶ್ವಿನಿ ಓಬುಳೇಶ್

ಭಾರತದ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠವು ನೀಡಿರುವ ತೀರ್ಪಿನ ಪ್ರಕಾರ, ಪರಿಶಿಷ್ಟ ಜಾತಿ ಎನ್ನುವುದು ಸಾಮಾಜಿಕವಾಗಿ ಭಿನ್ನ ಜಾತಿಗಳ ಮಿಶ್ರಣವಾಗಿದ್ದು ಅವುಗಳಲ್ಲಿ ಉಪವರ್ಗೀಕರಣ ಸಾಧ್ಯವಿದೆ. ಹೀಗಾಗಿ, ರಾಜ್ಯವು ಸಂವಿಧಾನದ ಪರಿಚ್ಛೇದ 15(4) ಮತ್ತು 16(4)ರ ಅಡಿಯಲ್ಲಿ ಹಿಂದುಳಿದವರಲ್ಲಿ ಹಿಂದುಳಿದವರಿಗೆ ಪ್ರಾತಿನಿಧ್ಯ ಒದಗಿಸಲು ಪರಿಶಿಷ್ಟ ಜಾತಿಗಳನ್ನು ಮತ್ತಷ್ಟು ವರ್ಗೀಕರಿಸಬಹುದು.

ಸುಪ್ರೀಂ ಕೋರ್ಟ್‌ನ ತೀರ್ಪನ್ನು ಸ್ವಾಗತಿಸುತ್ತಾ, ಎಲ್ಲರಿಗೂ ಸಮಾನತೆಯನ್ನು ಖಚಿತಪಡಿಸಲು, ಪರಿಶಿಷ್ಟ ಜಾತಿಗಳನ್ನು ಅವರ ಶ್ರೇಣೀಕೃತ ಹಿಂದುಳಿದಿರುವಿಕೆ ಪ್ರಕಾರ ಉಪವರ್ಗೀಕರಿಸುವ ಅವಶ್ಯಕತೆಯಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಮುಖ್ಯ ನ್ಯಾಯಮೂರ್ತಿಯವರು ತೀರ್ಪಿನಲ್ಲಿ ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣದ ಎರಡು ಮಾದರಿಗಳನ್ನು ಸಹ ಸೂಚಿಸಿದ್ದಾರೆ. ಆದರೆ, ತೀರ್ಪಿನ ಅನುಷ್ಠಾನದಲ್ಲಿ ನಡೆಯಬಹುದಾದ ರಾಜಕೀಯದ ಬಗ್ಗೆ ಹಲವರಲ್ಲಿ ಆತಂಕವಿದೆ. ಪರಿಶಿಷ್ಟ ಜಾತಿಗಳ ವಿವಿಧ ಗುಂಪುಗಳಿಗೆ ಸೇರಿದ ಮಹಿಳೆಯರ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆಯೂ ಆತಂಕವಿದೆ. ಸರ್ಕಾರವು ಅಳವಡಿಸಿಕೊಂಡ ಉಪ-ವರ್ಗೀಕರಣದ ವಿಧಾನಗಳು ದಲಿತ ಮಹಿಳೆಯರ ನಡುವಿನ ವಿಭಾಗೀಕರಣ ಮತ್ತು ಅಂತರ-ಸಮಾನತೆ ಮತ್ತು ನ್ಯಾಯೋಚಿತತೆಯನ್ನು ಗಣನೆಗೆ ತೆಗೆದುಕೊಳ್ಳುತ್ತವೆಯೇ ಎನ್ನುವ ಪ್ರಶ್ನೆಯೂ ಮೂಡುತ್ತದೆ.

ಜಾತಿ, ಧರ್ಮ, ಜನಾಂಗ ಅಥವಾ ಲಿಂಗ ಇತ್ಯಾದಿಗಳನ್ನು ಒಂದೇ ರೇಖೆಯ ಗುರುತಿನ ಮೇಲೆ ಕೇಂದ್ರೀಕರಿಸುವ ಮೂಲಕ ನಮ್ಮ ಸಮಾಜದಲ್ಲಿರುವ ತಾರತಮ್ಯ ಮತ್ತು ಅಸಮಾನತೆಗಳನ್ನು ಅರ್ಥ ಮಾಡಿಕೊಳ್ಳಲು ಅಥವಾ ಎದುರಿಸಲು ಸಾಧ್ಯವಿಲ್ಲ. ವ್ಯವಸ್ಥೆಯ ಭಾಗವಾಗಿ ಬಂದಿರುವ ಈ ತಾರತಮ್ಯ ಮತ್ತು ಅಸಮಾನತೆಯನ್ನು ವಿಭಾಗೀಕರಣದ (intersectional) ಮಾನದಂಡದ ಮೂಲಕ ಪರೀಕ್ಷೆಗೆ ಒಳಪಡಿಸಬೇಕು. ಇದು, ವ್ಯಕ್ತಿಗಳು ಮತ್ತು ಸಮುದಾಯಗಳ ಹಲವು ಗುರುತುಗಳು ಮತ್ತು ಸ್ಥಾನಮಾನಗಳನ್ನು ಗಣನೆಗೆ ತೆಗೆದುಕೊಳ್ಳಲು ನಮಗೆ ಅವಕಾಶ ನೀಡುತ್ತದೆ.

ಜಾತಿ ಮತ್ತು ಲಿಂಗವನ್ನು ಅಲಕ್ಷಿತ ಸಾಮ್ಯತೆಯ ರೇಖೆಯಲ್ಲಿ ಬಂದು ಸೇರುವ ಅಭೇದ್ಯವಾದ ಪರಿಕಲ್ಪನೆ ಎಂದು ಪರಿಗಣಿಸುವುದಾದರೆ ಮಹಿಳೆಯರು ಮತ್ತು ದಲಿತರು ಅಥವಾ ಅಲಕ್ಷಿತ ಸಮುದಾಯಗಳಿಗೆ ನಿರ್ದಿಷ್ಟವಾದ ಅನುಭವ ನೀಡುವ ಈ ವ್ಯವಸ್ಥೆ, ದಲಿತ ಮಹಿಳೆಯರನ್ನು ಮತ್ತಷ್ಟು ನಿರ್ಲಕ್ಷ್ಯಕ್ಕೆ ಗುರಿಪಡಿಸುತ್ತದೆ. ಇದನ್ನು ದಲಿತ ಮಹಿಳೆಯರ ಬದುಕಿನ 'ಎರಡು ಬಗೆಯ ದೌರ್ಬಲ್ಯ' ಎಂದು ಸಮಾಜ ಶಾಸ್ತ್ರಜ್ಞೆ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ ಗೇಲ್ ಓಂವೆಟ್ ಕರೆದಿದ್ದಾರೆ. ದಲಿತ ಮಹಿಳೆಯರ ಜೀವನಾನುಭವ ಹೊರಗಿನ ಮತ್ತು ಮನೆಯೊಳಗಿನ ಬಹುಸ್ತರದ ಹಿಂಸೆ ಮತ್ತು ದೌರ್ಜನ್ಯವನ್ನು ಒಳಗೊಂಡಿರುತ್ತದೆ. ಅಂಚಿನಲ್ಲಿರುವ ಸಮುದಾಯಗಳು ಎದುರಿಸುವ ದೌರ್ಜನ್ಯ ತೀವ್ರತರವಾದುದು. ದುರದೃಷ್ಟವಶಾತ್, ಅಲಕ್ಷಿತ ಸಮುದಾಯಗಳನ್ನು ಸರ್ಕಾರ, ನೀತಿ ನಿರೂಪಣೆಗಳು, ಸಾಮಾಜಿಕ ಚಳವಳಿಗಳು ಕೂಡ ನಿರ್ಲಕ್ಷಿಸುತ್ತಾ ಬಂದಿವೆ.

ಉಪವರ್ಗೀಕರಣದ ತೀರ್ಪು ದಲಿತ ಮಹಿಳೆಯರ ಮೇಲೆ ಬೀರಬಹುದಾದ ಸಕಾರಾತ್ಮಕ ಪರಿಣಾಮಗಳ ಬಗ್ಗೆ ನಾನು ಹೆಚ್ಚು ಭರವಸೆ ಹೊಂದಿಲ್ಲ. ಏಕೆಂದರೆ, ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸರ್ಕಾರಿ ಸೇವೆ ಮತ್ತು ಶಿಕ್ಷಣ ಸಂಸ್ಥೆಗಳ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಇದುವರೆಗೂ ಸಿಕ್ಕಿಲ್ಲ. ಒಂದು ವೇಳೆ, ಇಷ್ಟೊತ್ತಿಗೆ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿದ್ದರೆ, ಆಗ ಅವರ ಪೈಕಿ ಅತ್ಯಂತ ಹಿಂದುಳಿದವರಿಗೆ ಪ್ರಾತಿನಿಧ್ಯಕ್ಕಾಗಿ ನಾವು ಒತ್ತಾಯಿಸಬಹುದಿತ್ತು. ಅಂಥ ಸಂದರ್ಭ ಇನ್ನೂ ಬಂದಿಲ್ಲ.

ಇಂದು ಮಹಿಳೆಯರಿಗೆ ಸಾಂಸ್ಥಿಕ/ಶಾಸನಬದ್ಧ ಸಮತಲ ಮೀಸಲಾತಿಗೆ ಅವಕಾಶವಿಲ್ಲದೇ ಇದ್ದರೆ, ಸರ್ಕಾರಿ ಸೇವೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಗಳ ಮಹಿಳೆಯರಿಗೆ ಪರಿಣಾಮಕಾರಿ ಪ್ರಾತಿನಿಧ್ಯ ಕನಸಿನ ಮಾತು. ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಸೇವೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟು ಮಹಿಳೆಯರು ವಿವಿಧ ಹುದ್ದೆಗಳನ್ನು ಹೊಂದಿದ್ದಾರೆ ಎಂಬ ದತ್ತಾಂಶದ ಅನುಪಸ್ಥಿತಿ ಮತ್ತು ಅದರ ಬಗೆಗಿನ ನಿರಾಸಕ್ತಿಯು ಗಂಭೀರ ಸಮಸ್ಯೆಯಾಗಿದೆ. ಪರಿಣಾಮಕಾರಿ ಪ್ರಾತಿನಿಧ್ಯ ಬಿಡಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವೇ ಇಲ್ಲದಂತಾಗಿದೆ. ಜೊತೆಗೆ, ಹಿಂಸಾಚಾರ ಮತ್ತು ದಬ್ಬಾಳಿಕೆಗೆ ಬಲಿಯಾದ ಎಲ್ಲಾ ದಲಿತ ಮಹಿಳೆಯರನ್ನೂ ಒಂದೇ ಗುಂಪನ್ನಾಗಿ ನೋಡುವ ಅಪಾಯವೂ ಇದೆ.

ಉಪವರ್ಗೀಕರಣದ ಕುರಿತು ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಪರಿಶಿಷ್ಟ ಜಾತಿಯಲ್ಲಿ ಅತಿ ಹೆಚ್ಚು ಹಿಂದುಳಿದಿರುವ ಮಹಿಳೆಯರಿಗೆ ಅಂಕಿ-ಅಂಶಗಳ ಆಧಾರದಲ್ಲಿ ಹೊಸ ಭರವಸೆಯೊಂದು ಗೋಚರಿಸಬಹುದು; ಸಾರ್ವಜನಿಕ ವಲಯದಲ್ಲಿ ತಮ್ಮ ಅವಕಾಶಗಳನ್ನು ಪಡೆದುಕೊಳ್ಳುವ ಬಗ್ಗೆಯೂ ಅವರು ಸಂಭ್ರಮಿಸಬಹುದು. ಆದಾಗ್ಯೂ, ಮನೆಯ ಹೊರಗೆ ಸಾಮಾಜಿಕ ತಾರತಮ್ಯದ ಅಡೆತಡೆಗಳು ಮತ್ತು ಮನೆಯ ಒಳಗೆ ಪಿತೃ ಪ್ರಧಾನ ವ್ಯವಸ್ಥೆಯ ರೂಢಿಗಳು ದಲಿತ ಮಹಿಳೆಯರು ಸಾರ್ವಜನಿಕ ರಂಗದಲ್ಲಿ ಮತ್ತು ಸರ್ಕಾರಿ ವಲಯದಲ್ಲಿ ಮುಂದುವರಿಯಲು ಅಡ್ಡಿಯಾಗಿ ಇದ್ದೇ ಇರುತ್ತವೆ. ಇವು ಪರಿಶಿಷ್ಟ ಜಾತಿಯ ವರ್ಗದಲ್ಲಿ ಹೆಚ್ಚು ಹಿಂದುಳಿದಿರುವ ಮಹಿಳೆಯರ ಸಬಲೀಕರಣದ ಮೇಲೆ ಪರಿಣಾಮ ಬೀರುತ್ತವೆ. ದಲಿತ ಮಹಿಳೆಯರಿಗೆ ಸಾರ್ವಜನಿಕ ಸ್ಥಳಗಳನ್ನು ಪ್ರವೇಶಿಸಲು ಮತ್ತು ಸಾರ್ವಜನಿಕ ಸ್ಥಾನಗಳನ್ನು ಗಳಿಸಲು ಇವು ದೊಡ್ಡ ಅಡಚಣೆಗಳಾಗಿವೆ.

ಈ ವ್ಯವಸ್ಥೆ ಬದಲಾದಾಗ ಮಾತ್ರ ದಲಿತ ಮಹಿಳೆಯರು ನಿರ್ಭೀತಿಯಿಂದ ತಮ್ಮದೇ ಆದ ಗುಂಪುಗಳನ್ನು ರಚಿಸಿಕೊಳ್ಳಲು, ಸಾರ್ವಜನಿಕ ರಂಗದಲ್ಲಿ ಒಟ್ಟಾಗಿ ಮುನ್ನುಗ್ಗಲು, ತಮ್ಮ ಸಮಸ್ಯೆಗಳನ್ನು ವ್ಯಕ್ತಪಡಿಸಲು ಮತ್ತು ತಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಅಲ್ಲಿಯವರೆಗೂ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂರು ಸೂತ್ರಗಳನ್ನು ನಾವು ಅನುಸರಿಸುತ್ತಲೇ ಇರಬೇಕು.

ಲೇಖಕಿ: ವಕೀಲರು ಮತ್ತು ಧ್ವನಿ ಲೀಗಲ್ ಟ್ರಸ್ಟ್ ಸಂಸ್ಥಾಪಕಿ



ಒಳ ಮೀಸಲಿನ ಒಡಲಾಳ

'ಕರುಳ ಕುಡಿಯನ್ನೇ ದೂರ ಮಾಡಿದಂತೆ'

ಬಾಬಾ ಸಾಹೇಬರು ರಚಿಸಿರುವ ಸಂವಿಧಾನ ಜಾರಿಯ ನಂತರವೂ ಮೀಸಲಾತಿ ಎಂಬ ನ್ಯಾಯಯುತ ಸವಲತ್ತಿನ ಕನಿಷ್ಠ ಸೌಲಭ್ಯಗಳನ್ನು ಪಡೆಯಲೂ ಸಾಧ್ಯವಾಗದ ಪರಿಶಿಷ್ಟ ಜಾತಿಗಳಲ್ಲಿನ ಕೆಲವು ಜಾತಿಗಳು ಇಂದಿಗೂ ಸಮಾಜದಲ್ಲಿ ಮುನ್ನೆಲೆಗೆ ಬರಲಾಗದೆ ಒದ್ದಾಡುತ್ತಿವೆ. ಸುಪ್ರೀಂ ಕೋರ್ಟ್ ತೀರ್ಪಿನ ನಂತರವೂ ಒಳಮೀಸಲಾತಿ ಜಾರಿಯಾಗದ ಕಾರಣ ಸಮುದಾಯಗಳ ನಡುವೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತಿವೆ. ಇದು ದಲಿತರ ಐಕ್ಯತೆಗೆ ಬಹುದೊಡ್ಡ ಸಮಸ್ಯೆಯಾಗುತ್ತದೆ.

ಇಂದಿಗೂ ಕುಟುಂಬದ ಮತ್ತು ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಿರುವ ಮಹಿಳೆಯನ್ನು ಕೇಂದ್ರೀಕರಿಸಿ ಯಾವ ಚರ್ಚೆಯೂ ನಡೆಯುತ್ತಿಲ್ಲ. ಜನಸಂಖ್ಯೆಯ ಅರ್ಧದಷ್ಟು ಇರುವ ಇವರ ಕೊಡುಗೆ ದೇಶಕ್ಕೆ ಬೇಡವೇ? ಇಡೀ ಒಳ ಮೀಸಲಾತಿಯನ್ನು ಹೆಣ್ಣಿನ ದೃಷ್ಟಿಕೋನದಿಂದ, ತಾಯಿ ಕರುಳಿನಿಂದ ನೋಡಿದರೆ ಮಾತ್ರ ಪರಿಹಾರ ದೊರೆಯಲು ಸಾಧ್ಯ. ದಲಿತ ಮಹಿಳೆಯರ ಸ್ಥಿತಿಗತಿ-ಅಭಿವೃದ್ಧಿ, ಜಾತಿ ತಾರತಮ್ಯಗಳು ಖಾಸಗಿ ವಲಯದಲ್ಲಿ ಮೀಸಲಾತಿ ಸೇರಿದಂತೆ ಪರಿಶಿಷ್ಟ ಜಾತಿಗಳ ಮತ್ತಷ್ಟು ಜಟಿಲ ಸಮಸ್ಯೆಗಳತ್ತ ಒಂದು ಮುಷ್ಟಿಯಾಗಿ ಹೋರಾಟಕ್ಕೆ ಮುಂದಾಗಬೇಕಿದೆ.

ಕುಟುಂಬದ ಒಂದು ಮಗು ಪೌಷ್ಟಿಕಾಂಶಗಳು ಸಿಗದೆ ಉಳಿದ ಮಕ್ಕಳಿಗಿಂತ ಸೊರಗಿ ಹೋಗಿದ್ದರೆ ತಾಯಿಯಾದವಳು ಯಾರ ಅನುಮತಿಗೂ ಕಾಯದೇ, ಆ ಮಗುವಿಗೆ ಹೆಚ್ಚಿನ ಒತ್ತು ಕೊಟ್ಟು, ಕಾಳಜಿ ಮಾಡಿ ಸೊರಗಿದ ಮಗುವಿನ ಉತ್ತಮ ಬೆಳವಣಿಗೆಗೆ ದುಡಿಯುತ್ತಾಳೆ. ಇದೇ ತಾಯಿ ಕರುಳು. ತನ್ನ ತಂಗಿಗೋ ತಮ್ಮನಿಗೋ ತನ್ನ ತಾಯಿ ವಿಶೇಷ ಕಾಳಜಿ ವಹಿಸುತ್ತಿದ್ದಾಳೆಂದು ಮತ್ತೊಂದು ಮಗು ನೊಂದುಕೊಳ್ಳುವುದಿಲ್ಲ. ಬದಲಿಗೆ ತನ್ನ ಒಡಹುಟ್ಟಿದ ತಂಗಿ ತಮ್ಮ ತನ್ನಂತೆಯೇ ಬೆಳವಣಿಗೆ ಆಗಲಿ ಎಂದು ಬಯಸುತ್ತಾರೆ. ಇದೇ ರೀತಿಯ ತಾಯಿ ಕರುಳನ್ನು ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ತೋರಿಸಬೇಕಿದೆ. ಪರಿಶಿಷ್ಟ ಜಾತಿಯ ಉಳಿದ ಜಾತಿಗಳ ಮುಖಂಡರೂ ಒತ್ತಾಯಿಸಬೇಕಿದೆ.

30 ವರ್ಷಗಳ ಬೀದಿ ಹೋರಾಟ, ಕಾನೂನು ಹೋರಾಟ ನಡೆಸಿ, ಎಲ್ಲರನ್ನೂ ಗೆದ್ದುಕೊಂಡಂತಹ ಹೋರಾಟಕ್ಕೆ ಗೌರವ ನೀಡಿ ತಾಯಿ ಕರುಳಿನಂತೆ ಒಳಮೀಸಲಾತಿ ಜಾರಿ ಮಾಡುವುದು ಬಿಟ್ಟು ವಿಳಂಬ ನೀತಿ ಅನುಸರಿಸುತ್ತಿರುವುದು ಮತ್ತು ಅವರ ಮೇಲೆ ಇವರ ಮೇಲೆ ಬೆಟ್ಟು ತೋರಿಸುವುದು ತನ್ನ ಕರುಳ ಕುಡಿಯನ್ನೇ ದೂರ ಮಾಡಿದಂತೆಯೇ ಸರಿ. ಒಳಮೀಸಲಾತಿ ಜಾರಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ನಿರ್ಧಾರ ಕೈಗೊಳ್ಳಬೇಕು.

ಸಿರಿಗೌರಿ, ಕರ್ನಾಟಕ ಜನಶಕ್ತಿ ಸಂಘಟನೆ

'ಮಹಿಳೆಯರಿಗೆ ಅರ್ಧದಷ್ಟು ಸಿಗಲಿ'

ಪರಿಶಿಷ್ಟ ಜಾತಿಗಳಲ್ಲಿರುವ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ವೈಜ್ಞಾನಿಕವಾಗಿ ಸವಲತ್ತುಗಳು ಸಿಗಬೇಕೆಂದರೆ ಒಳಮೀಸಲಾತಿ ಜಾರಿ ಆಗಬೇಕು. ತಾತ್ವಿಕವಾಗಿ ಒಳಮೀಸಲಾತಿಯನ್ನು ಒಪ್ಪಿಕೊಂಡಿರುವ ರಾಜ್ಯ ಸರ್ಕಾರ ಈ ಕೂಡಲೇ ಸುಗ್ರೀವಾಜ್ಞೆ ಮೂಲಕ ಅದನ್ನು ಅನುಷ್ಠಾನಗೊಳಿಸಬೇಕು.

ಭಾರತದಂತಹ ಮನುವಾದಿ ಗಂಡಾಳ್ವಿಕೆಯುಳ್ಳ ಸಮಾಜದಲ್ಲಿ ಮೀಸಲಾತಿ ಸೇರಿದಂತೆ ಇತರ ಯಾವುದೇ ಪ್ರಗತಿಶೀಲ ಸೌಕರ್ಯಗಳು ಗಂಡಸರಿಗೇ ಮೊದಲು ದಕ್ಕುತ್ತವೆ. ಇದಕ್ಕೆ ಬಹುದೊಡ್ಡ ಉದಾಹರಣೆ, ರಾಜಕೀಯದಲ್ಲಿ ಇಂದಿಗೂ ಮಹಿಳೆಯರಿಗೆ ಮೀಸಲಾತಿ ಇಲ್ಲದಿರುವುದು. ಹಾಗಾಗಿ ಒಳಮೀಸಲಾತಿಯ ಜಾರಿಯಲ್ಲಿ ಮಹಿಳೆಯರಿಗೂ ಪುರುಷರಷ್ಟೇ ಸಮಪಾಲು ಸಿಗುವಂತಾಗಬೇಕು.

ಪ್ರಸ್ತುತ ಒಕ್ಕೂಟ ಸರ್ಕಾರ ಹಾಗೂ ಹಲವು ರಾಜ್ಯ ಸರ್ಕಾರಗಳು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮಹಿಳೆಯರಿಗೆ ಶೇ 30ರಿಂದ ಶೇ 33ರಷ್ಟು ಮೀಸಲಾತಿ ಮಾತ್ರ ನೀಡುತ್ತಿವೆ. ಭಾರತದ ಜನಸಂಖ್ಯಾ ಪ್ರಮಾಣದಲ್ಲಿ ಪುರುಷರಷ್ಟೇ ಇರುವ ಮಹಿಳೆಯರಿಗೆ ಶೇ 50ರ ಬದಲು ಶೇ 33ರಷ್ಟು ಮೀಸಲಾತಿ ನೀಡುತ್ತಿರುವುದು ಅನ್ಯಾಯದ ಪರಮಾವಧಿ. ಕೆಲವು ರಾಜ್ಯಗಳಲ್ಲಿ 'ಗೆಜೆಟೆಡ್ ಅಲ್ಲದ' ಹುದ್ದೆಗಳಿಗೆ ಮಹಿಳಾ ಮೀಸಲಾತಿ ಇದ್ದು, 'ಗೆಜೆಟೆಡ್' ಹುದ್ದೆಗಳಿಗೆ ಇಲ್ಲ. ಮತ್ತೂ ಕೆಲವೆಡೆ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳಿಗೆ ಮಹಿಳಾ ಮೀಸಲಾತಿ ಇದ್ದು, ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳಿಗಿಲ್ಲ. ಹಲವು ರಾಜ್ಯಗಳಲ್ಲಿ ಬಡ್ತಿಯಲ್ಲಿ ಮಹಿಳೆಯರನ್ನು ಮೀಸಲಾತಿಗೆ ಪರಿಗಣಿಸುವುದಿಲ್ಲ. ಮಹಿಳೆಯರು ಸೇನೆ, ಪೊಲೀಸ್ ಸೇವೆಗಳಲ್ಲಿ ಸಮರ್ಥವಾಗಿ ದುಡಿಯುತ್ತಿರುವ ಈ ಸಂದರ್ಭದಲ್ಲಿ ಸಾಮಾಜಿಕ-ಆರ್ಥಿಕವಾಗಿ ಜನಸಂಖ್ಯಾವಾರು ಮೀಸಲಾತಿ ನೀಡದಿರುವುದು ವಿಪರ್ಯಾಸ.

ಇದೀಗ ದಲಿತರಿಗೆ ಒಳಮೀಸಲಾತಿಯನ್ನು ಜಾರಿಗೊಳಿಸಲೇ ಬೇಕಾಗಿದ್ದು, ಎಲ್ಲಾ ಮೀಸಲು ಹುದ್ದೆಗಳಲ್ಲಿ ಶೇ 50ರಷ್ಟು ಮಹಿಳಾ ಮೀಸಲಾತಿ ನೀಡುವ ಮೂಲಕ ಇಡೀ ದೇಶಕ್ಕೆ ಕರ್ನಾಟಕ ಮಾದರಿಯಾಗಬೇಕಿದೆ. ದಲಿತರೊಳಗೆ ಅತಿ ದಲಿತರಾದ ದಲಿತ ಮಹಿಳೆಯರಿಗೆ ಸಮವಾಗಿ ಅರ್ಧ ಮೀಸಲಾತಿ ಕಲ್ಪಿಸಿ ಕ್ರಾಂತಿಕಾರಿ ಬದಲಾವಣೆಗೆ ರಾಜ್ಯ ಸರ್ಕಾರ ಮುನ್ನುಡಿ ಬರೆಯಬೇಕಿದೆ.

ಕೆಸ್ತಾರ ವಿ.ಮೌರ್ಯ, ಲೇಖಕಿ

ಸಿನಿ ಬಿಟ್ಸ್

ಡಿಸೆಂಬರ್‌ನಲ್ಲಿ ರಾಯಲ್ ತೆರೆಗೆ

ಜಯಣ್ಣ ಭೋಗೇಂದ್ರ ನಿರ್ಮಿಸಿ, ದಿನಕರ್ ತೂಗುದೀಪ ನಿರ್ದೇಶಿಸಿರುವ 'ರಾಯಲ್' ಚಿತ್ರದ 'ಟಾಂಗು ಟಾಂಗು' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚರಣ್ ರಾಜ್ ಸಂಗೀತ, ಕವಿರಾಜ್ ಸಾಹಿತ್ಯ ಹೊಂದಿರುವ ಈ ಹಾಡನ್ನು ಅನುರಾಗ್ ಕುಲಕರ್ಣಿ ಹಾಡಿದ್ದಾರೆ.

'ನಮಗೆ ಯಾವುದೇ ಸಮಸ್ಯೆ ಇರಲಿ, ಅಭಿಮಾನಿಗಳು ಯಾವಾಗಲೂ ನಮಗೆ ಬೆಂಬಲ ನೀಡುತ್ತಾರೆ. ನಮ್ಮ ಕುಟುಂಬ ಮತ್ತು ದರ್ಶನ್ ಮೇಲಿನ ಬೆಂಬಲ ಹೀಗೆ ಇರಲಿ. ನಿಮ್ಮ ಪ್ರೀತಿಗೆ ನಾವು ಯಾವಾಗಲೂ ಚಿರಋಣಿ. ನಾವೇನೇ ಹೆಸರು ಮಾಡಿದ್ದರೂ, ಅದು ಅಭಿಮಾನಿಗಳಿಂದ. ನನಗೆ ಒಳ್ಳೆ ಸಿನಿಮಾಗಳನ್ನು ಮಾಡೋಕೆ ಗೊತ್ತು. ಹಿಟ್ ಮಾಡೋಕೆ ಗೊತ್ತಿಲ್ಲ. ನನ್ನ ಈತನಕದ ಸಿನಿಮಾಗಳನ್ನು ಅಭಿಮಾನಿಗಳೇ ಹಿಟ್ ಮಾಡಿದ್ದು. 'ರಾಯಲ್' ಸಿನಿಮಾದಲ್ಲಿ ಎಲ್ಲ ರೀತಿಯ ಮನರಂಜನೆ ಇದೆ' ಎಂದರು ದಿನಕರ್ ತೂಗುದೀಪ.

ನಟ ವಿರಾಟ್‌ಗೆ ಸಂಜನಾ ಜೋಡಿಯಾಗಿದ್ದಾರೆ. ರಘು ಮುಖರ್ಜಿ, ಅಚ್ಯುತ್ ಕುಮಾರ್, ಗೋಪಾಲ್ ದೇಶಪಾಂಡೆ, ಪ್ರಮೋದ್ ಶೆಟ್ಟಿ, ಛಾಯಾಸಿಂಗ್ ಮುಂತಾದವರು ತಾರಾಗಣದಲ್ಲಿದ್ದಾರೆ. ಸಂಕೇತ್ ಛಾಯಾಚಿತ್ರಗ್ರಹಣವಿದೆ.

'ಡಿಸೆಂಬರ್‌ಗೆ ಚಿತ್ರ ಬಿಡುಗಡೆ ಆಲೋಚನೆಯಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು ಮುಂದಿನ ವಾರದಲ್ಲಿ ಮೊದಲ ಪ್ರತಿ ಸಿದ್ಧವಾಗುತ್ತದೆ. ಈ ಹಾಡಿಗೆ ಜಾನಿ ಮಾಸ್ಟರ್ ನೃತ್ಯ ಸಂಯೋಜಿಸಿದ್ದಾರೆ. ಅದ್ದೂರಿ ವೆಚ್ಚದಲ್ಲಿ ನಿರ್ಮಾಣ ಮಾಡಿದ ಹಾಡಿದು' ಎಂದರು ನಿರ್ಮಾಪಕ ಜಯಣ್ಣ. ❖

..ಗೀತಾ-2 ಚಿತ್ರದಲ್ಲಿ ರಾಗಿಣಿ ಡಾನ್ಸ್

ನಾಗಶೇಖರ್ ನಿರ್ದೇಶನದ 'ಸಂಜು ವೆಡ್ಸ್ ಗೀತಾ-2' ಚಿತ್ರದ ಎರಡನೇ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಹಬಿಬಿ ಹಬಿಬಿ' ವಿಶೇಷ ಹಾಡಿನಲ್ಲಿ ನಟ ರಾಗಿಣಿ ಹೆಜ್ಜೆ ಹಾಕಿದ್ದಾರೆ.

ನಿರ್ದೇಶಕ ನಾಗಶೇಖರ್ ಮಾತನಾಡಿ, 'ಶಿಡ್ಲಘಟ್ಟದಿಂದ ಹಿಡಿದು ಸ್ವಿಟ್ಜರ್‌ಲೆಂಡ್‌ವರೆಗೆ ಹಲವು ಸ್ಥಳಗಳಲ್ಲಿ 72 ದಿನ ಚಿತ್ರೀಕರಿಸಿದ್ದೇವೆ. ಚಿತ್ರ ರಿರೆಕಾರ್ಡಿಂಗ್ ಹಂತದಲ್ಲಿದ್ದು, ತಿಂಗಳಲ್ಲಿ ಚಿತ್ರದ ಫಸ್ಟ್ ಕಾಪಿ ಹೊರಬರಲಿದೆ. ಗೋಕುಲ್ ಫಿಲ್ಮ್ಸ್‌ನವರು ಚಿತ್ರವನ್ನು ಖರೀದಿ ಮಾಡಿದ್ದಾರೆ. ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ. ಚಿತ್ರದಲ್ಲಿ ಐದು ಹಾಡುಗಳಿವೆ. ನಮ್ಮ ಮಣ್ಣಿನ ಕಥೆ ಮಾಡಲು ಹೊರಟಾಗ ಶಿಡ್ಲಘಟ್ಟದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆ ಕಣ್ಣೆದುರಿಗೆ ಬಂತು. ಅಲ್ಲಿನ ಕಪ್ಪುಮಣ್ಣಿನ ಕಥೆಯನ್ನು ಚಿತ್ರದಲ್ಲಿ ಹೇಳಹೊರಟಿದ್ದೇವೆ. ಈಗಿನ ಕಾಲದ ಲವ್‌ಸ್ಟೋರಿ ಜೊತೆಗೆ ಒಂದು ಸರ್‌ಪ್ರೈಸ್ ಕೂಡ ಚಿತ್ರದಲ್ಲಿದೆ' ಎಂದರು.

ಛಲವಾದಿ ಕುಮಾರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸತ್ಯ ಹೆಗಡೆ ಅವರ ಛಾಯಾಚಿತ್ರಗ್ರಹಣ, ಶ್ರೀಧರ್ ವಿ. ಸಂಭ್ರಮ್ ಸಂಗೀತ ಚಿತ್ರಕ್ಕಿದೆ. ರೇಷ್ಮೆ ಬೆಳೆಗಾರನಾಗಿ ಶ್ರೀನಗರ ಕಿಟ್ಟಿ ಕಾಣಿಸಿಕೊಂಡಿದ್ದು, ಅವರಿಗೆ ರಚಿತಾರಾಮ್ ಜೋಡಿಯಾಗಿದ್ದಾರೆ. ವಿಶೇಷ ಪಾತ್ರದಲ್ಲಿ ನಟ ಚೇತನ್ ಚಂದ್ರ, ರಾಗಿಣಿ ದ್ವಿವೇದಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಸಾಧು ಕೋಕಿಲ, ತಬಲಾ ನಾಣಿ ಮುಂತಾದವರು ಚಿತ್ರದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ಜನರಿಂದ** ಕಿಕ್ಕಿರಿದಿರುವ ಹಡಗೊಂದು ನೀರಿನಲ್ಲಿ ಮುಳುಗುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಗೋವಾದಲ್ಲಿ ಸಂಭವಿಸಿರುವ ದುರಂತ ಎಂದೂ, ಅವಘಡದಲ್ಲಿ 23 ಮಂದಿಯ ಮೃತದೇಹಗಳನ್ನು ಹೊರತೆಗೆಯಲಾಗಿದ್ದು, 64 ಮಂದಿ ಕಣ್ಮರೆಯಾಗಿದ್ದಾರೆ; 40 ಪ್ರಯಾಣಿಕರನ್ನು ರಕ್ಷಿಸಲಾಗಿದೆ ಎಂಬ ಪ್ರತಿಪಾದನೆಯೊಂದಿಗೆ ಸಾಮಾಜಿಕ ಜಾಲತಾಣಗಳ ಬಳಕೆದಾರರು ವಿಡಿಯೊ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✅ **ಈ ಬಗ್ಗೆ** ಕೀವರ್ಡ್ ಸರ್ಚ್ ಮಾಡಿದಾಗ, ಗೋವಾದ ಪೊಲೀಸರು ಬಿಡುಗಡೆ ಮಾಡಿರುವ ಹೇಳಿಕೆಯೊಂದು ಸಿಕ್ಕಿತು. 'ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಗೋವಾಕ್ಕೆ ಸಂಬಂಧಿಸಿದ್ದಲ್ಲ, ಆಫ್ರಿಕಾದ ಕಾಂಗೊ ಗಣರಾಜ್ಯದ್ದು' ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಜತೆಗೆ, ಇಂಥ ವಿಡಿಯೊ ಅನ್ನು ಪರಿಶೀಲನೆ ಮಾಡದೇ ಯಾರೂ ಹಂಚಿಕೊಳ್ಳಬಾರದು ಎಂದೂ ತಾಕೀತು ಮಾಡಿದ್ದಾರೆ. ಇದೇ ವಿಡಿಯೊ ಅನ್ನು ಅಸೋಸಿಯೇಟೆಡ್ ಪ್ರೆಸ್ (ಎಪಿ) ಅಕ್ಟೋಬರ್ 4ರಂದು ಯು ಟ್ಯೂಬ್‌ನಲ್ಲಿ ಹಂಚಿಕೊಂಡಿದ್ದು, ಕಾಂಗೊದಲ್ಲಿ ಹಡಗು ಮುಳುಗಿದ ಘಟನೆ ನಡೆದಿದ್ದು, 78 ಮಂದಿ ಮೃತರಾಗಿದ್ದಾರೆ ಎಂದು ಉಲ್ಲೇಖಿಸಿದೆ. ಹಡಗಿನಲ್ಲಿ 278 ಮಂದಿ ಪ್ರಯಾಣಿಸುತ್ತಿದ್ದರು ಎಂದೂ ವರದಿಯಲ್ಲಿ ತಿಳಿಸಲಾಗಿದೆ. ಆಫ್ರಿಕಾದ ಕಾಂಗೊದಲ್ಲಿ ನಡೆದ ಘಟನೆಯನ್ನು ಗೋವಾದಲ್ಲಿ ನಡೆದಿದೆ ಎಂದು ಕೆಲವರು ಸುಳ್ಳು ಹರಡುತ್ತಿದ್ದಾರೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನಂದು ಎನ್ನುವ ಬಂಧನ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

43

ಈಗ ಯಾರಾದರೂ ನಿಮಗೆ ದುಃಖ ಯಾಕಾತು ಅಂತ ಕೇಳಿದರೆ, ಅಪ್ಪ ಸತ್ತಿದ್ದಕ್ಕೆ ದುಃಖ ಆತು ಅಂತೀರಿ. ಅವ್ವ ಸತ್ತಿದ್ದಕ್ಕೆ, ಮಗು ಸತ್ತಿದ್ದಕ್ಕೆ, ಅಂಗಡಿಗೆ ಹಾನಿಯಾಗಿದ್ದಕ್ಕೆ ದುಃಖ ಆತು ಅಂತೀರಿ. ಪರೀಕ್ಷೆ ಫೇಲಾಗಿದ್ದಕ್ಕೆ ದುಃಖ ಆತು ಅಂತೀರಿ. ಆದರೆ ವಿಚಾರ ಮಾಡಿ ನೋಡಿ, ಅಪ್ಪ ಸತ್ತಿದ್ದಕ್ಕೇ ದುಃಖ ಆಗತಿತ್ತು ಅಂದರ ಊರಾಗ ತುಂಬಾ ಜನರ ಅಪ್ಪಂದಿರು ಸತ್ತಾರ, ಅವಾಗ ನಿಮಗ ದುಃಖ ಆಗಲಿಲ್ಲ, ಮಗ ಸತ್ತಾಗ ದುಃಖ ಆಗುತ್ತಿತ್ತು ಅಂದರ ಊರಾಗ ತುಂಬಾ ಜನರ ಮಕ್ಕಳು ಸತ್ತಾಗ ನೀವು ಅವರ ಮನಿಗೆ ಹೋಗಿ ಸಮಾಧಾನ ಮಾಡಿ ಬಂದೀರಿ, ಅವಾಗ ನಿಮಗ ದುಃಖ ಆಗಲಿಲ್ಲ, ವಾಸ್ತವದಲ್ಲಿ ಅಪ್ಪ ಸತ್ತಾಗ, ಅವ್ವ ಸತ್ತಾಗ ಅಥವಾ ಮಗು ಸತ್ತಾಗ ದುಃಖ ಆಗಿಲ್ಲ. ನಂದು ಅನ್ನೋದು ಸತ್ತಿತಲ್ಲ ಅದಕ್ಕೆ ದುಃಖ ಆಗೈತಿ.

ನನ್ನ ತಂದೆ, ನನ್ನ ತಾಯಿ, ನನ್ನ ಮಗು, ನನ್ನ ತಮ್ಮ ಅನ್ನೋರಿಗೆ ಏನಾದರೂ ಆದರೆ ದುಃಖ ಆಗತೈತಿ, ಹೀಗೆ ನನ್ನ ಅನ್ನುವುದಿದ್ದಾಗ ಮಾತ್ರ ದುಃಖ ಆಗೈತಿ. ಈ ನಂದು ಅನ್ನುವುದೇ ಬಂಧನ. ಇದೇ ದುಃಖದ ಬೀಜ. ಅಪ್ಪ ಮತ್ತು ನಾನು ಎನ್ನುವುದರ ನಡುವೆ ನಂದು ಅನ್ನೋದು ಸೇರಿಕೊಂಡೈತಲ್ಲ ಅದು ಬಂಧನ. ಎಲ್ಲಿ ನಂದು ಅನ್ನೋದು ಬರತೈತಿ, ಅಲ್ಲಿ ದುಃಖ ಶುರುವಾಗತೈತಿ.

ಒಬ್ಬ ಶ್ರೀಮಂತ ದೊಡ್ಡ ಮನೆ ಕಟ್ಟಿಸಿದ್ದ. ಒಂದಿನ ಕಾಶಿ ಯಾತ್ರೆಗೆ ತೆರಳಿದ. ಒಂದು ತಿಂಗಳ ನಂತರ ವಾಪಸು ಬಂದಾಗ ಅವ ಕಟ್ಟಿದ ಮನೆಗೆ ಬೆಂಕಿ ಬಿದ್ದಿತ್ತು. ಅದನ್ನು ನೋಡಿ ಹೊಳ್ಳಾಡಿ ಅಳಾಕತ್ತಿದ. ಮಗ ಬಂದು 'ಯಾಕೆ ಅಳಾಕತ್ತಿ' ಎಂದು ಕೇಳಿದ. 'ಅಲ್ಲೋ ಯಾಕಳಾಕತ್ತಿ ಅಂತಾ ಕೇಳ್ತಿಯಲ್ಲೋ, ಮನೆಗೆ ಬೆಂಕಿ ಬಿದ್ದಿದ್ದು ಕಾಣವಲ್ದೇನು' ಎಂದ ಅಪ್ಪ. ಅದಕ್ಕೆ ಮಗ 'ನೀನು 50 ಲಕ್ಷ ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿಸಿದ್ದಿ. ಆದರೆ ಅದನ್ನು ಒಬ್ಬರು 80 ಲಕ್ಷ ರೂಪಾಯಿಗೆ ಕೇಳಿದರು. ಅದಕ್ಕೆ ಮಾರಿಬಿಟ್ಟೆ. ಈಗ ಅದು ನಮ್ಮದಲ್ಲ' ಎಂದ. ಮನೆ ನಮ್ಮದಲ್ಲ ಎಂದು ಕೇಳಿದ ತಕ್ಷಣ ಅಪ್ಪನಿಗೆ ದುಃಖನೇ ಹೋತು. ಅಳೋದು ನಿಲ್ಲಿಸಿದ. ಅಷ್ಟರಲ್ಲೇ ಸಣ್ಣ ಮಗ ಬಂದು 'ಮನೆ ಮಾರಿದ್ದು ನಿಜ. ಆದರೆ ಇನ್ನೂ ರಿಜಿಸ್ಟರ್ ಆಗಿಲ್ಲ. ಈಗಲೂ ನಮ್ಮ ಹೆಸರಲ್ಲೇ ಐತೆ' ಎಂದಾಗ ಅಪ್ಪನಿಗೆ ಮತ್ತೆ ದುಃಖ ಆತು.

ಈಗ, ನೀವು ಇಬ್ಬರು ಜಗಳ ಆಡ್ತೀರಿ. ಪರಸ್ಪರ ತಲೆ ಕೂದಲು ಹಿಡಿದು ಜಗ್ಗಾಡ್ತೀರಿ. ಪೊಲೀಸ್ ಕಂಪ್ಲೇಂಟ್ ಕೊಡ್ತೀರಿ. ಕೋರ್ಟ್‌ಗೂ ಹೋಗ್ತೀರಿ. ಆದರೆ ನೀವು ಕಟಿಂಗ್ ಶಾಪ್‌ಗೆ ಹೋಗಿ ಕೂದಲು ಕತ್ತರಿಸ್ತೀರಿ. ಆತ ಕತ್ತರಿಸಿದ ಕೂದಲನ್ನು ಬಿಸಾಡತಾನ. ಊರಮಂದಿ ಅದರ ಮ್ಯಾಲ ಅಡ್ಡಾಡತಾರ. ಕೂದಲು ಹಿಡಿದರೆ ಕಂಪ್ಲೇಂಟ್ ಮಾಡತೀರಿ, ಆದರೆ ನಿಮ್ಮದೇ ಕೂದಲಿನ ಮೇಲೆ ಊರ ಮಂದಿ ಅಡ್ಡಾಡಿದರೂ ಸುಮ್ಮನಿರ್ತೀರಿ. ಯಾಕೆ? ಯಾಕೆಂದರ ನಂದು ಅನ್ನೋದು ಅನ್ನೋ ಕಾರಣಕ್ಕೆ.

ನಂದು ಅಂತ ಬಂದರೆ ಮಾತ್ರ ದುಃಖ. ಇಲ್ಲವಾದರೆ ದುಃಖ ಇಲ್ಲ. ಸಕಲ ದುಃಖದ ಬೀಜ ಈ ನಂದೂ ಅನ್ನೋದರೊಳಗ ಐತಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಅಕ್ಟೋಬರ್ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ದ್ವಾದಶಿ ಗಂ. 44-51 **ನಕ್ಷತ್ರ:** ಶತಭಿಷ ಗಂ. 24-43 **ಯೋಗ:** ಗಂಡ ಗಂ. 18-01, **ಕರಣ:** ವಿಷ್ಟಿ ಗಂ. 06-42, ಕನ್ಯಾ ಮಾಸದ 27 ನೇ ದಿನ, **ಮಳೆನಕ್ಷತ್ರ:** ಚಿತ್ರ 2.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-24 **ಸೂರ್ಯಾಸ್ತ:** 06-08
ಮುಸ್ಲಿಂ ದಿನಾಂಕ: 10 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 2, 4

ಮೇಷ: ಅಕ್ಕಪಕ್ಕದವರು ಅಥವಾ ವ್ಯಾವಹಾರಿಕ ಪಾಲುದಾರರು ನಿಮ್ಮ ಬುದ್ಧಿವಂತಿಕೆಯನ್ನು ಮೆಚ್ಚಿಕೊಳ್ಳಲಿದ್ದಾರೆ. ನೂತನ ವ್ಯಕ್ತಿಯನ್ನು ಭೇಟಿಯಾಗುವುದರಿಂದ ಉದ್ಯೋಗದಲ್ಲಿ ಹೊಸ ಹುರುಪು ಮೂಡಲಿದೆ.

ವೃಷಭ: ಹೆಚ್ಚು ಸಂಬಳದ ಆಸೆಯಿಂದ ಅನುಕೂಲಕರವಾದ ಮತ್ತು ಹತ್ತಿರದ ಸ್ಥಳದಲ್ಲಿರುವ ಕೆಲಸವನ್ನು ತಿರಸ್ಕರಿಸಬೇಡಿ. ಪಿತೃ ವರ್ಗದ ಆಶೀರ್ವಾದದಿಂದ ಮನೆಯಲ್ಲಿ ಶುಭ ಘಟನೆ ಜರುಗುವುದು. ಆಂಜನೇಯನನ್ನು ಆರಾಧಿಸಿ.

ಮಿಥುನ: ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿ ಕಾರ್ಮಿಕರಿಗೆ ಸುವರ್ಣಾವಕಾಶಗಳು ಸಿಗಲಿವೆ. ನಿರುದ್ಯೋಗಿಗಳಿಗೆ ಲೆಕ್ಕ ಪತ್ರಗಳ ಜವಾಬ್ದಾರಿ ನೋಡುವ ಉದ್ಯೋಗ ಅನಿರೀಕ್ಷಿತವಾಗಿ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ವ್ಯವಹಾರದಲ್ಲಿ ಹೆಚ್ಚು ಶ್ರಮ ಹಾಕಿ, ಕಾರ್ಯನಿರ್ವಹಿಸಿ. ಮನಸ್ಸಿನಲ್ಲಿ ಕೊರೆಯುತ್ತಿರುವ ಹಲವು ಚಿಂತೆಗಳಿಗೆ ಈ ದಿನ ಉತ್ತರ ಸಿಗುವುದು.

ಸಿಂಹ: ದಿನಸಿ ವರ್ತಕರು ವ್ಯಾಪಾರದಲ್ಲಿ ಹೆಚ್ಚಿನ ಬಂಡವಾಳ ಹೂಡಲು ಹಿಂಜರಿಯಬೇಡಿ. ವಿವಾಹ ವಿಷಯಗಳು ನಿಮ್ಮಿಷ್ಟದಂತೆಯೆ ನಡೆಯಲಿವೆ. ಪೊಲೀಸರಿಗೆ ಮುಂಬಡ್ತಿಯ ಸಾಧ್ಯತೆ ಇದೆ.

ಕನ್ಯಾ: ಎಂಜಿನಿಯರಿಂಗ್ ಪದವಿಯ ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವರಿಗೆ ಉತ್ತಮ ಸಂಸ್ಥೆಯಲ್ಲಿ ಉದ್ಯೋಗ ದೊರೆಯಲಿದೆ. ನಿಮ್ಮ ಮಾತುಗಾರಿಕಾ ಕೌಶಲವನ್ನು ಸಹಚರರು ಪ್ರಶಂಸಿಸಲಿದ್ದಾರೆ.

ತುಲಾ: ಸ್ನೇಹಿತರ ಪಾಲುದಾರಿಕೆಯೊಂದಿಗೆ ವ್ಯವಹಾರ ಆರಂಭಿಸಿದಲ್ಲಿ ಆದಾಯ ದ್ವಿಗುಣಗೊಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಪ್ರಾಮಾಣಿಕರಾದ ನಿಮಗೆ ವ್ಯವಹಾರದಲ್ಲಿ ಲಾಭಾಂಶ ಕಡಿಮೆ ಇದ್ದರೂ ನೆಮ್ಮದಿ ಇರುವುದು.

ವೃಶ್ಚಿಕ: ಧಾರ್ಮಿಕ ಕಾರ್ಯಕ್ರಮದ ಮುಂದಾಳತ್ವ ವಹಿಸಿಕೊಳ್ಳಲು ಹಿಂಜರಿಕೆ ಬೇಡ. ವಕೀಲರಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯ ಗಳಿಕೆಯಾದರೂ, ಆತ್ಮಸಾಕ್ಷಿ ಒಪ್ಪಿಕೊಳ್ಳಲಾಗದ ಘಟನೆ ನಡೆಯಬಹುದು.

ಧನು: ಐಷಾರಾಮಿ ಜೀವನ ನಡೆಸಬೇಕೆಂಬ ನಿಮಗೆ, ಅದಕ್ಕೆ ತಕ್ಕಂತಹ ಅವಕಾಶ ಸಿಗುವುದು. ವಾಹನ ಚಾಲನೆ ವೇಳೆ ಆತುರ ಬೇಡ. ದೈನಂದಿನ ಕೆಲಸಗಳನ್ನು ಸಾವಧಾನದಿಂದ ಮಾಡಿ ಮುಗಿಸುವಿರಿ.

ಮಕರ: ಅನಗತ್ಯ ದುಂದುವೆಚ್ಚ ಬೇಡ. ಮಗಳ ಮದುವೆಯ ಖರ್ಚಿನ ಬಗ್ಗೆ ಆಲೋಚನೆ ಮಾಡಬಹುದು. ಮನಃಶಾಸ್ತ್ರ ವಿಷಯದಲ್ಲಿ ಅಧ್ಯಯನ ನಿರತರಿಗೆ ಅನುಕೂಲಕರ ದಿನ. ತಂದೆ ತಾಯಿಯ ಆರೋಗ್ಯ ಸುಧಾರಿಸಲಿದೆ.

ಕುಂಭ: ಕ್ಷಣಿಕ ಸುಖಕ್ಕಿಂತಲೂ ಭವಿಷ್ಯದ ಕುರಿತು ಗಂಭೀರ ಆಲೋಚನೆ ಮಾಡುವುದು ಒಳಿತು. ಚಿನ್ನಾಭರಣಗಳ ಮೇಲೆ ಬಂಡವಾಳ ಹೂಡಲು ಉತ್ತಮ ದಿನ. ಯೋಗ, ಧ್ಯಾನಕ್ಕಾಗಿ ಅಲ್ಪ ಸಮಯವನ್ನು ಮೀಸಲಿಡಿ.

ಮೀನ: ಪಾಲುಗಾರರಲ್ಲಿ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದು ಉತ್ತಮ. ಕೆಲಸವನ್ನು ಜಾಣ್ಮೆಯಿಂದ ಪೂರ್ಣಗೊಳಿಸುವಿರಿ. ಶ್ರದ್ಧೆ ಹಾಗೂ ಏಕಾಗ್ರತೆ ಜಯ ತರಲಿವೆ.

ಪದಬಂಧ 5831

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ತುಂಬಾ ಜೋರಾದ ನಗು (4)
4.ಹರಿ ಇದ್ದಾಗ ಆಕ್ರೋಶದಿಂದ ರೇಗು! (4)
6.ಆಕರ ಅಥವಾ ಗಣಿ (2)
8.ಪ್ರೀತಿಪಾತ್ರನಾದವನು ತಿರುಗಿದ್ದಾನಲ್ಲಾ! (3)
10.ನಕಲುಚಿತ್ರ ಉಲ್ಟಾ ಪಲ್ಟಾ ಆಗಿದೆ (4)
11.ಸದಾ ಉರಿಯುತ್ತಿರುವ ದೀಪ (4)
12.ಋತುಗಳ ರಾಜ (3)
13.ಬ್ರಹ್ಮನನ್ನು ಹೀಗೂ ಕರೆಯುತ್ತಾರೆ (4)
14.ಮಲಗುವ ಮನೆಯಿದು (4)
15.ಮೂಲಿಕೆಗಳನ್ನು ಭಟ್ಟಿಯಿಳಿಸಿ ತೆಗೆದ ರಸ (3)
16.ಉಗುರು ಇಲ್ಲಿ ಕಾಣುತ್ತಿದೆ (2)
18.ಬದುಕಿದ್ದೂ ಸತ್ತಂತೆ ಇರುವವನು (4)
20.ಬೆಳ್ಳಿಯ ಬೆಟ್ಟ (4)

ಮೇಲಿಂದ ಕೆಳಕ್ಕೆ
1.ಬೆಟ್ಟದಿಂದ ಹರಿದು ಬರುವ ಪ್ರವಾಹ (2)
3.ಗೆಳೆಯ ಇಲ್ಲಿದ್ದಾನೆ (2)
5.ಒಂದು ಜನಾಂಗವನ್ನು ಹೊಸಮಾರ್ಗದಲ್ಲಿ ನಡೆಸುವವನು (6)
7.ರೂಪವಿರುವ ಆಜ್ಞಾಪತ್ರ! (3)
9. ಆದಿಶೇಷನ ಮೇಲೆ ಮಲಗುವವನು (6)
13.ಜನ ಕೊನೆಗಿದ್ದರೆ ಇದು ಉತ್ಪತ್ತಿ! (3)
17.ಖರ್ಪರದಲ್ಲಿರುವ ಸಂವತ್ಸರ ಗೊತ್ತಾಯಿತೇ? (2)
19.ವ್ಯಯಕ್ಕೊಂದು ಪರ್ಯಾಯ ಪದ (2)



5830ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಣದಾನ 3.ಅಪರೂಪ
5.ನಡುಕ 8.ಮಿಥುನ
9.ಯೋಗ್ಯತಾಪತ್ರ 10.ತಪ್ಪಲೆ
12.ಹರಕೆ 15.ರಿಕ್ತಹಸ್ತ
16.ಮಧುಮಾಸ

ಮೇಲಿಂದ ಕೆಳಕ್ಕೆ:
1. ಪ್ರಾಚೀನ 2.ನಗ್ನ
3.ಅಷ್ಟಮಿ 4.ಪರಧನ
6.ಕರೆಯೋಲೆ 7.ಸಂತಾಪ
8.ಮಿತ್ರದ್ರೋಹ 10.ತರಕಾರಿ
11.ಪ್ರಶಸ್ತ 12.ಕೆಲಸ 14.ಭೀಮ

ಸುಡೊಕು 6216

1		9		2			8	
	6				9		5	2
	8	2		4	5			
2							6	
		4		3				1
5					2			
		5		9			7	6
7			2		6	8		
9	4			7			3	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6215 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

'ಆಟೊ ಪ್ರಯಾಣಕ್ಕೆ ರಶೀದಿ ನೀಡಿ'
ಓಲಾಗೆ ಸಿಸಿಪಿಎ ಚಾಟಿ

ನವದೆಹಲಿ (ಪಿಟಿಐ): ಓಲಾ ಆಟೊದಲ್ಲಿ ಸಂಚರಿಸುವ ಪ್ರಯಾಣಿಕರಿಗೆ ರಶೀದಿ ನೀಡುವಂತೆ ಓಲಾ ಕಂಪನಿಗೆ, ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಭಾನುವಾರ ಸೂಚಿಸಿದೆ.

ಪ್ರಯಾಣಿಕರು ಕ್ರಮಿಸಿದ ದೂರಕ್ಕಿಂತಲೂ ಓಲಾ ಆ್ಯಪ್‌ನಲ್ಲಿ ಹೆಚ್ಚು ಬಿಲ್ ತೋರಿಸಲಾಗುತ್ತದೆ. ಗ್ರಾಹಕರು ಪಾವತಿಸಿದ ಅಧಿಕ ಶುಲ್ಕವನ್ನು ಕಂಪನಿಯು ಮರಳಿಸುವುದಿಲ್ಲ. ಇದಕ್ಕೆ ಬದಲಾಗಿ ಕೂಪನ್ ಕೋಡ್ ನೀಡುತ್ತಿದೆ. ಗ್ರಾಹಕರು ಈ ಕೋಡ್ ಬಳಸಿ ಮತ್ತೊಮ್ಮೆ ಸಂಚರಿಸಲು ಅವಕಾಶ ಸಿಗಲಿದೆ.

'ಕಂಪನಿಯು ಗ್ರಾಹಕರ ಬ್ಯಾಂಕ್ ಖಾತೆಗಳಿಗೆ ಹೆಚ್ಚುವರಿ ಹಣವನ್ನು ಮರುಪಾವತಿಸುತ್ತಿಲ್ಲ. ಆ್ಯಪ್ ಮೂಲಕ ಆಟೊ ಬುಕಿಂಗ್ ಮಾಡಿದ ಎಲ್ಲಾ ಗ್ರಾಹಕರಿಗೂ ರಶೀದಿ ಅಥವಾ ಇನ್‌ವಾಯ್ಸ್ ನೀಡಬೇಕು. ಇದನ್ನು ನೀಡದಿರುವುದು ಗ್ರಾಹಕ ರಕ್ಷಣಾ ಕಾಯ್ದೆ 2019ರ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಪ್ರಾಧಿಕಾರ ಹೇಳಿದೆ.

ಕಂಪನಿಯು ಗ್ರಾಹಕರಿಗೆ ಹಣ ಮರುಪಾವತಿ ಸಂಬಂಧ ಪ್ರಶ್ನಾತೀತ ನೀತಿಯನ್ನು ಅಳವಡಿಸಿಕೊಂಡಿದೆ. ನೊಂದ ಗ್ರಾಹಕರಿಗೆ ಪರಿಹಾರ ಸಿಗುತ್ತಿಲ್ಲ ಎಂದು ಹೇಳಿದೆ. ಗ್ರಾಹಕರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಬೇಕು ಅಥವಾ ಕೂಪನ್ ನೀಡಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಎಚ್ಚೆತ್ತುಕೊಂಡ ಕಂಪನಿ: ಸಿಸಿಪಿಎ ಸೂಚನೆ ನೀಡಿದ ಬೆನ್ನಲ್ಲೇ ಓಲಾ ಕಂಪನಿಯು ತನ್ನ ಕಾರ್ಯಾಚರಣೆಯಲ್ಲಿ ಹಲವು ಬದಲಾವಣೆಗೆ ಕ್ರಮಕೈಗೊಡಿದೆ.

ವೆಬ್‌ಸೈಟ್‌ನಲ್ಲಿ ಗ್ರಾಹಕರ ಕುಂದು ಕೊರತೆ ಆಲಿಸುವ ಸಂಬಂಧ ನೋಡಲ್ ಅಧಿಕಾರಿಗಳ ಮಾಹಿತಿ ನೀಡಿದೆ. ಪ್ರಯಾಣ ರದ್ದತಿಗೆ ಸಂಬಂಧಿಸಿದಂತೆ ಮತ್ತಷ್ಟು ಕಾರಣಗಳನ್ನು ಪ್ರಕಟಿಸಿದೆ.

ಎಷ್ಟು ಸಮಯಕ್ಕೆ ಮೊದಲು ಪ್ರಯಾಣ ರದ್ದುಪಡಿಸಬೇಕು, ಇದಕ್ಕೆ ಶುಲ್ಕ ಎಷ್ಟು ಕಡಿತವಾಗಲಿದೆ ಎಂಬ ಬಗ್ಗೆ ವಿವರ ನೀಡಿದೆ. ಕಿಲೊಮೀಟರ್‌ಗೆ ಅನುಗುಣವಾಗಿ ದರ ಪಟ್ಟಿ ಪ್ರಕಟಿಸಿದೆ. ಚಾಲಕರ ಕಾಯುವ ಸಮಯಕ್ಕೆ ಗ್ರಾಹಕರು ಎಷ್ಟು ಶುಲ್ಕ ಪಾವತಿಸಬೇಕಿದೆ ಎಂಬ ಬಗ್ಗೆಯೂ ವಿವರ ನೀಡಿದೆ.

2,061 ದೂರು ದಾಖಲು

ಪ್ರಸಕ್ತ ವರ್ಷದ ಜನವರಿಯಿಂದ ಅಕ್ಟೋಬರ್ 9ರ ವರೆಗೆ ಓಲಾ ಸೇವೆ ವಿರುದ್ಧ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯಡಿ 2,061 ದೂರುಗಳು ದಾಖಲಾಗಿವೆ.

ದುಬಾರಿ ದರ ವಿಧಿಸ ಲಾಗುತ್ತಿದೆ. ಹಣ ಮರುಪಾವತಿಗೆ ವಿಳಂಬ ಮಾಡಲಾಗುತ್ತಿದೆ. ಚಾಲಕರು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬುದು ಸೇರಿ ಹಲವು ಸಮಸ್ಯೆಗಳ ಬಗ್ಗೆ ಗ್ರಾಹಕರು ದೂರು ಸಲ್ಲಿಸಿದ್ದಾರೆ.

ಹೆಣ್ಣುಮಕ್ಕಳಿಗೆ ಬಾಹ್ಯಾಕಾಶ ತಂತ್ರಜ್ಞಾನ ತರಬೇತಿ

ನವದೆಹಲಿ (ಪಿಟಿಐ): ಏರೋಸ್ಪೇಸ್ ನವೋದ್ಯಮ ಸ್ಪೇಸ್ ಕಿಡ್ಜ್ ಇಂಡಿಯಾವು 'ಶಕ್ತಿಸ್ಯಾಟ್' ಮಿಷನ್‌ನಡಿ 108 ದೇಶಗಳ ಒಟ್ಟು 12 ಸಾವಿರ ಹೆಣ್ಣುಮಕ್ಕಳಿಗೆ ಬಾಹ್ಯಾಕಾಶ ತಂತ್ರಜ್ಞಾನ ಕುರಿತು ತರಬೇತಿ ನೀಡಲು ನಿರ್ಧರಿಸಿದೆ.

ಇಸ್ರೊದ ಚಂದ್ರಯಾನ-4 ಮಿಷನ್ ಭಾಗವಾಗಿ ಅಂತರಿಕ್ಷಕ್ಕೆ ಉಪಗ್ರಹ ಉಡ್ಡಯನ ಮಾಡುವ ಗುರಿ ಹೊಂದಿದೆ. ಆ ಮೂಲಕ ಬಾಹ್ಯಾಕಾಶ ಕ್ಷೇತ್ರದ ಅಭಿವೃದ್ಧಿಯಲ್ಲಿ ಅಂತರರಾಷ್ಟ್ರೀಯ ಸಹಯೋಗವನ್ನು ಬಲಪಡಿಸಲು ತೀರ್ಮಾನಿಸಿದೆ.

ನವೆಂಬರ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 'ಶಕ್ತಿಸ್ಯಾಟ್'ಗೆ ಚಾಲನೆ ನೀಡಲಿದ್ದಾರೆ ಎಂದು ಕಂಪನಿ ತಿಳಿಸಿದೆ.

'ತರಬೇತಿ ಅವಧಿಯು 120 ಗಂಟೆ ಆಗಿದೆ. 14ರಿಂದ 18ರ ವಯೋಮಾನದ ಹೆಣ್ಣುಮಕ್ಕಳಿಗೆ ಬಾಹ್ಯಾಕಾಶ ತಂತ್ರಜ್ಞಾನ, ಪೆಲೋಡ್‌ಗಳ ಅಭಿವೃದ್ಧಿ ಮತ್ತು ಸ್ಪೇಸ್‌ಕ್ರಾಫ್ಟ್ ಸಿಸ್ಟಮ್ಸ್ ಸೇರಿ ವಿವಿಧ ತರಬೇತಿ ನೀಡಲಾಗುವುದು' ಎಂದು ಶಕ್ತಿಸ್ಯಾಟ್ ಮಿಷನ್ ಮುಖ್ಯಸ್ಥೆ ಶ್ರೀಮತಿ ಕೇಸನ್ ಪಿಟಿಐಗೆ ತಿಳಿಸಿದ್ದಾರೆ.

'ಬ್ರಿಟನ್, ಯುಎಇ, ಬ್ರೆಜಿಲ್, ಕೆನ್ಯಾ, ಆಸ್ಟ್ರೇಲಿಯಾ, ಫ್ರಾನ್ಸ್, ಗ್ರೀಸ್, ಶ್ರೀಲಂಕಾ, ಅಫ್ಗಾನಿಸ್ತಾನ ಸೇರಿ ಹಲವು ದೇಶಗಳ ಹೆಣ್ಣುಮಕ್ಕಳು ತರಬೇತಿಯಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದ್ದಾರೆ.

ಉಳಿತಾಯ, ಹೂಡಿಕೆ ಹೇಗಿರಬೇಕು?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

26 ವರ್ಷದ ರೋಹಿತ್ ಎಂಬಿಎ ಪದವಿ ಮುಗಿಸಿ ಹೊಸ ಉದ್ಯೋಗಕ್ಕೆ ಸೇರಿ ಎರಡು ತಿಂಗಳಾಗಿವೆ. ಅವರಿಗೆ ಒಟ್ಟು ₹50 ಸಾವಿರ ಸಂಬಳ. ಎಲ್ಲಾ ಕಡಿತದ ಬಳಿಕ ಕೈಗೆ ₹40 ಸಾವಿರ ಸಿಗುತ್ತಿದೆ. ಇದರಲ್ಲಿ ಅವರು ಊಟ, ವಸತಿ, ಪ್ರಯಾಣ ವೆಚ್ಚ, ಸ್ನೇಹಿತರ ಜೊತೆ ಮನರಂಜನೆಗಾಗಿ ₹35 ಸಾವಿರ ಖರ್ಚು ಮಾಡುತ್ತಿದ್ದಾರೆ.

ಪ್ರತಿ ತಿಂಗಳು ಅವರ ಬಳಿ ಕೇವಲ ₹5 ಸಾವಿರ ಉಳಿಯುತ್ತಿದೆ. ರೋಹಿತ್ ಇಷ್ಟು ಹಣ ಉಳಿಸಿದರೆ ಸಾಕೇ? ಹಾಗಿದ್ದರೆ ಅವರ ಉಳಿತಾಯ ಮತ್ತು ಹೂಡಿಕೆ ಲೆಕ್ಕಾಚಾರ ಹೇಗೆ ಬದಲಾಗಬೇಕು? ಹೂಡಿಕೆ ಹೆಚ್ಚಿಸಿಕೊಳ್ಳಲು ಅವರು ಏನು ಮಾಡ ಬೇಕು? ಹೂಡಿಕೆಗೂ ಮುನ್ನ ಏನೆಲ್ಲಾ ಕ್ರಮ ಕೈಗೊಳ್ಳಬೇಕು? ಬನ್ನಿ ಈ ಲೇಖನದಲ್ಲಿ ₹50 ಸಾವಿರದ ಆಸುಪಾಸು ಸಂಬಳ ಹೊಂದಿರುವವರು ಹೇಗೆ ಉಳಿತಾಯ, ಹೂಡಿಕೆಯ ಆಲೋಚನೆ ಮಾಡಬೇಕು ಎನ್ನುವುದನ್ನು ಹಂತ ಹಂತವಾಗಿ ಕಲಿಯೋಣ.

ಹಣಕಾಸು ನಿರ್ವಹಣೆಯ ಪ್ರಥಮ ಹೆಜ್ಜೆ: ಹಣಕಾಸು ನಿರ್ವಹಣೆಗಾಗಿ ಮಾಡುವ ಬಜೆಟ್‌ನ ಪ್ರಥಮ ಹೆಜ್ಜೆ ಅಂದರೆ ಅದು 50:30:20 ನಿಯಮ. ಬಂದ ಆದಾಯದಲ್ಲಿ ಶೇ 50ರಷ್ಟು ಹಣವನ್ನು ಅಗತ್ಯಗಳಿಗೆ ಖರ್ಚು ಮಾಡಬೇಕು. ಶೇ 30ರಷ್ಟು ದುಡ್ಡನ್ನು ನಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲು ವ್ಯಯಿಸಬೇಕು. ಇನ್ನುಳಿದ ಶೇ 20ರಷ್ಟು ಹಣವನ್ನು ಕಡ್ಡಾಯವಾಗಿ ಉಳಿತಾಯ ಮಾಡಿ ಹೂಡಿಕೆ ಮಾಡಬೇಕು ಎನ್ನುತ್ತದೆ ಈ ನಿಯಮ.

ಈ ಲೆಕ್ಕಾಚಾರದಲ್ಲಿ ರೋಹಿತ್ ತಮ್ಮ ಗಳಿಕೆಯಲ್ಲಿ ₹20 ಸಾವಿರವನ್ನು ಊಟ, ವಸತಿ, ಕಚೇರಿ ಪ್ರಯಾಣದಂತಹ ಅಗತ್ಯಗಳಿಗೆ ಖರ್ಚು ಮಾಡಬಹುದು. ₹12 ಸಾವಿರವನ್ನು ಪ್ರವಾಸ, ಪಾರ್ಟಿ, ಐಷಾರಾಮಿ ವಸ್ತುಗಳ ಖರೀದಿಗೆ ಮೀಸಲಿಡಬಹುದು. ಉಳಿದ ₹8 ಸಾವಿರವನ್ನು ಕಡ್ಡಾಯವಾಗಿ ಉಳಿತಾಯ ಮಾಡಿ ಹೂಡಿಕೆ ಮಾಡಬೇಕು.

ಆದರೆ, ಸದ್ಯ ರೋಹಿತ್ ಕೇವಲ ₹5 ಸಾವಿರ ಉಳಿತಾಯ ಮಾಡುತ್ತಿದ್ದು, ಇದು ತೀರಾ ಕಡಿಮೆ ಮೊತ್ತವಾಗಿದೆ. ಅವರು ತಮ್ಮ ಪ್ರವಾಸ, ಪಾರ್ಟಿ ವೆಚ್ಚದ ಮೇಲೆ ಹಿಡಿತ ಸಾಧಿಸಿ ಉಳಿತಾಯವನ್ನು ಕನಿಷ್ಠ ₹8 ಸಾವಿರಕ್ಕೆ ಹೆಚ್ಚಿಸಿಕೊಳ್ಳಲೇಬೇಕು. 50:30:20 ನಿಯಮದ ಪ್ರಕಾರ ಆದಾಯದ ಶೇ 20ರಷ್ಟು ಮೊತ್ತವನ್ನು ಉಳಿತಾಯ, ಹೂಡಿಕೆಗೆ ಮೀಸಲಿಡಲೇಬೇಕು ಎನ್ನುವುದು ಒಂದು ಮಾನದಂಡ ಅಷ್ಟೆ. ವಾಸ್ತವದಲ್ಲಿ ಆದಾಯ ಹೆಚ್ಚಾದಂತೆ ಉಳಿತಾಯದ ಪ್ರಮಾಣವನ್ನು ಶೇ 30ರಿಂದ ಶೇ 40ರ ವರೆಗೂ ಕೊಂಡೊಯ್ಯಬೇಕು.

ಹಣಕಾಸು ನಿರ್ವಹಣೆಯಲ್ಲಿ ಸುರಕ್ಷತೆ ಅಗತ್ಯ: ವೈಯಕ್ತಿಕ ಹಣಕಾಸು ನಿರ್ವಹಣೆ ಮಾಡುವಾಗ ಬಂದ ಆದಾಯದಲ್ಲಿ ಉಳಿತಾಯ, ಹೂಡಿಕೆ ಮಾಡುವುದಕ್ಕೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಜೀವನದ ಸುರಕ್ಷತೆಗೆ ನೀಡಬೇಕು. ಅಂದರೆ ಜೀವನದ ಅನಿಶ್ಚಿತ ಸಂದರ್ಭಗಳು ಮತ್ತು ಅನಾರೋಗ್ಯದ ಪರಿಸ್ಥಿತಿಯನ್ನು ಎದುರಿಸಲು ಟರ್ಮ್ ಲೈಫ್ ಇನ್ಶೂರೆನ್ಸ್ ಮತ್ತು ಹೆಲ್ತ್ ಇನ್ಶೂರೆನ್ಸ್ ತೆಗೆದುಕೊಳ್ಳಬೇಕು.

ಉದಾಹರಣೆಗೆ ರೋಹಿತ್ ಪ್ರತಿ ತಿಂಗಳು ತಮ್ಮ ಕೈಗೆ ಸಿಗುವ ₹40 ಸಾವಿರ ಸಂಬಳದಲ್ಲಿ ₹8 ಸಾವಿರ ಉಳಿತಾಯ ಮಾಡುತ್ತಾರೆ ಎಂದುಕೊಳ್ಳಿ. ಈ ಪೈಕಿ ₹1,500 ತಂದೆ- ತಾಯಿ ಮತ್ತು ಸ್ವತಃ ಅವರಿಗೆ ಒಳ್ಳೆಯ ಕವರೇಜ್ ಇರುವ ಹೆಲ್ತ್ ಇನ್ಶೂರೆನ್ಸ್ ಪಡೆದುಕೊಳ್ಳಲು ಬಳಸಿಕೊಳ್ಳಬೇಕು. ಟರ್ಮ್ ಲೈಫ್ ಇನ್ಶೂರೆನ್ಸ್ ಖರೀದಿಗೆ ಮಾಸಿಕ ₹500 ಮೀಸಲಿಡಬೇಕು. ನಂತರದಲ್ಲಿ ತುರ್ತು ನಿಧಿ (ಎಮರ್ಜೆನ್ಸಿ ಫಂಡ್) ಸ್ಥಾಪಿಸಿಕೊಳ್ಳಬೇಕು.

ತುರ್ತು ನಿಧಿಯು ನಿತ್ಯದ ಬದುಕಿನಲ್ಲಿ ಎದುರಾಗುವ ಅನಾರೋಗ್ಯ, ತಾತ್ಕಾಲಿಕ ಉದ್ಯೋಗ ನಷ್ಟದಂತಹ ಅನಿರೀಕ್ಷಿತ ಸಂದರ್ಭಗಳನ್ನು ಎದುರಿಸಲು ನೆರವಿಗೆ ಬರುತ್ತದೆ. ಕನಿಷ್ಠ 3ರಿಂದ 6 ತಿಂಗಳ ತುರ್ತು ನಿಧಿಯ ಮೊತ್ತ ರೋಹಿತ್ ಬಳಿ ಇರಬೇಕು. ಅವರ ಮಾಸಿಕ ಅಗತ್ಯ ವೆಚ್ಚಗಳು ಸುಮಾರು ₹20 ಸಾವಿರದಷ್ಟು. ಈ ಅಂದಾಜಿನ ಪ್ರಕಾರ ಕನಿಷ್ಠ ಮೂರು ತಿಂಗಳಿಗೆ ಸಾಕಾಗುವ ತುರ್ತು ನಿಧಿ ಅಂದರೆ ₹60 ಸಾವಿರವನ್ನು ರೋಹಿತ್ ಮೀಸಲಿಟ್ಟುಕೊಳ್ಳ ಬೇಕಾಗುತ್ತದೆ.

ಅಯ್ಯೋ ಇರುವ ₹8 ಸಾವಿರ ಉಳಿತಾಯದಲ್ಲಿ ಒಂದೇ ಬಾರಿಗೆ ₹60 ಸಾವಿರ ಎಲ್ಲಿಂದ ತರುವುದು ಎನ್ನುವ ಪ್ರಶ್ನೆ ನಿಮಗೆ ಎದುರಾಗಬಹುದು. ತುರ್ತು ನಿಧಿಯನ್ನು ಧುತ್ತೆಂದು ಸ್ಥಾಪಿಸಬೇಕಿಲ್ಲ. ಪ್ರತಿ ತಿಂಗಳ ₹8 ಸಾವಿರ ಉಳಿತಾಯದಲ್ಲಿ ಸುಮಾರು ₹2 ಸಾವಿರವನ್ನು ತುರ್ತು ನಿಧಿಗೆ ಮೀಸಲಿಡುತ್ತಾ ಸಾಗಿದರೆ ಎರಡರಿಂದ ಎರಡೂವರೆ ವರ್ಷದಲ್ಲಿ ₹60 ಸಾವಿರ ಮೊತ್ತದ ತುರ್ತು ನಿಧಿ ಸ್ಥಾಪನೆಯಾಗುತ್ತದೆ.

ಇನ್ನುಳಿದ ₹4 ಸಾವಿರವನ್ನು ರೋಹಿತ್ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ರೋಹಿತ್ ವಯಸ್ಸು ಚಿಕ್ಕದಿರುವ ಕಾರಣ ಬೆಲೆ ಏರಿಕೆಯನ್ನು ಮೀರಿ ದೀರ್ಘಾವಧಿಯಲ್ಲಿ ಲಾಭ ಗಳಿಸಿಕೊಳ್ಳುವಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್ ಒಂದು ಒಳ್ಳೆಯ ಆಯ್ಕೆಯಾಗುತ್ತದೆ. ₹4 ಸಾವಿರವನ್ನು ಇಂಡೆಕ್ಸ್ ಮ್ಯೂಚುವಲ್ ಫಂಡ್, ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್, ಫ್ಲೆಕ್ಸಿ ಕ್ಯಾಪ್ ಮತ್ತು ಮಲ್ಟಿ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆಗೆ ಪರಿಗಣಿಸಬಹುದು.

ಮ್ಯೂಚುವಲ್ ಫಂಡ್‌ನಲ್ಲಿ ಶೇ 12ರಷ್ಟು ವಾರ್ಷಿಕ ಲಾಭ ಸಿಕ್ಕರೂ ಪ್ರತಿ ತಿಂಗಳು ₹4 ಸಾವಿರ ಹೂಡಿಕೆ ಮಾಡುತ್ತಾ ಹೋದರೆ 10 ವರ್ಷದಲ್ಲಿ ಹೂಡಿಕೆ ಮೊತ್ತ ಮತ್ತು ಗಳಿಕೆ ಸೇರಿ ಸುಮಾರು ₹10 ಲಕ್ಷ ಮೊತ್ತವು ರೋಹಿತ್ ಬಳಿ ಇರುತ್ತದೆ. ಇನ್ನೊಂದು ವಿಷಯವನ್ನು ಇಲ್ಲಿ ಗಮನಿಸಿಕೊಳ್ಳಿ, ರೋಹಿತ್ ಸಂಬಳ ಮುಂದಿನ 10 ವರ್ಷದಲ್ಲಿ ಇದ್ದಷ್ಟೇ ಇರುವುದಿಲ್ಲ. ವರ್ಷದಿಂದ ವರ್ಷಕ್ಕೆ ಅದು ಕೂಡ ಹೆಚ್ಚುತ್ತಾ ಹೋಗುತ್ತದೆ. ಅದಕ್ಕೆ ಅನುಗುಣವಾಗಿ ಹೂಡಿಕೆ ಮೊತ್ತವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದರೆ ಅವರಿಗೆ 10 ವರ್ಷದಲ್ಲಿ ₹20 ಲಕ್ಷದಿಂದ ₹25 ಲಕ್ಷದ ಮೊತ್ತವನ್ನು ಗಳಿಸಿಕೊಳ್ಳುವುದು ಕಷ್ಟವಾಗುವುದಿಲ್ಲ.

ಅಲ್ಲದೆ, ರೋಹಿತ್ ತನ್ನ ಆಸೆಗಳಿಗೆ ಮಾಡುವ ವೆಚ್ಚವನ್ನು ತಗ್ಗಿಸಿಕೊಂಡರೆ ಇನ್ನೂ ಉಳಿತಾಯ ಹೂಡಿಕೆ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಅಂದರೆ, ಗಳಿಕೆಯಲ್ಲಿ ಉಳಿತಾಯ ಮತ್ತು ಹೂಡಿಕೆಯನ್ನು ಎಷ್ಟು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತೇವೋ ಅಷ್ಟು ಅನುಕೂಲವಾಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಎರಡನೇ ವಾರವೂ ಕುಸಿದ ಷೇರುಪೇಟೆ

ಷೇರು ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. ಅಕ್ಟೋಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಅಲ್ಪ ಮೊತ್ತದ ಇಳಿಕೆ ಕಂಡಿವೆ. 81,381 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.38ರಷ್ಟು ಕುಸಿದಿದೆ. 24,964 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.2ರಷ್ಟು ಇಳಿಕೆಯಾಗಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್ಎಂಸಿಜಿ ಶೇ 2.05, ಲೋಹ ವಲಯ ಶೇ 1.78, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.62, ಎನರ್ಜಿ ಶೇ 1.34, ಅನಿಲ ಮತ್ತು ತೈಲ ಶೇ 1.25, ಬ್ಯಾಂಕ್ ಶೇ 0.56 ಮತ್ತು ಫೈನಾನ್ಸ್ ಶೇ 0.04ರಷ್ಟು ಕುಸಿದಿವೆ.

ನಿಫ್ಟಿ ಫಾರ್ಮಾ ಸೂಚ್ಯಂಕ ಅತಿಹೆಚ್ಚು ಅಂದರೆ ಶೇ 2.11ರಷ್ಟು ಗಳಿಸಿಕೊಂಡಿದೆ. ಆಟೊ ವಲಯ ಶೇ 1.97, ಐಟಿ ವಲಯ ಶೇ 1.01, ರಿಯಲ್ ಎಸ್ಟೇಟ್ ಶೇ 0.85 ಮತ್ತು ಮಾಧ್ಯಮ ವಲಯ ಶೇ 0.3ರಷ್ಟು ಹೆಚ್ಚಳ ಕಂಡಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ವಾರದ ಲೆಕ್ಕಾಚಾರ ನೋಡಿದಾಗ ಟೈಟನ್ ಶೇ 5.14, ಟಾಟಾ ಸ್ಟೀಲ್ ಶೇ 3.63, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 3.55, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 3.53, ನೆಸ್ಲೆ ಇಂಡಿಯಾ ಶೇ 3.24 , ಐಟಿಸಿ ಶೇ 2.98 ಮತ್ತು ಇಂಡಸ್‌ಇಂಡ್ ಬ್ಯಾಂಕ್ ಶೇ 2.97ರಷ್ಟು ಕುಸಿದಿವೆ.

ಟ್ರೆಂಟ್ ಶೇ 11.92, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 4.1, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 3.91, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3.27, ಅಪೋಲೊ ಹಾಸ್ಪಿಟಲ್ಸ್ ಶೇ 3.12, ಏರ್‌ಟೆಲ್ ಶೇ 2.82, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 2.07 ಮತ್ತು ಮಾರುತಿ ಸುಜುಕಿ ಶೇ 1.36ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ರಿಲಯನ್ಸ್, ಬಜಾಜ್ ಆಟೊ, ಇನ್ಫೊಸಿಸ್, ವಿಪ್ರೊ, ನೆಸ್ಲೆ, ಹ್ಯಾವೆಲ್ಸ್, ಪಾಲಿಕ್ಯಾಬ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಕಂಪನಿಗಳ ಫಲಿತಾಂಶದ ಆಧಾರದಲ್ಲಿ ನಿರ್ದಿಷ್ಟ ಷೇರುಗಳ ಬೆಲೆಯಲ್ಲಿ ಏರಿಳಿತ ನಿರೀಕ್ಷಿಸಬಹುದಾಗಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ. ಒಟ್ಟಾರೆಯಾಗಿ ಸದ್ಯದ ಸ್ಥಿತಿಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ಜಿ. ಮಂಜುಳ
ನಿಧನ: 14–10–2022
ಇಂದಿಗೆ ನೀವು ನಮ್ಮನ್ನು ಅಗಲಿ 2 ವರ್ಷವಾದರು, ನಿಮ್ಮ ಧೈಯ, ಧೈರ್ಯದ ನುಡಿಗಳು, ಇಂದಿಗೂ ನೀವು ನಮ್ಮೊಂದಿಗಿರುವಂತೆ ಮಾಡಿವೆ.
ಸದಾ ನಿಮ್ಮ ಸ್ಮರಣೆಯಲ್ಲೇ ಇರುವ
ಮೃತರ ಪತಿ
ಶ್ರೀ ಕೆ. ಜಿ. ಕುಮಾರ ಗೌಡ (ನಿವೃತ್ತ ಇಂಜಿನಿಯರ್)
ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು.
98453 72504

ಪುಣ್ಯಸ್ಮರಣೆ

ಶ್ರೀ ಆರ್. ರಾಮಚಂದ್ರ ರೆಡ್ಡಿ
Engineer, IIA-Bengaluru
ಅಲೆಯಾಗಿ ಬಂದು ನೆಲೆಯಿಲ್ಲದೆ ಹೋಗುವ ಈ ಜೀವನದಲ್ಲಿ ನೆನಪುಗಳು ಮಾತ್ರ ಶಾಶ್ವತ...
ಸುಧಾ ಮತ್ತು ಅನುರಾಗ್

ಚಿರಸ್ಮರಣೆ
ಶ್ರೀ ಬಿ.ಎಚ್. ತಿಮ್ಮಾರೆಡ್ಡಿ
(ಬೆಳ್ಳಂದೂರು)
(ಮುನ್ನೇಕೊಳಾಲು
ದಿ|| ಎಂ.ಎನ್. ಹನುಮರೆಡ್ಡಿರವರ ಮಗ)
ನಿಧನ: 14-10-2013
ನಿಮ್ಮ ನೆನಪು ನಮ್ಮ ಹೃದಯದಲ್ಲಿ ಹಚ್ಚಹಸಿರಾಗಿ ಉಳಿದಿದೆ. ನಿಮ್ಮ ಆದರ್ಶಗಳೇ ನಮಗೆ ಸ್ಫೂರ್ತಿದಾಯಕ, ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ– ಶ್ರೀಮತಿ ಕೋಮಲ, ಮಗ ಪ್ರೇಮಕುಮಾರ್ ಹಾಗೂ ಕುಟುಂಬವರ್ಗ

ತ್ವರಿತವಾಗಿ ರಿಟೇಲ್ ಸಾಲ ನೀಡಿಕೆ: ಐಒಬಿ

ಚೆನ್ನೈ (ಪಿಟಿಐ): ತ್ವರಿತವಾಗಿ ಸಾಲ ನೀಡಿಕೆ ನಿಟ್ಟಿನಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಒಬಿ), ಬೆಂಗಳೂರು ಸೇರಿ ದೇಶದ ಪ್ರಮುಖ ನಗರಗಳಲ್ಲಿ ಚಿಲ್ಲರೆ ಸಾಲ ಪ್ರಕ್ರಿಯೆ ಕೇಂದ್ರಗಳನ್ನು ತೆರೆದಿದೆ.

'ಚೆನ್ನೈನಲ್ಲಿ ಏಳು ಕೇಂದ್ರಗಳನ್ನು ಉದ್ಘಾಟಿಸಲಾಗಿದೆ. ಉಳಿದಂತೆ ಬೆಂಗಳೂರು, ಕೊಯಮತ್ತೂರು, ದೆಹಲಿ, ಹೈದರಾಬಾದ್, ಕೋಲ್ಕತ್ತ, ಲಖನೌ ಮತ್ತು ಮುಂಬೈನಲ್ಲಿ ವರ್ಚುವಲ್ ಆಗಿ ಕೇಂದ್ರಗಳಿಗೆ ಚಾಲನೆ ನೀಡಲಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಜಯ್ ಕುಮಾರ್ ಶ್ರೀವಾಸ್ತವ ತಿಳಿಸಿದ್ದಾರೆ.

'ಗ್ರಾಹಕರ ಅನುಕೂಲಕ್ಕಾಗಿ-ಯಷ್ಟೇ ಈ ಕೇಂದ್ರಗಳನ್ನು ತೆರೆದಿಲ್ಲ. ಬ್ಯಾಂಕಿಂಗ್ ಜಾಲಕ್ಕೆ ಮತ್ತಷ್ಟು ಚೇತರಿಕೆ ನೀಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿವೆ. ಡಿಜಿಟಲ್ ವ್ಯವಸ್ಥೆಗೆ ಒತ್ತು ನೀಡಲಾಗಿದೆ' ಎಂದು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹290-483
ದ್ವಿತಳಿ (ಬಿ.ವಿ)	₹303-648

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹550
12 ಕ್ಕೆ	₹75
ಮೈಸೂರು 100ಕ್ಕೆ	₹555

ಎಫ್‌ಪಿಐ: ₹58,711 ಕೋಟಿ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಅಕ್ಟೋಬರ್ 11ರ ವರೆಗೆ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ₹58,711 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ. ಅಲ್ಲದೆ, ಚೀನಾ ಮಾರುಕಟ್ಟೆಯು ಏರಿಕೆ ಕಂಡಿದೆ. ಇದು ವಿದೇಶಿ ಹೂಡಿಕೆದಾರರು ಬಂಡವಾಳ ಹಿಂಪಡೆಯಲು ಪ್ರಮುಖ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ₹57,724 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಇದು ಒಂಬತ್ತು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

'ಭಾರತೀಯ ರಿಸರ್ವ್ ಬ್ಯಾಂಕ್ ಮುಂಬರುವ ಹಣಕಾಸು ನೀತಿ ಸಮಿತಿ ಸಭೆಗಳಲ್ಲಿ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ. ಜಾಗತಿಕ ಮಟ್ಟದ ವಿದ್ಯಮಾನಗಳತ್ತ ವಿದೇಶಿ ಹೂಡಿಕೆದಾರರು ದೃಷ್ಟಿ ನೆಟ್ಟಿದ್ದಾರೆ. ಇದರ ಆಧಾರದ ಮೇಲೆ ದೇಶದ ಷೇರುಪೇಟೆಯಲ್ಲಿ ಹೂಡಿಕೆ ಮಾಡಲಿದ್ದಾರೆ' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ (ಸಂಶೋಧನಾ ವಿಭಾಗ) ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ಗಾಜಾಪಟ್ಟಿಯ ಉತ್ತರ ಭಾಗದ ಸಂಪೂರ್ಣ ತೆರವಿಗೆ ಇಸ್ರೇಲ್ ಆದೇಶ

ಡೇರ್ ಅಲ್ ಬಾಲಾ (ಗಾಜಾಪಟ್ಟಿ) (ಎಪಿ): ಗಾಜಾಪಟ್ಟಿಯ ಉತ್ತರ ಭಾಗವನ್ನು ಹಾಗೂ ಗಾಜಾ ನಗರವನ್ನು ಸಂಪೂರ್ಣವಾಗಿ ತೆರವು ಮಾಡುವಂತೆ ಇಸ್ರೇಲ್ ಸೇನೆಯು ಪ್ಯಾಲೆಸ್ಟೀನಿಯನ್ನರಿಗೆ ಹೊಸ ಆದೇಶ ಹೊರಡಿಸಿದೆ.

ಈ ಭಾಗದ ಆಸ್ಪತ್ರೆಗಳಲ್ಲಿನ ರೋಗಿಗಳೂ ಸ್ಥಳಾಂತರಗೊಳ್ಳಬೇಕು ಎಂದೂ ಇಸ್ರೇಲ್ ತಿಳಿಸಿದೆ. ಆದರೆ, ಯಾವ ದಿನಾಂಕದಲ್ಲಿ ಪ್ರಕ್ರಿಯೆ ನಡೆಯಬೇಕು ಎಂಬುದನ್ನು ಖಚಿತವಾಗಿ ತಿಳಿಸಿಲ್ಲ. 'ನಮ್ಮನ್ನು ಇಲ್ಲಿಂದ ಓಡಿಸಿ, ತಮ್ಮ ಸೇನಾ ನೆಲೆ ಸ್ಥಾಪಿಸಿ, ಯಹೂದಿಗಳನ್ನು ಇಲ್ಲಿ ನೆಲೆಯೂರಿಸಬೇಕು ಎಂದು ಇಸ್ರೇಲ್ ಬಯಸಿದೆ' ಎಂದು ಪ್ಯಾಲೆಸ್ಟೀನಿಯರು ಆತಂಕ ವ್ಯಕ್ತಪಡಿಸಿದ್ದಾರೆ.

ಯುದ್ಧ ಆರಂಭವಾದ ಕೆಲ ದಿನಗಳ ಬಳಿಕ, ಇಸ್ರೇಲ್ ಸೇನೆಯು ಗಾಜಾಪಟ್ಟಿಯ ಉತ್ತರ ಭಾಗದಲ್ಲಿದ್ದ ಜನರನ್ನು ತೆರವು ಮಾಡಿಸಿತ್ತು. ಒಂದು ವರ್ಷ ಸತತ ದಾಳಿಯ ಬಳಿಕವೂ ಈ ಭಾಗದಲ್ಲಿ 4 ಲಕ್ಷ ಪ್ಯಾಲೆಸ್ಟೀನಿಯರು ಉಳಿದುಕೊಂಡಿದ್ದರು. ಗಾಜಾಪಟ್ಟಿಯ ಕೇಂದ್ರ ಭಾಗದ ಮೇಲೆ ಇಸ್ರೇಲ್ ವಾಯುದಾಳಿ ಮುಂದುವರಿಸಿದ್ದು, ಒಂದೇ ಕುಟುಂಬದ ಎಂಟು ಮಂದಿ ಮೃತಪಟ್ಟಿದ್ದಾರೆ.

ಚಿಕಿತ್ಸೆಗೂ ಜಾಮೀನು ನೀಡಲಿಲ್ಲ: ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ
'ಜೈಲು ಯಾತನೆಯೇ ಸಾವಿಗೆ ಕಾರಣ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ ಹೈದರಾಬಾದ್: 'ಘೋರ ಅಪರಾಧ ಕೃತ್ಯಗಳನ್ನು ಎಸಗಿದವರನ್ನು ಇರಿಸುವ ಕತ್ತಲ ಕೋಣೆ ಜೈಲುವಾಸದಲ್ಲಿ ಇರಿಸಿ, ಚಿಕಿತ್ಸೆಗೂ ಅನುಮತಿ ನೀಡದಿರುವುದು ಪ್ರೊ. ಜಿ.ಎನ್. ಸಾಯಿಬಾಬಾ ಅವರ ಆರೋಗ್ಯ ತೀವ್ರವಾಗಿ ಹದಗೆಡಲು ಕಾರಣ. ಜೈಲಿನಿಂದ ಬಿಡುಗಡೆಯಾಗುವ ಹೊತ್ತಿಗೆ ಅವರ ದೇಹ ಸಂಪೂರ್ಣವಾಗಿ ಬಳಲಿತ್ತು' ಎಂದು ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ (ಎನ್‌ಪಿಆರ್‌ಡಿ) ಭಾನುವಾರ ಆರೋಪಿಸಿದೆ.

ಸಾಯಿಬಾಬಾ

ಮಾನವಹಕ್ಕುಗಳ ಹೋರಾಟಗಾರ ಸಾಯಿಬಾಬಾ ಅವರನ್ನು ನಕ್ಸಲರೊಂದಿಗೆ ಸಂಪರ್ಕ ಹೊಂದಿದ್ದಾರೆ ಎನ್ನುವ ಆರೋಪ ಹೊರಿಸಿ, 'ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಮಹಾರಾಷ್ಟ್ರ ಪೊಲೀಸರು 2014ರಲ್ಲಿ ಬಂಧಿಸಿದ್ದರು. 10 ವರ್ಷಗಳಿಂದ ಜೈಲುವಾಸದಲ್ಲಿದ್ದ ಸಾಯಿಬಾಬಾ ಅವರನ್ನು ಸಾಕ್ಷ್ಯಗಳ ಕೊರತೆಯ ಕಾರಣ 2024ರ ಮಾರ್ಚ್‌ನಲ್ಲಿ ಬಾಂಬೆ ಹೈಕೋರ್ಟ್ ಖುಲಾಸೆಗೊಳಿಸಿತ್ತು.

ಸಾಯಿಬಾಬಾ ಅವರ ಸಾವಿನ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ವೇದಿಕೆ, 'ಸುಳ್ಳು ಪ್ರಕರಣವೊಂದರಲ್ಲಿ ಸಾಯಿಬಾಬಾ ಅವರನ್ನು ಜೈಲಿಗೆ ಹಾಕಲಾಗಿತ್ತು. ಬಂಧನಕ್ಕೂ ಮೊದಲೇ ಅವರಿಗೆ ಹಲವು ವಿಧವಾದ ಆರೋಗ್ಯ ಸಮಸ್ಯೆಗಳಿದ್ದವು. ಜೈಲುವಾಸದ ಬಳಿಕ, ಅವರಿಗೆ ಹೊಸ ಹೊಸ ಆರೋಗ್ಯ ಸಮಸ್ಯೆಗಳು ಹುಟ್ಟಿಕೊಂಡವು' ಎಂದಿದೆ.

'ಸಾಯಿಬಾಬಾ ಅವರನ್ನು ಬಂಧಿಸಿದ ವೇಳೆ ಅವರ ಒಂದು ಭುಜಕ್ಕೆ ಬಿದ್ದ ತೀವ್ರ ಹೊಡೆತದ ಕಾರಣ, ಅವರ ಕೈ ನಿಷ್ಕ್ರಿಯಗೊಂಡಿತ್ತು. 2017ರಲ್ಲಿ ಅವರನ್ನು ದೆಹಲಿಯ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಈ ವೇಳೆಯೇ ಅವರ ಪಿತ್ತಕೋಶದಲ್ಲಿ ಕಲ್ಲುಗಳಿವೆ ಎಂದು ಪತ್ತೆಯಾಗಿತ್ತು. ತಕ್ಷಣವೇ ಚಿಕಿತ್ಸೆಯಾಗಬೇಕು ಎಂದು ವೈದ್ಯರು ತಿಳಿಸಿದ್ದರು. ಆದರೆ, ಅವರಿಗೆ ಚಿಕಿತ್ಸೆಗಾಗಿಯೂ ಜಾಮೀನು ಅಥವಾ ಪೆರೋಲ್ ಅನ್ನು ನಿರಾಕರಿಸಲಾಯಿತು' ಎಂದು ದೂರಿದೆ.

ಪಿತ್ತಕೋಶದಲ್ಲಿನ ಕಲ್ಲುಗಳ ಚಿಕಿತ್ಸೆ ಬಳಿಕ ಕಾಣಿಸಿಕೊಂಡ ಸಮಸ್ಯೆಗಳಿಂದಾಗಿಯೇ ಸಾಯಿಬಾಬ ಅವರು ಶನಿವಾರ ರಾತ್ರಿ ನಿಧನರಾದರು.

ದೇಹ ದಾನ

ಸಾಯಿಬಾಬಾ ಅವರ ಆಸೆಯಂತೆಯೇ ಅವರ ದೇಹವನ್ನು ಗಾಂಧಿ ವೈದ್ಯಕೀಯ ಕಾಲೇಜಿಗೆ ಅಕ್ಟೋಬರ್ 14ರಂದು ದಾನ ಮಾಡಲಾಗುವುದು ಎಂದು ಅವರ ಕುಟುಂಬದವರು ಮಾಹಿತಿ ನೀಡಿದ್ದಾರೆ. ಹೈದರಾಬಾದ್ ನಲ್ಲಿರುವ 'ಎಲ್.ವಿ. ಪ್ರಸಾದ್ ಐ ಇನ್‌ಸ್ಟಿಟ್ಯೂಟ್'ಗೆ ಅವರ ಕಣ್ಣುಗಳನ್ನು ಈಗಾಗಲೇ ದಾನ ಮಾಡಲಾಗಿದೆ.

ಅವರಿಗೆ ಎರಡು ಸಲ ಕೋವಿಡ್ ತಗುಲಿತ್ತು. ಜೈಲುವಾಸದ ವೇಳೆ ಅವರ ಆರೋಗ್ಯವು ಸಂಪೂರ್ಣವಾಗಿ ಹದಗೆಟ್ಟಿತು. ಮತ್ತೊಂದು ಚಮತ್ಕಾರ ನಡೆಯುತ್ತದೆ ಎಂದುಕೊಂಡಿದ್ದೆವು. ಆದರೆ, ಅದು ನಡೆಯಲಿಲ್ಲ

ಮಂಜೀರಾ, ಸಾಯಿಬಾಬಾ ಅವರ ಪುತ್ರಿ

ವೇದಿಕೆ ಹೇಳಿದ್ದು...

- ಜೀವಿಸುವ ಹಕ್ಕು, ಗೌರವ, ಸಮಾನತೆಯ ಹಕ್ಕು, ಹಿಂಸೆಯಿಂದ ರಕ್ಷಣೆ, ಕ್ರೌರ್ಯ, ಅಮಾನವೀಯ ಹಾಗೂ ಅಗೌರವದಿಂದ ಕೂಡಿದ ವರ್ತನೆಯಿಂದ ರಕ್ಷಣೆ, ಸೂಕ್ತ ವಸತಿಯ ಹಕ್ಕು ಹಾಗೂ ಆರೋಗ್ಯದ ಹಕ್ಕನ್ನು ಸಾಯಿಬಾಬಾ ಅವರಿಂದ ಕಿತ್ತುಕೊಳ್ಳಲಾಗಿತ್ತು
- ಅಂಗವಿಕಲರನ್ನು ಜೈಲುಗಳಲ್ಲಿ ಹೇಗೆ ನಡೆಸಿಕೊಳ್ಳಬೇಕು ಎಂಬುದರ ಕುರಿತು ವಿಶೇಷ ಕಾನೂನುಗಳಿವೆ. ಭಾರತದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಇಂಥ ಕಾನೂನು, ಒಪ್ಪಂದಗಳಿವೆ. ವಿಶ್ವಸಂಸ್ಥೆಯ ಇಂಥ ಒಪ್ಪಂದಗಳಿಗೆ ಭಾರತವೂ ಸಹಿ ಹಾಕಿದೆ. ಆದರೂ, ಸಾಯಿಬಾಬಾ ಅವರ ವಿಚಾರದಲ್ಲಿ ಈ ಎಲ್ಲ ಕಾನೂನುಗಳನ್ನು ಉಲ್ಲಂಘಿಸಲಾಗಿದೆ

ಕೊಲೆಗಡುಕರು, ಅತ್ಯಾಚಾರಿಗಳಿಗೂ ಜಾಮೀನು ಅಥವಾ ಪೆರೋಲ್ ನೀಡಲಾಗುತ್ತದೆ. ಆದರೆ, ಸಾಯಿಬಾಬಾ ಅವರಿಗೆ ಇವುಗಳನ್ನು ನಿರಾಕರಿಸಲಾಯಿತು. ಇದು ಅಪರಾಧ ನ್ಯಾಯದಾನ ವ್ಯವಸ್ಥೆಯ ವಸ್ತುಸ್ಥಿತಿ. ಸಾಯಿಬಾಬಾ ಅವರ ಸಾವು, ಸ್ಟ್ಯಾನ್ ಸ್ವಾಮಿ ಅವರ ಸಾವನ್ನು ನೆನಪಿಸುವಂತೆ ಮಾಡಿದೆ

ಮುರಳೀಧರನ್, ಪ್ರಧಾನ ಕಾರ್ಯದರ್ಶಿ, ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ

'ಶಬರಿಮಲೆ: ಸ್ಪಾಟ್ ಬುಕಿಂಗ್ ಇಲ್ಲ'

ತಿರುವನಂತಪುರ (ಪಿಟಿಐ): ಶಬರಿಮಲೆಯಲ್ಲಿ ಇನ್ನು 'ಸ್ಪಾಟ್ ಬುಕಿಂಗ್' ಇರುವುದಿಲ್ಲ ಎಂದು ಕೇರಳ ಮುಜರಾಯಿ ಸಚಿವ ವಿ.ಎನ್. ವಾಸವನ್ ಭಾನುವಾರ ಸ್ಪಷ್ಟಪಡಿಸಿದ್ದಾರೆ. ಆದರೆ, ಸ್ಪಾಟ್ ಬುಕಿಂಗ್ ಇಲ್ಲದಿದ್ದರೂ ಇಲ್ಲಿಗೆ ಬರುವ ಯಾವುದೇ ಭಕ್ತ ದರ್ಶನದಿಂದ ವಂಚಿತನಾಗುವುದಿಲ್ಲ ಎಂದು ಅಭಯ ನೀಡಿದ್ದಾರೆ.

ದರ್ಶನಕ್ಕೆ ಇರುವ ಸ್ಪಾಟ್ ಬುಕಿಂಗ್ ರದ್ದು ಮಾಡಿ ವರ್ಚುವಲ್ ಕ್ಯೂ (ಆನ್‌ಲೈನ್ ಬುಕಿಂಗ್) ಮೂಲಕ ಮಾತ್ರ ದರ್ಶನಕ್ಕೆ ಅವಕಾಶ ಮಾಡಿಕೊಡಲು ಸರ್ಕಾರ ಯೋಜನೆ ಹಾಕಿಕೊಂಡಿತ್ತು. ಇದಕ್ಕೆ ವಿರೋಧ ವ್ಯಕ್ತವಾಗಿತ್ತು.

ಇದೀಗ ಸ್ಪಾಟ್ ಬುಕಿಂಗ್ ಮುಂದುವರಿಸದಿದ್ದರೂ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲು ಅಕ್ಷಯ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಸರ್ಕಾರ ತಿಳಿಸಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಸಚಿವ ವಾಸವನ್ ಅವರು ಸ್ಪಾಟ್ ಬುಕಿಂಗ್ ಮುಂದುವರಿಸುವುದಿಲ್ಲ. ಆದರೂ ಭಕ್ತರ ದರ್ಶನಕ್ಕೆ 'ಬುಕಿಂಗ್ ಸ್ಲಾಟ್ಸ್' ಪಡೆಯಲು ಅಕ್ಷಯ ಕೇಂದ್ರಗಳನ್ನು ಸ್ಥಾಪಿಸ ಲಾಗುವುದು. 'ಇಡತ್ತಾವಳಂ' (ದೇವಸ್ಥಾನದ ಮಾರ್ಗದಲ್ಲಿ ಇರುವ ವಿಶ್ರಾಂತಿ ಅಥವಾ ನಿರೀಕ್ಷಣಾ ಪ್ರದೇಶ) ಎಂಬಲ್ಲಿ ಅಕ್ಷಯ ಕೇಂದ್ರಗಳನ್ನು ಸ್ಥಾಪಿಸಿ, ಭಕ್ತರಿಗೆ ಬುಕ್ಕಿಂಗ್ ಸ್ಲಾಟ್ಸ್ ಪಡೆಯಲು ಅನುಕೂಲ ಮಾಡಿ-ಕೊಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಅಕ್ಷಯ ಕೇಂದ್ರಗಳು ಸಾಮಾನ್ಯ ಸೇವಾ ಕೇಂ-ದ್ರಗಳಾಗಿದ್ದು (ಸಿಎಸ್‌ಸಿ) ಒಂದೇ ಸೂರಿನಡಿ ಸರ್ಕಾರದ ಸೇವೆ ನೀಡುವ ಸೌಲಭ್ಯವಾಗಿದೆ. ಭಕ್ತರ ಸುರಕ್ಷತೆಗಾಗಿ ಯಾತ್ರಿಕರ ಸಂಖ್ಯೆಯನ್ನು ದಿನಕ್ಕೆ 80,000ಕ್ಕೆ ನಿಗದಿಪಡಿಸ ಲಾಗಿದೆ ಎಂದೂ ಸಚಿವರು ತಿಳಿಸಿದ್ದಾರೆ.

ನಾಲ್ಕು ವರ್ಷಗಳಲ್ಲಿ ಸಲ್ಲಿಕೆಯಾಗಿರುವ ದೂರುಗಳು
ಎನ್‌ಸಿಎಸ್‌ಸಿ: 47 ಸಾವಿರ ದೂರು

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗಕ್ಕೆ (ಎನ್‌ಸಿಎಸ್‌ಸಿ) ನಾಲ್ಕು ವರ್ಷಗಳಲ್ಲಿ 47,000ಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿವೆ. ಈ ದೂರು ಗಳು ಹೆಚ್ಚಾಗಿ ಪರಿಶಿಷ್ಟರ ಮೇಲಿನ ದೌರ್ಜನ್ಯ, ಭೂವಿವಾದ ಹಾಗೂ ಸರ್ಕಾರಿ ಉದ್ಯೋಗಗಳ ಸಮಸ್ಯೆಗಳಿಗೆ ಸಂಬಂಧಿಸಿ ದ್ದಾಗಿವೆ.

ಮಾಹಿತಿ ಹಕ್ಕು ಕಾಯ್ದೆಯ ಡಿಪಿಟಿಐ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯಿಸಿರುವ ಆಯೋಗವು, ಮಾಹಿತಿ ಹಂಚಿಕೊಂಡಿದೆ. 2020–21ರ ಸಾಲಿನಲ್ಲಿ 11,917, 2021–22ರಲ್ಲಿ 13,964, 2022–23ರಲ್ಲಿ 12,402 ಮತ್ತು 2024ರಲ್ಲಿ ಈವರೆಗೆ 9,550 ದೂರುಗಳನ್ನು ಸ್ವೀಕರಿಸಲಾಗಿದೆ.

ಈ ಮಾಹಿತಿಯ ಬಗ್ಗೆ ಪ್ರತಿಕ್ರಿಯಿಸಿದ ಆಯೋಗದ ಮುಖ್ಯಸ್ಥ ಕಿಶೋರ್ ಮಖ್ವಾನ ಅವರು, 'ದೂರುಗಳನ್ನು ತ್ವರಿತವಾಗಿ ಪರಿಹರಿಸುವುದಕ್ಕಾಗಿ ಮುಂದಿನ ತಿಂಗಳಿಂದ ನಾನು ಅಥವಾ ನನ್ನ ಸದಸ್ಯರು ರಾಜ್ಯ ಕಚೇರಿಗಳಿಗೆ ಭೇಟಿ ನೀಡಿ, ಪರಿಶೀಲಿಸುತ್ತೇವೆ' ಎಂದು ತಿಳಿಸಿದರು. ಪ್ರತಿ ವಾರ ನಾಲ್ಕು ಬಾರಿ ಜನರ ಸಮಸ್ಯೆ ಆಲಿಸುತ್ತಿರುವುದಾಗಿಯೂ ಅವರು ಹೇಳಿದರು.

ಉತ್ತರ ಪ್ರದೇಶದಿಂದ ದೇಶದಲ್ಲೇ ಹೆಚ್ಚು ದೂರುಗಳು ದಾಖಲಾಗಿವೆ. ಆಯೋಗವು ನಿತ್ಯ 200-300 ದೂರುಗಳನ್ನು ಸ್ವೀಕರಿಸುತ್ತಿದೆ ಎಂದು ಆಯೋಗದ ಹಿರಿಯ ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಜನರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಇರುವ ಸಹಾಯವಾಣಿಯ ಅಂಕಿ-ಅಂಶದ ಪ್ರಕಾರ 6,02,177 ಕರೆಗಳು ಸ್ವೀಕಾರವಾಗಿವೆ. ಒಟ್ಟು ದೂರುಗಳ ಸಂಖ್ಯೆ 5,843 ಆಗಿದ್ದು, 1,784 ದೂರುಗಳನ್ನು ಪರಿಹರಿಸಲಾಗಿದೆ. ಅರ್ಧದಷ್ಟು ಕರೆಗಳು (3,10,623) ಉತ್ತರ ಪ್ರದೇಶದಿಂದ ಬಂದಿವೆ. ಈ ಸಹಾಯವಾಣಿಯು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿದೆ.

13 ರಾಜ್ಯಗಳಲ್ಲಿ ಹೆಚ್ಚು ಪ್ರಕರಣ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ ಅಡಿ ಸರ್ಕಾರದ ಇತ್ತೀಚಿನ ಮಾಹಿತಿ ಪ್ರಕಾರ ಪರಿಶಿಷ್ಟ ಜಾತಿಯವರ ಮೇಲಿನ ದೌರ್ಜನ್ಯ ಪ್ರಕರಣಗಳು 13 ರಾಜ್ಯಗಳಲ್ಲಿ ಕೇಂದ್ರೀಕೃತವಾಗಿವೆ. 2022ರ ವರದಿಯಂತೆ ಈ ರಾಜ್ಯಗಳ ಪಾಲು ಶೇ 97.7.

ಕಾಯ್ದೆಯಡಿ 2022ರಲ್ಲಿ 51,656 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 12,287 ಪ್ರಕರಣಗಳು ಅಂದರೆ ಶೇ 23.78ರಷ್ಟು ಉತ್ತರ ಪ್ರದೇಶದ್ದೇ ಆಗಿವೆ. ನಂತರದ ಸ್ಥಾನದಲ್ಲಿ ರಾಜಸ್ಥಾನವಿದ್ದು ಅಲ್ಲಿ 8,651 ಪ್ರಕರಣಗಳು (ಶೇ 16.75) ಮತ್ತು ಮಧ್ಯ ಪ್ರದೇಶದಿಂದ 7,732 (ಶೇ 14.97) ಪ್ರಕರಣಗಳು ದಾಖಲಾಗಿವೆ. ಬಿಹಾರ 6,799 (ಶೇ 13.16), ಒಡಿಶಾ 3,576 (ಶೇ 6.93) ಮತ್ತು ಮಹಾರಾಷ್ಟ್ರದಿಂದ 2,706 (ಶೇ 5.24) ಪ್ರಕರಣಗಳು ದಾಖಲಾಗಿವೆ. ಒಟ್ಟು ಪ್ರಕರಣಗಳಲ್ಲಿ ಈ ಆರು ರಾಜ್ಯಗಳ ಪಾಲು ಶೇ 81 ಆಗಿದೆ.

ಶ್ರೀಲಂಕಾ: ಪ್ರಮುಖ ಪ್ರಕರಣಗಳ ಮರುತನಿಖೆ–ಆದೇಶ

ಕೊಲಂಬೊ (ಪಿಟಿಐ): 2019ರ ಈಸ್ಟರ್ ಭಾನುವಾರ ದಿನದ ಭಯೋತ್ಪಾದಕ ದಾಳಿ, 2005ರಲ್ಲಿ ನಡೆದಿದ್ದ ತಮಿಳು ಪತ್ರಕರ್ತನ ಹತ್ಯೆ ಸೇರಿದಂತೆ ಪ್ರಮುಖ ಪ್ರಕರಣಗಳ ಮರುತನಿಖೆ ನಡೆಸುವಂತೆ ಶ್ರೀಲಂಕಾದ ನೂತನ ಸರ್ಕಾರ ಆದೇಶಿಸಿದೆ.

'ಕೆಲ ಪ್ರಮುಖ ಪ್ರಕರಣಗಳು ಇತ್ಯರ್ಥವಾಗದೇ ಇರುವುದಕ್ಕೆ ಎದುರಾಗಿರುವ ತೊಡಕುಗಳನ್ನು ಪತ್ತೆ ಹಚ್ಚಲು ಸಾರ್ವಜನಿಕ ಭದ್ರತಾ ಸಚಿವಾಲಯ ಮುಂದಾಗಿದೆ. ಪ್ರಕರಣಗಳ ಮರುತನಿಖೆ ಮಾಡು ವಂತೆ ಪೊಲೀಸ್ ಇಲಾಖೆಯ ಮುಖ್ಯಸ್ಥರಿಗೆ ಆದೇಶಿಸಿದೆ' ಎಂದು ಪೊಲೀಸ್ ವಕ್ತಾರರೊಬ್ಬರು ಶನಿವಾರ ತಿಳಿಸಿದ್ದಾರೆ.

2015ರಲ್ಲಿ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಆಡಳಿತಾವಧಿಯಲ್ಲಿ ಸೆಂಟ್ರಲ್ ಬ್ಯಾಂಕ್ ಬಾಂಡ್ ವಿತರಣೆಯಲ್ಲಿ ನಡೆದಿದೆ ಎನ್ನಲಾದ ಹಗರಣದ ಮರುತನಿಖೆಯೂ ನಡೆಯಲಿದೆ.

ನಿವೇಶನ ವಾಪಸ್‌ಗೆ ಮುಂದಾದ ರಾಹುಲ್

ಒಂದನೇ ಪುಟದಿಂದ...

'ಹಂಚಿಕೆಯಾದ ನಿವೇಶನ ವಾಪಸ್ ಪಡೆದುಕೊಳ್ಳಿ' ಎಂದು ರಾಹುಲ್ ಖರ್ಗೆ ಅವರು ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಹಣಾಧಿ-ಕಾರಿಗೆ ಸೆಪ್ಟೆಂಬರ್ 20ರಂದು ಪತ್ರ ಬರೆದಿದ್ದಾರೆ. ಅದು ಈಗ ಬಹಿರಂಗವಾಗಿದೆ.

ವಿವಾದದ ಸ್ವರೂಪ: ನಿವೇಶನ ಹಂಚಿಕೆಯ ವಿಷಯ ಹೊರಬಂದಾಗ, ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯಾ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಈ ಬಗ್ಗೆ ಪ್ರಶ್ನೆ ಎತ್ತಿದ್ದರು. 'ಪ್ರಿಯಾಂಕ್ ಖರ್ಗೆ ಅವರು ತಮ್ಮ ಪ್ರಭಾವ ಬಳಸಿ, ಅಣ್ಣನಿಗೆ ಸಿ.ಎ ನಿವೇಶನ ಮಂಜೂರು ಮಾಡಿಸಿಕೊಂಡಿದ್ದಾರೆ' ಎಂದು ಆರೋಪಿಸಿದ್ದರು. ಈ ಸಂಬಂಧ ತನಿಖೆ ನಡೆಸುವಂತೆ ಕೋರಿ, ರಾಜ್ಯಪಾಲರಿಗೆ ದೂರು ನೀಡಿದ್ದರು.

'ಈ ಬಗ್ಗೆ ವಿವರಣೆ ನೀಡಿ' ಎಂದು ಗೆಹಲೋತ್ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ರಾಜ್ಯ ಬಿಜೆಪಿ ನಾಯಕರು, ಈ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರು ಸ್ಪಷ್ಟನೆ ನೀಡಬೇಕು ಎಂದು ಆಗ್ರ-ಹಿಸಿದ್ದರು.

'ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರ ಆರಂಭಿಸಲು ನಿವೇಶನ ನೀಡುವಂತೆ ಕೋರಿದ್ದೆವು. ಅನಗತ್ಯ ವಿವಾದ, ಇಲ್ಲ ಸಲ್ಲದ ಆರೋಪಗಳಿಂದಾಗಿ ತರಬೇತಿ ಕೇಂದ್ರ ಆರಂಭಿಸುವ ಮೂಲ ಉದ್ದೇಶಕ್ಕೆ ಗಮನ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಿವೇಶನ ವಾಪಸ್ ಮಾಡುತ್ತಿದ್ದೇವೆ. ವಾಪಸಾತಿ ಪ್ರಕ್ರಿಯೆಯ ಮುಂದಿನ ಹಂತಗಳನ್ನು ನಡೆಸುವ ಬಗ್ಗೆ ಮಾಹಿತಿ ನೀಡಿ' ಎಂದು ರಾಹುಲ್ ಖರ್ಗೆ ಅವರು ಪತ್ರದಲ್ಲಿ ಕೋರಿದ್ದಾರೆ.

ನಿವೇಶನ ವಾಪಸಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬ ಮಾಹಿತಿ ಇನ್ನಷ್ಟೇ ಗೊತ್ತಾಗಬೇಕಿದೆ.

'ಸತ್ಯಕ್ಕೆ ಜಯ ಸಿಕ್ಕಿದೆ'

'ಅಂತೂ ಸತ್ಯಕ್ಕೆ ಜಯ ಸಿಕ್ಕಿದೆ. ನಾನು ಈ ಹಿಂದೆ ಹೇಳಿದ್ದು ನಿಜ ಎಂಬುದು ಸಾಬೀತಾಗಿದೆ' ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯಾ ಹೇಳಿದ್ದಾರೆ.

ಸಿದ್ಧಾರ್ಥ ವಿಹಾರ ಟ್ರಸ್ಟ್ 5 ಎಕರೆ ನಿವೇಶನ ವಾಪಸ್ ಮಾಡುವ ಬಗ್ಗೆ ಪತ್ರ ಬರೆದ ಬಗ್ಗೆ ಲಹರ್ ಸಿಂಗ್ ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಕೆಐಎಡಿಬಿಯಲ್ಲಿ ಅಕ್ರಮವಾಗಿ ಮಂಜೂರು ಮಾಡಿದ್ದ 5 ಎಕರೆ ಜಮೀನನ್ನು ಖರ್ಗೆ ಕುಟುಂಬ ಹಿಂದಿರುಗಿಸಿದೆ. ಅಂದು ನಾನು ಈ ವಿಷಯವನ್ನು ಪ್ರಸ್ತಾಪಿಸಿದಾಗ ಜ್ಯೂನಿಯರ್ ಖರ್ಗೆ ಮತ್ತು ಅವರ ಆಪ್ತರಿಂದ ನನಗೆ ಬೆದರಿಕೆ ಬಂದಿದ್ದವು' ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರೆಂಟಲ್ ಪ್ರಾಪರ್ಟೀಸ್

Accommodation Wanted

Flat

2BHK FLAT required in Malleshwaram with lift. No Agents/Brokers. Please Owners Contact: 8971676030

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಆಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಆಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಎಚ್ಐಎಲ್ ಹರಾಜು ಪ್ರಕ್ರಿಯೆ: ಅತಿ ಹೆಚ್ಚು ಮೌಲ್ಯ ಪಡೆದ ಭಾರತ ತಂಡದ ನಾಯಕ

ಹರ್ಮನ್‌ಪ್ರೀತ್ ಸಿಂಗ್‌ಗೆ ₹ 78 ಲಕ್ಷ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಭಾನುವಾರ ನಡೆದ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ಹರಾಜು ಪ್ರಕ್ರಿಯೆಯಲ್ಲಿ ₹ 78 ಲಕ್ಷಕ್ಕೆ ಸೂರ್ಮಾ ಹಾಕಿ ಕ್ಲಬ್ ಖರೀದಿಸಿತು. ಇದರೊಂದಿಗೆ ಹರ್ಮನ್ ಅವರು ಮೊದಲ ದಿನದ ಬಿಡ್ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರನಾದರು.

ಭಾರತ ತಂಡದ ಆಟಗಾರರನ್ನು ತಮ್ಮತೆಕ್ಕೆಗೆ ಎಳೆದುಕೊಳ್ಳಲು ಎಂಟು ಫ್ರಾಂಚೈಸಿಗಳೂ ಅಪಾರ ಪೈಪೋಟಿ ನಡೆಸಿದವು. ಅಲ್ಲದೇ ಬಹಳಷ್ಟು ಹಣವನ್ನೂ ವಿನಿಯೋಗಿಸಿದವು. ಅಭಿಷೇಕ್ ಅವರನ್ನು ₹ 72 ಲಕ್ಷಕ್ಕೆ ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡವು ಖರೀದಿಸಿತು. ಅವರು ಹೆಚ್ಚು ಮೌಲ್ಯ ಗಳಿಸಿದ ಎರಡನೇ ಆಟಗಾರನಾದರು. ಯುಪಿ ರುದ್ರಾಸ್ ತಂಡವು ಹಾರ್ದಿಕ್ ಸಿಂಗ್ (₹70 ಲಕ್ಷ) ಅವರನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಪ್ರಮುಖ ಆಟಗಾರರಾದ ಅಮಿತ್ ರೋಹಿದಾಸ್ (₹ 48 ಲಕ್ಷ) ಅವರನ್ನು ತಮಿಳುನಾಡು ಡ್ರ್ಯಾಗನ್ಸ್, ಜುಗರಾಜ್ ಸಿಂಗ್ (₹ 48 ಲಕ್ಷ) ಅವರನ್ನು ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡಗಳು ಖರೀದಿಸಿದವು. ಹೈದರಾಬಾದ್ ತೂಫಾನ್ಸ್ ತಂಡವು ಸುಮಿತ್ (₹ 46 ಲಕ್ಷ) ಅವರನ್ನು ಸೇರ್ಪಡೆ ಮಾಡಿಕೊಂಡಿತು. ವಿದೇಶಿ ಗೋಲ್‌ಕೀಪರ್ಸ್ ವಿಭಾಗದಲ್ಲಿ, ಐರ್ಲೆಂಡ್‌ನ ಡೇವಿಡ್ ಹಾರ್ಟೆ ₹ 32 ಲಕ್ಷ ಮೌಲ್ಯ ಪಡೆದು ತಮಿಳುನಾಡು ಡ್ರ್ಯಾಗನ್ಸ್ ಸೇರಿದರು. ಜರ್ಮನಿಯ ಜೀನ್ ಪಾಲ್ ಡೆನ್‌ಬರ್ಗ್ (₹ 27 ಲಕ್ಷ) ಹೈದರಾಬಾದ್ ತೂಫಾನ್ಸ್ ತಂಡಕ್ಕೆ, ನೆದರ್ಲೆಂಡ್ಸ್‌ನ ಪಿರ್ಮಿನ್ ಬ್ಲಾಕ್ (₹ 25 ಲಕ್ಷ) ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡಕ್ಕೆ ಮತ್ತು ಬೆಲ್ಜಿಯಂನ ವಿನ್ಸೆಂಟ್ ವನಾಶ್ (₹ 23 ಲಕ್ಷ) ಅವರನ್ನು ಸೂರ್ಮಾ ಹಾಕಿ ಕ್ಲಬ್ ಖರೀದಿಸಿದವು.

ಭಾರತೀಯ ಗೋಲ್‌ಕೀಪರ್ಸ್ ವಿಭಾಗದಲ್ಲಿ ಸೂರಜ್ ಕರ್ಕೆರಾ (₹ 22 ಲಕ್ಷ) ಮತ್ತು ಪವನ್ (₹ 15 ಲಕ್ಷ) ಅವರನ್ನು ಕ್ರಮವಾಗಿ ಗೊನಾಶಿಕಾ ತಂಡ ಮತ್ತು ಡೆಲ್ಲಿ ಎಸ್‌ಜಿ ಪೈಪರ್ಸ್ ತಂಡಗಳು ತಮ್ಮದಾಗಿಸಿಕೊಂಡವು.

ಹರ್ಮನ್‌ಪ್ರೀತ್ ಸಿಂಗ್

ಮುಖ್ಯಾಂಶಗಳು
- ಮೊದಲ ದಿನ ಎಂಟು ಫ್ರಾಂಚೈಸಿಗಳು ಒಟ್ಟು ₹16.88 ಕೋಟಿ ವಿನಿಯೋಗ
- ಭಾರತ ತಂಡದ ಆಟಗಾರರಿಗೆ ಭಾರಿ ಬೇಡಿಕೆ
- 18 ವಿದೇಶಿ ಆಟಗಾರರು ಸೇರಿ ಭಾನುವಾರ ಒಟ್ಟು 54 ಆಟಗಾರರು ಬಿಡ್

ಅಭಿಷೇಕ್


ಹಾರ್ದಿಕ್ ಸಿಂಗ್

ಮೊದಲ ದಿನ ಬಿಡ್ ಆದವರು

ಆಟಗಾರ	ತಂಡ	ಮೌಲ್ಯ (₹ ಲಕ್ಷ)
ಹರ್ಮನ್‌ಪ್ರೀತ್ ಸಿಂಗ್	ಸೂರ್ಮಾ ಹಾಕಿ ಕ್ಲಬ್	78
ಅಭಿಷೇಕ್	ಶರಾಚಿ ರಾರ್ ಬೆಂಗಾಲ್ ಟೈಗರ್ಸ್	72
ಹಾರ್ದಿಕ್ ಸಿಂಗ್	ಯುಪಿ ರುದ್ರಾಸ್	70
ಗೊಂಜಾಲೊ ಪೀಲಾಟ್ (ಜರ್ಮನಿ)	ಹೈದರಾಬಾದ್ ತೂಫಾನ್ಸ್	68
ಜಿಪ್ ಜಾನ್ಸೆನ್ (ನೆದರ್ಲೆಂಡ್ಸ್)	ತಮಿಳುನಾಡು ಡ್ರ್ಯಾಗನ್ಸ್	54
ಜುಗರಾಜ್ ಸಿಂಗ್	ಶರಾಚಿ ರಾರ್ ಬೆಂಗಾಲ್ ಟೈಗರ್ಸ್	48
ಅಮಿತ್ ರೋಹಿದಾಸ್	ತಮಿಳುನಾಡು ಡ್ರ್ಯಾಗನ್ಸ್	48
ಸುಮಿತ್	ಹೈದರಾಬಾದ್ ತೂಫಾನ್ಸ್	46
ಮನಪ್ರೀತ್ ಸಿಂಗ್	ಟೀಮ್ ಗೊನಾಶಿಕಾ	42
ಸುಖಜೀತ್ ಸಿಂಗ್	ಶರಾಚಿ ರಾರ್ ಬೆಂಗಾಲ್ ಟೈಗರ್ಸ್	42
ಶಂಶೇರ್ ಸಿಂಗ್	ಡೆಲ್ಲಿ ಎಸ್.ಜಿ ಪೈಪರ್ಸ್	42
ವಿವೇಕ್ ಸಾಗರ್ ಪ್ರಸಾದ್	ಸೂರ್ಮಾ ಹಾಕಿ ಕ್ಲಬ್	40
ಜರ್ಮನ್‌ಪ್ರೀತ್ ಸಿಂಗ್	ಡೆಲ್ಲಿ ಎಸ್‌ಜಿ ಪೈಪರ್ಸ್	40
ರಾಜಕುಮಾರ್ ಪಾಲ್	ಡೆಲ್ಲಿ ಎಸ್‌ಜಿ ಪೈಪರ್ಸ್	40
ಸಂಜಯ್	ಕಳಿಂಗ ಲ್ಯಾನ್ಸರ್ಸ್	38
ನೀಲಕಂಠ ಶರ್ಮಾ	ಹೈದರಾಬಾದ್ ತೂಫಾನ್ಸ್	34
ಕೃಷನ್ ಬಿ ಪಾಠಕ್	ಕಳಿಂಗ ಲ್ಯಾನ್ಸರ್ಸ್	32
ಡೇವಿಡ್ ಹಾರ್ಟೆ(ಐರ್ಲೆಂಡ್)	ತಮಿಳುನಾಡು ಡ್ರ್ಯಾಗನ್ಸ್	32
ಲಲಿತಕುಮಾರ್ ಉಪಾಧ್ಯಾಯ	ಯುಪಿ ರುದ್ರಾಸ್	28
ಜೀನ್ ಪಾಲ್ ಡೆನ್‌ಬರ್ಗ್ (ಜರ್ಮನಿ)	ಹೈದರಾಬಾದ್ ತೂಫಾನ್ಸ್	27
ಮನದೀಪ್ ಸಿಂಗ್	ಟೀಮ್ ಗೊನಾಶಿಕಾ	25
ಪಿರ್‌ಮಿನ್ ಬ್ಲಾಕ್(ನೆದರ್ಲೆಂಡ್ಸ್)	ಶರಾಚಿ ರಾರ್ ಬೆಂಗಾಲ್ ಟೈಗರ್ಸ್	25
ವಿನ್ಸೆಂಟ್ ವನಾಶ್ (ಬೆಲ್ಜಿಯಂ)	ಸೂರ್ಮಾ ಹಾಕಿ ಕ್ಲಬ್	23
ಸೂರಜ್ ಕರ್ಕೆರಾ	ಟೀಮ್ ಗೊನಾಶಿಕಾ	22
ಗುರ್ಜಂತ್ ಸಿಂಗ್	ಸೂರ್ಮಾ ಹಾಕಿ ಕ್ಲಬ್	19
ಒಲಿವರ್ ಪೈನ್ (ಜರ್ಮನಿ)	ಟೀಮ್ ಗೊನಾಶಿಕಾ	15
ಪವನ್	ಡೆಲ್ಲಿ ಎಸ್‌ಜಿ ಪೈಪರ್ಸ್	15
ಥಾಮಸ್ ಸ್ಯಾಂಟಿಯಾಗೊ (ಅರ್ಜೆಂಟಿನಾ)	ಡೆಲ್ಲಿ ಎಸ್‌ಜಿ ಪೈಪರ್ಸ್	10

ಭಾರತದ ಸೆಮಿ ಹಾದಿ ಕಠಿಣ

ಆಸ್ಟ್ರೇಲಿಯಾಕ್ಕೆ ಮಣಿದ ಹರ್ಮನ್‌ಪ್ರೀತ್ ಕೌರ್ ಬಳಗ

ಶಾರ್ಜಾ (ಪಿಟಿಐ): ಸೆಮಿಫೈನಲ್ ಪ್ರವೇಶಿಸಲು ಗೆಲ್ಲಲೇಬೇಕಾದ ಒತ್ತಡದಲ್ಲಿದ್ದ ಭಾರತ ತಂಡವು ಭಾನುವಾರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಗುಂಪು ಹಂತದ ಕೊನೆಯ ರೋಚಕ ಹಣಾಹಣಿಯಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ 9 ರನ್‌ಗಳಿಂದ ಸೋತಿತು.

152 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನತ್ತಿದ ಭಾರತ ತಂಡವು ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 54;47ಎ) ಅವರ ಅರ್ಧಶತಕ ಹಾಗೂ ದೀಪ್ತಿ ಶರ್ಮಾ (29) ಮತ್ತು ಶಫಾಲಿ ವರ್ಮಾ (20) ಅವರ ಬ್ಯಾಟಿಂಗ್ ನೆರವಿನಿಂದ 9 ವಿಕೆಟ್‌ಗೆ 142 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಭಾರತದ ಸೆಮಿಫೈನಲ್ ಭವಿಷ್ಯ ಈಗ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳ ಕೈಯಲ್ಲಿದೆ.

ಭಾರತ ತಂಡವು ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡನ್ನು ಗೆದ್ದು, ಮತ್ತೆರಡರಲ್ಲಿ ಸೋತು ನಾಲ್ಕು ಅಂಕದೊಂದಿಗೆ ಎ ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ನಾಲ್ಕೂ ಪಂದ್ಯಗಳನ್ನು ಗೆದ್ದಿರುವ ಆಸ್ಟ್ರೇಲಿಯಾ ಎಂಟು ಅಂಕಗಳೊಂದಿಗೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಸೋಮವಾರ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿದ್ದು, ಸೆಮಿಫೈನಲ್ ಪ್ರವೇಶಿಸುವ ಎರಡನೇ ತಂಡದ ನಿರ್ಧಾರಕ್ಕಾಗಿ ಆ ಫಲಿತಾಂಶ ನಿರ್ಣಾಯಕವಾಗಿದೆ. ಪಾಕ್ ಗೆದ್ದರೆ ಮಾತ್ರ ನೆಟ್ ರನ್‌ರೇಟ್ ಆಧಾರದಲ್ಲಿ ಭಾರತಕ್ಕೆ ಸೆಮಿಫೈನಲ್ ಅವಕಾಶ ಸಿಗಲಿದೆ. ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದು ನಾಲ್ಕು ಅಂಕ ಸಂಪಾದಿಸಿರುವ ಕಿವೀಸ್, ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಸದ್ಯ ಭಾರತದ (0.322) ನೆಟ್ ರನ್‌ರೇಟ್ ನ್ಯೂಜಿಲೆಂಡ್‌ಗಿಂತ (0.282) ಹೆಚ್ಚು ಇದೆ. ಪಾಕಿಸ್ತಾನ (-0.488) ಮೂರರಲ್ಲಿ ಒಂದು ಪಂದ್ಯ ಮಾತ್ರ ಗೆದ್ದು, ಎರಡು ಪಾಯಿಂಟ್ಸ್ ಗಳಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು ಆರಂಭಿಕ ಬ್ಯಾಟರ್ ಗ್ರೇಸ್ ಹ್ಯಾರಿಸ್ (40; 41ಎ), ತಹಲಿಯಾ ಮೆಕ್‌ಗ್ರಾ (32ರನ್) ಮತ್ತು ಎಲೀಸ್ ಪೆರಿ (32; 23ಎ) ಅವರ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 151 ರನ್ ಗಳಿಸಿತು. ಭಾರತದ ರೇಣುಕಾ ಸಿಂಗ್ ಮತ್ತು ದೀಪ್ತಿ ಶರ್ಮಾ ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 151 (ಗ್ರೇಸ್ ಹ್ಯಾರಿಸ್ 40, ತಹಲಿಯಾ ಮೆಕ್‌ಗ್ರಾ 32, ಎಲಿಸ್ ಪೆರಿ 32, ಫೊಯೆಬ್ ಲಿಚ್‌ಫೀಲ್ಡ್ 15, ರೇಣುಕಾ ಸಿಂಗ್ 24ಕ್ಕೆ2, ದೀಪ್ತಿ ಶರ್ಮಾ 28ಕ್ಕೆ2). ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 142 (ಹರ್ಮನ್‌ಪ್ರೀತ್ ಕೌರ್ ಔಟಾಗದೇ 54, ದೀಪ್ತಿ ಶರ್ಮಾ 29, ಶಫಾಲಿ ವರ್ಮಾ 20; ಅನ್ನಾಬೆಲ್ ಸದರ್ಲ್ಯಾಂಡ್ 22ಕ್ಕೆ 2, ಸೋಫಿ ಮಾಲಿನೆ 32ಕ್ಕೆ 2). **ಫಲಿತಾಂಶ:** ಆಸ್ಟ್ರೇಲಿಯಾಕ್ಕೆ 9 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಸೋಫಿ ಮಾಲಿನೆ.

ಸೋಫಿ ಮಾಲಿನೆ ಎಕ್ಸ್ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಇಂಗ್ಲೆಂಡ್ ಸೆಮಿ ಕನಸು ಜೀವಂತ

ಶಾರ್ಜಾ (ಪಿಟಿಐ): ಇಂಗ್ಲೆಂಡ್ ತಂಡವು ಇಲ್ಲಿ ನಡೆಯುತ್ತಿರುವ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಸ್ಕಾಟ್ಲೆಂಡ್ ವಿರುದ್ಧ 10 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶದ ಕನಸನ್ನು ಜೀವಂತವಾಗುಳಿಸಿಕೊಂಡಿತು.

ಟಾಸ್ ಗೆದ್ದ ಸ್ಕಾಟ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಇಂಗ್ಲೆಂಡ್ ಬೌಲರ್‌ಗಳ ಪರಿಣಾಮಕಾರಿ ದಾಳಿಯ ಎದುರು ಸ್ಕಾಟ್ಲೆಂಡ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 109 ರನ್ ಮಾತ್ರ ಗಳಿಸಿತು. ಕ್ಯಾಥರಿನ್ ಬ್ರೈಸ್ (33 ರನ್) ಅವರು ತಂಡಕ್ಕೆ ಕಾಣಿಕೆ ನೀಡಿದರು.

ಆದರೆ ಸ್ಕಾಟ್ಲೆಂಡ್ ಬೌಲರ್‌ಗಳು ಇಂಗ್ಲೆಂಡ್ ತಂಡದ ಎದುರು ದುರ್ಬಲರಾದರು. ಇಂಗ್ಲೆಂಡ್ ಆರಂಭಿಕ ಜೋಡಿ ಮಾಯಿಯಾ ಬೌಷಿಯರ್ (ಔಟಾಗದೆ 62) ಹಾಗೂ ಡ್ಯಾನಿಲ್ ವೈಟ್ ಹಾಜ್ (ಔಟಾಗದೆ 51) ಅವರಿಬ್ಬರೂ ತಂಡವನ್ನು ಕೇವಲ 10 ಓವರ್‌ಗಳಲ್ಲಿ ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 109 (ಕ್ಯಾಥರಿನ್ ಬ್ರೈಸ್ 33, ಸೋಫಿ ಎಕ್ಲೆಸ್ಟೋನ್ 13ಕ್ಕೆ2) ಇಂಗ್ಲೆಂಡ್: 10 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 113 (ಮಾಯಿಯಾ ಬೌಷಿಯರ್ ಔಟಾಗದೆ 62, ಡ್ಯಾನಿಲ್ ವೈಟ್ ಹಾಜ್ ಔಟಾಗದೆ 51) **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 10 ವಿಕೆಟ್‌ಗಳ ಜಯ.

ಇಂಗ್ಲೆಂಡ್ ತಂಡದ ಆರಂಭಿಕ ಜೋಡಿ ಡ್ಯಾನಿಲ್ ವೈಟ್ ಮತ್ತು ಮಯಿಯಾ ಬೌಷಿಯರ್ ಪರಸ್ಪರ ಅಭಿನಂದಿಸಿದರು –ಎಪಿ/ಪಿಟಿಐ ಚಿತ್ರ

ಮುಂಬೈ ಇಂಡಿಯನ್ಸ್ ಕೋಚ್: ಜಯವರ್ಧನೆ ಮರು ನೇಮಕ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ–20 ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮುಖ್ಯ ಕೋಚ್ ಆಗಿ ಶ್ರೀಲಂಕಾದ ಮಾಜಿ ಆಟಗಾರ ಮಹೇಲಾ ಜಯವರ್ಧನೆ ಅವರನ್ನು ಮರುನೇಮಕ ಮಾಡಲಾಗಿದೆ.

2017ರಿಂದ 2022ರ ಅವಧಿಯಲ್ಲಿ ಜಯವರ್ಧನೆ ಮುಂಬೈ ತಂಡಕ್ಕೆ ಕೋಚ್ ಆಗಿದ್ದರು. ಅಲ್ಲದೆ 2017, 2019 ಮತ್ತು 2020-21ನೇ ಸಾಲಿನಲ್ಲಿ ಮುಂಬೈ ಟ್ರೋಫಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಎರಡು ವರ್ಷಗಳ ಬಳಿಕ ಈಗ ಕೋಚ್ ಹುದ್ದೆಗೆ ಜಯವರ್ಧನೆ ಮರಳಿದ್ದಾರೆ. ಈ ಮೊದಲು ಮುಂಬೈ ಇಂಡಿಯನ್ಸ್ ಕ್ರಿಕೆಟ್‌ನ ಜಾಗತಿಕ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು.

ಶುಭಂ ಶತಕ; ಮಧ್ಯಪ್ರದೇಶ ದೊಡ್ಡ ಮೊತ್ತ

ಪ್ರಜಾವಾಣಿ ವಾರ್ತೆ

ಇಂದೋರ್: ಶುಭಂ ಶರ್ಮಾ ಅವರ ತಾಳ್ಮೆಯ ಶತಕದ ಬಲದಿಂದ ಮಧ್ಯಪ್ರದೇಶ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕದ ಎದುರು ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಪೇರಿಸಿದೆ.

ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ ಗುಂಪಿನ ಪಂದ್ಯದ ಮೂರನೇ ದಿನವಾದ ಭಾನುವಾರದ ಮುಕ್ತಾಯಕ್ಕೆ ಶುಭಂ (ಬ್ಯಾಟಿಂಗ್ 143; 243ಎ, 4X13, 6X2) ಅವರ ಶತಕದ ಬಲದಿಂದ 140 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 425 ರನ್ ಗಳಿಸಿತು.

ಎರಡನೇ ದಿನದಾಟದ ಬಹುತೇಕ ಅವಧಿಯು ಮಳೆಗೆ ಆಹುತಿಯಾಗಿತ್ತು. ಮೊದಲ ದಿನದಾಟದಲ್ಲಿ ಶುಭಂ ಅವರು 40 ರನ್ ಗಳಿಸಿದ್ದಾಗ ಸ್ನಾಯುಸೆಳೆತದ ಕಾರಣ ವಿಶ್ರಾಂತಿ ಪಡೆದಿದ್ದರು. ಹರಪ್ರೀತ್ ಸಿಂಗ್ ಭಾಟಿಯಾ (91; 204ಎ) ಅವರು ಶತಕದ ಸನಿಹ ಎಡವಿದರು. ಮಧ್ಯಮವೇಗಿ ವಿ. ಕೌಶಿಕ್ ಎಸೆತವನ್ನು ಅಂದಾಜಿಸುವಲ್ಲಿ ತಪ್ಪಿದ ಅವರು ಬೌಲ್ಡ್ ಆದರು. ಅವರ ನಂತರ ಸಾರಾಂಶ್ ಜೈನ್ (51; 128ಎ, 4X4) ಅವರು ತಂಡಕ್ಕೆ ಉತ್ತಮ ಕಾಣಿಕೆ ನೀಡಿದರು.

ಇನ್ನೊಂದೆಡೆ ನಾಯಕ ಶುಭಂ ಬೌಲರ್‌ಗಳ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸಿದರು. ಮೊದಲ ದಿನದಾಟದಲ್ಲಿ ನಾಲ್ಕು ವಿಕೆಟ್ ಗಳಿಸಿದ್ದ ಕರ್ನಾಟಕದ ಬೌಲರ್‌ಗಳು ಭಾನುವಾರವೂ ಅಷ್ಟೇ ವಿಕೆಟ್ ಪಡೆದರು.

ಪ್ರಸಿದ್ಧ ಕೃಷ್ಣ ಎಂಟು ಓವರ್ ಮಾತ್ರ ಬೌಲಿಂಗ್ ಮಾಡಿದರು. ಇದರಿಂದಾಗಿ ತಮ್ಮ ಮೇಲೆ ಬಿದ್ದ ಹೆಚ್ಚುವರಿ ಒತ್ತಡವನ್ನು ಕೌಶಿಕ್ ಮತ್ತು ವೈಶಾಖ (83ಕ್ಕೆ2) ಅವರು ನಿಭಾಯಿಸಿದರು. ಆದರೆ ಸ್ಪಿನ್ ವಿಭಾಗದಲ್ಲಿ ಎಡಗೈ ಬೌಲರ್ ಹಾರ್ದಿಕ್ ರಾಜ್ ಒಬ್ಬರು ಪರಿಣಾಮಕಾರಿಯಾಗಿದ್ದರು. ಆದರೆ ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ವಿಕೆಟ್ ಪಡೆಯುವಲ್ಲಿ ವಿಫಲರಾದರು. ಪಂದ್ಯದಲ್ಲಿ ಇನ್ನೊಂದು ದಿನ ಮಾತ್ರ ಬಾಕಿಯಿದೆ. ಆದ್ದರಿಂದ ಸೋಲು, ಗೆಲುವಿನ ಫಲಿತಾಂಶ ಬರುವ ಸಾಧ್ಯತೆ ತೀರಾ ಕಡಿಮೆಯಾಗಿದೆ. ಡ್ರಾ ಆಗಿ ಉಭಯ ತಂಡಗಳು ಅಂಕಗಳನ್ನು ಹಂಚಿಕೊಳ್ಳುವ ಸಾಧ್ಯತೆಯೇ ಹೆಚ್ಚು.

ಮೊದಲ ಇನಿಂಗ್ಸ್: ಮಧ್ಯಪ್ರದೇಶ: 140 ಓವರ್‌ಗಳಲ್ಲಿ 8ಕ್ಕೆ425 (ಶುಭಂ ಶರ್ಮಾ ಬ್ಯಾಟಿಂಗ್ 143, ಹರಪ್ರೀತ್ ಸಿಂಗ್ ಭಾಟಿಯಾ 91, ಸಾರಾಂಶ್ ಜೈನ್ 51, ವಾಸುಕಿ ಕೌಶಿಕ್ 78ಕ್ಕೆ2, ವೈಶಾಖ ವಿಜಯಕುಮಾರ್ 83ಕ್ಕೆ2, ಹಾರ್ದಿಕ್ ರಾಜ್ 79ಕ್ಕೆ2) ವಿರುದ್ಧ –ಕರ್ನಾಟಕ.

ಶುಭಂ ಶರ್ಮಾ

ಒಬ್ಬ ಆರೋಪಿಗೆ 21ರವರೆಗೆ ಕಸ್ಟಡಿ • ಜೀಶನ್ ಅಖ್ತರ್ ಪ್ರಮುಖ ಆರೋಪಿ: ಶಂಕೆ • ಆರೋಪಿಗಳ ಪತ್ತೆಗೆ 16 ತಂಡ ರಚನೆ

ಸಿದ್ದೀಕಿ ಹತ್ಯೆ: 'ಮಹಾ' ರಾಜಕೀಯದಲ್ಲಿ ತಲ್ಲಣ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಎನ್‌ಸಿಪಿ (ಅಜಿತ್ ಪವಾರ ಬಣ) ನಾಯಕ, ಮಾಜಿ ಸಚಿವ ಬಾಬಾ ಸಿದ್ದೀಕಿ (66) ಹತ್ಯೆ ಮಹಾರಾಷ್ಟ್ರ ರಾಜಕೀಯದಲ್ಲಿ ತಲ್ಲಣ ಸೃಷ್ಟಿಸಿದೆ. ಅದರಲ್ಲೂ, ಸಿದ್ದೀಕಿ ಅವರ ಹತ್ಯೆಯ ಹೊಣೆಯನ್ನು ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ತಂಡ ಹೊತ್ತುಕೊಂಡಿರುವುದು ಪ್ರಕರಣವನ್ನು ಮತ್ತಷ್ಟು ನಿಗೂಢಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ, ಬಾಲಕ ಸೇರಿ ಇಬ್ಬರು ಆರೋಪಿಗಳನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಮೂರನೇ ಆರೋಪಿ ಪರಾರಿಯಾಗಿದ್ದಾರೆ. ಪ್ರಕರಣದ ನಾಲ್ಕನೇ ಆರೋಪಿ ಜೀಶನ್ ಅಖ್ತರ್, ಇಡೀ ಕೃತ್ಯದ ನಿರ್ವಹಣೆ ಮಾಡಿರುವ ಕುರಿತು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದು, ಆತನ ಬಂಧನಕ್ಕೆ ಬಲೆ ಬೀಸಿದ್ದಾರೆ.

ಆರೋಪಿಗಳಾದ ಹರಿಯಾಣದ ಗುರ್ಮೈಲ್ ಬಲ್ಜಿತ್ ಸಿಂಗ್ (23) ಹಾಗೂ ಉತ್ತರ ಪ್ರದೇಶದ ಬಾಲಕನೊಬ್ಬನನ್ನು ಪೊಲೀಸರು ಭಾನುವಾರ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಗುರ್ಮೈಲ್ ಬಲ್ಜಿತ್ ಸಿಂಗ್ ಅವರನ್ನು ಇದೇ 21ರ ವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶಿಸಿದೆ.

ಆರೋಪಿಯೊಬ್ಬ ತಾನು ಅಪ್ರಾಪ್ತ ಎಂದು ಹೇಳಿಕೊಂಡಿರುವುದರಿಂದ, ವಯಸ್ಸು ಪತ್ತೆ ಹಚ್ಚುವುದಕ್ಕಾಗಿ ಆರೋಪಿಯ ಮೂಳೆ ಪರೀಕ್ಷೆಗೆ ನ್ಯಾಯಾಲಯ ಆದೇಶಿಸಿದೆ. ಮೂರನೇ ಆರೋಪಿ ಶಿವಕುಮಾರ್ ಗೌತಮ್ ಪರಾರಿಯಾಗಿದ್ದು, ಆತನ ಪತ್ತೆಗೆ ತಂಡ ರಚಿಸಲಾಗಿದೆ.

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್), ಶಸ್ತ್ರಾಸ್ತ್ರಗಳ ಕಾಯ್ದೆ ಹಾಗೂ ಮಹಾರಾಷ್ಟ್ರ ಪೊಲೀಸ್ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ. ಇದು ಪೂರ್ವಯೋಜಿತ ಕೃತ್ಯ ಎಂದು ಪೊಲೀಸರು ಶಂಕಿಸಿದ್ದಾರೆ.

ಮಗ ಜೀಶನ್ ಅವರ ಕಚೇರಿಯಿಂದ ಹೊರಗೆ ಬರುವಾಗ ರಾತ್ರಿ 9.30 ರ ಸುಮಾರು ಬೈಕ್‌ನಲ್ಲಿ ಬಂದಿದ್ದ ಮೂವರು ದುಷ್ಕರ್ಮಿಗಳು ಬಾಬಾ ಅವರ ಮೇಲೆ ಪಿಸ್ತೂಲ್‌ನಿಂದ 4–5 ಸುತ್ತು ಗುಂಡು ಹಾರಿಸಿದ್ದರು.

ಸರ್ಕಾರಿ ಗೌರವಗಳೊಂದಿಗೆ ಸಿದ್ದೀಕಿ ಅವರ ಅಂತ್ಯಕ್ರಿಯೆಯನ್ನು ಭಾನುವಾರ ರಾತ್ರಿ ನೆರವೇರಿಸಲಾಯಿತು –ಪಿಟಿಐ ಚಿತ್ರ

'ಪಟಾಕಿಗಳ ಅಬ್ಬರದ ನಡುವೆ ಹಾರಿದ ಗುಂಡುಗಳು'

'ಸಿದ್ದೀಕಿ ಅವರು ತಮ್ಮ ಪುತ್ರ ಜೀಶನ್ ಕಚೇರಿಯಿಂದ ಹೊರನಡೆದಿದ್ದರು. ಅದೇ ವೇಳೆ, ದುರ್ಗಾ ಮೂರ್ತಿ ಮೆರವಣಿಗೆಯೂ ಹೊರಟಿತ್ತು. ಈ ವೇಳೆ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಲಾಗುತ್ತಿತ್ತು. ಇದೇ ಸಮಯದಲ್ಲಿ ಹಂತಕರು, 9.9 ಎಂ.ಎಂ ಪಿಸ್ತೂಲ್‌ನಿಂದ ಸಿದ್ದೀಕಿ ಮೇಲೆ ಗುಂಡು ಹಾರಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ರಾಜಕೀಯ ಜಟಾಪಟಿ

ಬಾಬಾ ಸಿದ್ದೀಕಿ ಅವರ ಹತ್ಯೆ ಮಹಾರಾಷ್ಟ್ರದಲ್ಲಿ ರಾಜಕೀಯ ಜಟಾಪಟಿಗೆ ಕಾರಣವಾಗಿದೆ. ಕಾಂಗ್ರೆಸ್, ಎನ್‌ಸಿಪಿ(ಯುಬಿಟಿ) ಸೇರಿದಂತೆ ವಿರೋಧ ಪಕ್ಷಗಳು, 'ಮಹಾಯುತಿ' ಮೈತ್ರಿಕೂಟ ನೇತೃತ್ವದ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿವೆ.

ವರ್ಷಾಂತ್ಯಕ್ಕೆ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಕಾರಣ, ರಾಜ್ಯದಲ್ಲಿನ ಕಾನೂನು–ಸುವ್ಯವಸ್ಥೆ ವಿಚಾರವಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಈ ಘಟನೆ ವಿಪಕ್ಷಗಳ ಕೈಗೆ ಅಸ್ತ್ರದಂತಾಗಿದೆ.

'ಇಂಥ ಹೇಯ ಕೃತ್ಯ ನಡೆದಿರುವುದು ಆಘಾತಕಾರಿ ಹಾಗೂ ರಾಜ್ಯದ ಪಾಲಿಗೆ ನಾಚಿಕೆಗೇಡಿನ ಸಂಗತಿ. ರಾಜ್ಯದಲ್ಲಿ ಅರಾಜಕತೆ ಇದೆ ಎಂಬುದನ್ನು ಇದು ತೋರಿಸುತ್ತದೆ' ಎಂದು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಹರಿಹಾಯ್ದಿವೆ.

'ಆಡಳಿತ ನಡೆಸುವವರು ಈ ಘಟನೆ ಕುರಿತ ಹೊಣೆ ಹೊರಬೇಕು ಹಾಗೂ ಅಧಿಕಾರದಿಂದ ಕೆಳಗಿಳಿಯಬೇಕು' ಎಂದು ಎನ್‌ಸಿಪಿ (ಶರದ್‌ಪವಾರ್ ಬಣ) ವರಿಷ್ಠ ಶರದ್ ಪವಾರ್ ಪ್ರತಿಕ್ರಿಯಿಸಿದ್ದಾರೆ. ಪವಾರ್ ಅವರ ಈ ಹೇಳಿಕೆಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್,'ಇಂತಹ ದುರ್ಘಟನೆಗಳು ನಡೆದ ಸಂದರ್ಭದಲ್ಲಿಯೂ ಅವರಿಗೆ ಅಧಿಕಾರಕ್ಕೇರುವ ಆಸೆ ಇದೆ. ನಾನು ಮಹಾರಾಷ್ಟ್ರದ ಅಭಿವೃದ್ಧಿ ಹಾಗೂ ಸುರಕ್ಷತೆ ಬಗ್ಗೆ ಗಮನ ಹರಿಸಿದ್ದರೆ, ಅವರಿಗೆ ಮಾತ್ರ ಅಧಿಕಾರವೇ ಮುಖ್ಯ' ಎಂದು ಟೀಕಿಸಿದರು.

ಖ್ಯಾತರೊಂದಿಗೆ ಒಡನಾಟ

ವಿದ್ಯಾರ್ಥಿ ದೆಸೆಯಿಂದಲೂ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿದ್ದ ಬಾಬಾ ಸಿದ್ದೀಕಿ, ಮುಂಬೈನ ಬಾಂದ್ರಾ (ಪಶ್ಚಿಮ) ವಿಧಾನಸಭೆ ಕ್ಷೇತ್ರದಿಂದ ಮೂರು ಬಾರಿ ಗೆದ್ದಿದ್ದರು.

ಆಗಿನ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶಮುಖ್ ಅವರ ಸರ್ಕಾರದಲ್ಲಿ ಬಾಬಾ ಸಿದ್ದೀಕಿ ಅವರು 2004ರಿಂದ 2008ರವರೆಗೆ ಆಹಾರ ಪೂರೈಕೆ ಹಾಗೂ ಕಾರ್ಮಿಕ ಸಚಿವರಾಗಿದ್ದರು. ಫೆಬ್ರುವರಿಯಲ್ಲಿ ಕಾಂಗ್ರೆಸ್ ತೊರೆದಿದ್ದ ಅವರು, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಸೇರಿದ್ದರು. ಜೀವ ಬೆದರಿಕೆ ಇದ್ದ ಕಾರಣ ಅವರಿಗೆ 'ವೈ' ಕೆಟಗರಿ ಭದ್ರತೆ ಒದಗಿಸಲಾಗಿತ್ತು.

ಬಾಲಿವುಡ್‌ನೊಂದಿಗೂ ಒಡನಾಟ ಹೊಂದಿದ್ದ ಸಿದ್ದೀಕಿ, ಸಲ್ಮಾನ್ ಖಾನ್, ಶಾರುಕ್ ಖಾನ್, ಸಂಜಯ್ ದತ್ ಸೇರಿ ಅನೇಕರಿಗೆ ಆಪ್ತರಾಗಿದ್ದರು. ಕೋವಿಡ್–19 ಪಿಡುಗಿನ ವೇಳೆ ಜೀವರಕ್ಷಕ ಔಷಧಿಗಳ ಪೂರೈಕೆಗೆ ವ್ಯವಸ್ಥೆ ಮಾಡಿದ್ದರು. ವೈಭವೋಪೇತ ಇಫ್ತಾರ್ ಕೂಟಗಳ ಆಯೋಜನೆಗೂ ಅವರು ಹೆಸರುವಾಸಿಯಾಗಿದ್ದರು.

ಈ ಕೃತ್ಯ ನಡೆದಿರುವುದು ಖಂಡನೀಯ. ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಲು ಅವಕಾಶ ನೀಡದಂತೆ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ
ಅಜಿತ್ ಪವಾರ್, ಉಪಮುಖ್ಯಮಂತ್ರಿ

ಬಾಬಾ ಸಿದ್ದೀಕಿ ಹತ್ಯೆ ಆಘಾತಕಾರಿ. ಮಹಾರಾಷ್ಟ್ರ ಸರ್ಕಾರ ಈ ಕೊಲೆ ಕುರಿತು ಸಮಗ್ರ ಹಾಗೂ ಪಾರದರ್ಶಕ ತನಿಖೆಗೆ ಆದೇಶಿಸಿ ನ್ಯಾಯ ದೊರಕಿಸಿ ಕೊಡಬೇಕು
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

'ಫೇಸ್‌ಬುಕ್‌ನಲ್ಲಿ ಪೋಸ್ಟ್; ಪರಿಶೀಲನೆ'

ಲಾರೆನ್ಸ್ ಬಿಷ್ಣೋಯ್ ತಂಡದ ಸದಸ್ಯ ಎನ್ನಲಾದ ಶಿಬು ಲೋಣಕರ್, ಸಿದ್ದೀಕಿ ಹತ್ಯೆ ಹೊಣೆ ಹೊತ್ತುಕೊಂಡಿದ್ದು, ಈ ಕುರಿತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾನೆ. ಈತನ ಪತ್ತೆಗೆ ಪೊಲೀಸರು ಪುಣೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಭಾರತಕ್ಕೆ ಬೇಕಾಗಿರುವ ಉಗ್ರ ದಾವೂದ್ ಇಬ್ರಾಹಿಂ ಜತೆ ನಂಟು ಹೊಂದಿದ್ದಕ್ಕಾಗಿ ಸಿದ್ದೀಕಿಯನ್ನು ಹತ್ಯೆ ಮಾಡಲಾಗಿದೆ. ಅಲ್ಲದೇ, ಸಲ್ಮಾನ್ ಖಾನ್ ನಿವಾಸದ ಬಳಿ ಗುಂಡು ಹಾರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದ ಬಂಧಿಸಲಾಗಿದ್ದ ಶಂಕಿತರ ಪೈಕಿ, ಅನುಜ್ ಥಾಪನ್ ಎಂಬಾತ ಮೃತಪಟ್ಟಿದ್ದು, ಈ ಕಾರಣಕ್ಕಾಗಿಯೂ ಸಿದ್ದೀಕಿಯನ್ನು ಹತ್ಯೆ ಮಾಡಿದ್ದಾಗಿ' ಶಿಬು ಪೋಸ್ಟ್ ಮಾಡಿದ್ದಾನೆ. 'ನಮಗೆ ಯಾರೊಂದಿಗೂ ಶತ್ರುತ್ವ ಇಲ್ಲ. ಸಲ್ಮಾನ್ ಖಾನ್ ಮತ್ತು ದಾವೂದ್ ಇಬ್ರಾಹಿಂ ಗ್ಯಾಂಗಿಗೆ ಯಾರು ನೆರವು ನೀಡುವರೋ ಅವರ ಸರದಿ ಬರುತ್ತದೆ' ಎಂದು ಹಿಂದಿಯಲ್ಲಿ ಪೋಸ್ಟ್ ಮಾಡಿದ್ದಾರೆ.

'ಶಂಕಿತರಿಬ್ಬರು ಉತ್ತರ ಪ್ರದೇಶದ ಒಂದೇ ಗ್ರಾಮದವರು'

ಬಹರಾಯಿಚ್ (ಉತ್ತರ ಪ್ರದೇಶ) (ಪಿಟಿಐ): ಶಾಸಕ ಬಾಬಾ ಸಿದ್ದೀಕಿ ಕೊಲೆ ಆರೋಪ ಎದುರಿಸುತ್ತಿರುವ ಇಬ್ಬರು ಶಂಕಿತರು ಉತ್ತರ ಪ್ರದೇಶದ ಬಹರಾಯಿಚ್ ಜಿಲ್ಲೆಯ ಗಂದಾರ ಗ್ರಾಮದವರು ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಶಿವಕುಮಾರ್ ಅಲಿಯಾಸ್ ಶಿವ ಗೌತಮ್ ಹಾಗೂ ಮತ್ತೊಬ್ಬ ಬಾಲಕ ಕೊಲೆ ಆರೋಪ ಎದುರಿಸುತ್ತಿದ್ದಾರೆ.

'ಈ ಇಬ್ಬರು ಆರೋಪಿಗಳು ಪುಣೆಯ ಗುಜರಿ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರಿಗೂ ಅಪರಾಧಿಕ ಹಿನ್ನೆಲೆ ಇಲ್ಲ. ಆದರೂ, ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೃಂದಾ ಶುಕ್ಲಾ ಹೇಳಿದ್ದಾರೆ.

ಶಿವಕುಮಾರ್ ತಾಯಿ ಸುಮನ್ ಮಾತನಾಡಿ, 'ನನ್ನ ಮಗ ಪರಿಶ್ರಮಿ ಹಾಗೂ ಶಾಂತ ಸ್ವಭಾವದವನು' ಎಂದಿದ್ದಾರೆ.

ಮತ್ತೊಬ್ಬ ಆರೋಪಿ ತಾಯಿ ಕುಸುಮ, 'ಮಾಹಿತಿ ಪಡೆಯುವುದಕ್ಕಾಗಿ ಪೊಲೀಸರು ಮನೆಗೆ ಬಂದಾಗಲೇ, ಈ ಪ್ರಕರಣದಲ್ಲಿ ನನ್ನ ಮಗನ ಪಾತ್ರವಿರುವ ಬಗ್ಗೆ ತಿಳಿಯಿತು' ಎಂದಿದ್ದಾರೆ.

ವಿಧ್ವಂಸಕ ಕೃತ್ಯಕ್ಕೆ ಸಂಚು: ರೈಲ್ವೆ ಪರಿಶೀಲನಾ ತಂಡ ಶಂಕೆ

ನವದೆಹಲಿ (ಪಿಟಿಐ): ತಮಿಳುನಾಡಿನ ಕವರೈಪೆಟ್ಟೈ ಸಮೀಪ ಸಂಭವಿಸಿದ ರೈಲು ಅವಘಡಕ್ಕೆ ಸಂಬಂಧಿಸಿದಂತೆ ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಿದ ರೈಲ್ವೆಯ ಹಿರಿಯ ಅಧಿಕಾರಿಗಳ ತಂಡವು 'ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಲಾಗಿತ್ತು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಪರಿಶೀಲನಾ ತಂಡದಲ್ಲಿ ಸಿಗ್ನಲ್ ಮತ್ತು ಟೆಲಿಕಾಂ, ಎಂಜಿನಿಯರಿಂಗ್ ಮತ್ತು ಆಪರೇಷನ್ ಇಲಾಖೆಯ ಮೂವರು ಹಿರಿಯ ಅಧಿಕಾರಿಗಳು ಇದ್ದರು.

'ಇಂಟರ್‌ಲಾಕ್ ವ್ಯವಸ್ಥೆಯ ಮೆಕಾನಿಕಲ್ ಭಾಗಗಳನ್ನು ತೆಗೆದಿರುವುದನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಈ ಬಗ್ಗೆ ತರಬೇತಿ ಇರುವ ವ್ಯಕ್ತಿಗಳಿಂದ ಮಾಹಿತಿ ಪಡೆದು ಈ ಕೃತ್ಯ ನಡೆಸಿದಂತೆ ಕಾಣುತ್ತಿದೆ. ಈ ಹಿಂದೆಯೂ ಇದೇ ರೀತಿ ಮಾಡಲು ಯತ್ನಿಸಿರುವಂತಿದೆ ಎಂದು ತಿಳಿಸಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಕವರೈಪೆಟ್ಟೈ ರೈಲು ನಿಲ್ದಾಣದ ಸಮೀಪ ಇಂಟರ್‌ಲಾಕಿಂಗ್ ಸುರಕ್ಷತಾ ವ್ಯವಸ್ಥೆಯನ್ನು ಹಾಳು ಮಾಡಲು ಈ ಹಿಂದೆ ಯತ್ನಿಸಿರುವ ಬಗ್ಗೆ ವರದಿಯಾಗಿತ್ತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಶೀಲನೆ ನಡೆಸಿದ ನಂತರ ಸಿಗ್ನಲ್ ದೋಷ ಅಥವಾ ಬೇರಾವುದೇ ದೋಷ ಆಗಿರಲಿಲ್ಲ ಎಂದು ತಿಳಿದುಬಂದಿದೆ ಎಂದು ಹೇಳಿದ್ದಾರೆ.

ವಾಂಗ್ಚುಕ್ ಮತ್ತೊಮ್ಮೆ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಇಲ್ಲಿನ ಲಡಾಖ್ ಭವನದಲ್ಲಿ ಎಂಟು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಹಾಗೂ ಇತರ 20 ಮಂದಿಯನ್ನು ದೆಹಲಿ ಪೊಲೀಸರು ಭಾನುವಾರ ವಶಕ್ಕೆ ಪಡೆದ್ದಾರೆ.

'ವಾಂಗ್ಚುಕ್ ಅವರೊಂದಿಗೆ ಪ್ರತಿಭಟನೆ ನಡೆಸುತ್ತಿದ್ದ 20ರಿಂದ 25 ಮಂದಿಯನ್ನು ಮಂದಿರ್ ಮಾರ್ಗ್ ಠಾಣೆಗೆ ಕರೆದೊಯ್ಯಲಾಗಿದೆ' ಎಂದು ಪೊಲೀಸರು ತಿಳಿಸಿದರು. 'ನಾವು ಯಾರೂ ಪ್ರತಿಭಟನೆ ನಡೆಸುತ್ತಿರಲಿಲ್ಲ. ಬದಲಿಗೆ ಶಾಂತಿಯುತವಾಗಿ ಕುಳಿತಿದ್ದೆವು' ಎಂದು ಕೆಲವು ಪ್ರತಿಭಟನಕಾರರು ಹೇಳಿದ್ದಾರೆ.

'ಲಡಾಖ್ ಭವನದ ಮುಂದೆ ಪ್ರತಿಭಟನೆ ನಡೆಸಲು ಇವರಿಗೆ ಅನುಮತಿ ನೀಡಿರಲಿಲ್ಲ. ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಅನುಮತಿ ಕೋರಿದ್ದರು. ಅನುಮತಿ ನೀಡುವುದರ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಆದ್ದರಿಂದ ಅವರು ಬೇರೆಲ್ಲೂ ಪ್ರತಿಭಟನೆ ನಡೆಸಲು ಸಾಧ್ಯವಿಲ್ಲ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಲಡಾಖ್ ಭವನದ ಸುತ್ತಮುತ್ತ ಭಾರಿ ಬಂದೋಬಸ್ತ್ ಮಾಡಲಾಗಿದೆ.

ಲಡಾಖ್ ಅನ್ನು ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸಿ ಎಂದು ಆಗ್ರಹಿಸಿ ಲೇಹ್‌ನಿಂದ ದೆಹಲಿಗೆ ಪಾದಯಾತ್ರೆ ಮೂಲಕ ಬರುತ್ತಿದ್ದ ವಾಂಗ್ಚುಕ್ ಸೇರಿ ಸುಮಾರು 120 ಮಂದಿಯನ್ನು ಸೆ. 30ರ ರಾತ್ರಿ ಸಿಂಘು ಗಡಿಯಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದರು. ನಂತರ ಅ.2ರಂದು ಬಿಡುಗಡೆ ಮಾಡಲಾಗಿತ್ತು. ಪ್ರಧಾನಿ ಮೋದಿ ಸೇರಿ ಇತರ ನಾಯಕರ ಭೇಟಿಗೆ ವಾಂಗ್ಚುಕ್ ಅವಕಾಶ ಕೋರಿದ್ದರು. ತಮ್ಮ ಯಾವ ಆಗ್ರಹವೂ ಈಡೇರದ ಕಾರಣ ದೆಹಲಿಯಲ್ಲಿ ಪ್ರತಿಭಟಿಸಲು ಪೊಲೀಸರಲ್ಲಿ ಅನುಮತಿ ಕೋರಿದ್ದರು. ಪ್ರತಿಭಟನೆಗೆ ಯಾವ ಸ್ಥಳವೂ ದೊರಕದ ಕಾರಣ, ಪ್ರತಿಭಟನಕಾರರು ಲಡಾಖ್ ಭವನದ ಮುಂದೆ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು.

ವಾಂಗ್ಚುಕ್ ಅವರೊಂದಿಗೆ ದೆಹಲಿ ಪೊಲೀಸರು ಭಾನುವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಪ್ರಜಾಪ್ರಭುತ್ವದ ತಾಯಿ ಎನಿಸಿಕೊಂಡ ದೇಶದಲ್ಲಿ ಶಾಂತಿಯುತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದವರನ್ನು ಒತ್ತಾಯ ಪೂರ್ವಕವಾಗಿ ವಶಕ್ಕೆ ಪಡೆಯಲಾಗಿದೆ
ಸೋನಮ್ ವಾಂಗ್ಚುಕ್, ಪರಿಸರ ಹೋರಾಟಗಾರ

ರಾಜ್ಯಕ್ಕೆ ದ್ರೋಹ ಎಸಗಿದ ಸರ್ಕಾರ: ಎಂವಿಎ

ಮುಂಬೈ (ಪಿಟಿಐ): ವಿರೋಧ ಪಕ್ಷಗಳ ಮೈತ್ರಿಕೂಟ ಮಹಾವಿಕಾಸ ಆಘಾಡಿ (ಎಂವಿಎ) ಭಾನುವಾರ 'ಗದ್ದರಂಚ ಪಂಚ್‌ನಾಮ' (ದೇಶದ್ರೋಹದ ಪುರಾವೆಗಳು) ಎಂಬ ಹೆಸರಿನಲ್ಲಿ ಸರ್ಕಾರದ ವಿರುದ್ಧ ಆರೋಪ ಪಟ್ಟಿಯನ್ನು ಬಿಡುಗಡೆ ಮಾಡಿದೆ.

'ಏಕನಾಥ ಶಿಂದೆ ನೇತೃತ್ವದ ಸರ್ಕಾರವು ನೆರೆಯ ಗುಜರಾತ್‌ಗೆ ಸಹಾಯ ಮಾಡುವ ಸಲುವಾಗಿ ರಾಜ್ಯಕ್ಕೆ ದ್ರೋಹ ಮಾಡಿದೆ' ಎಂದು ಶಿವಸೇನಾ (ಉದ್ಧವ್ ಬಣ) ಮತ್ತು ಎನ್‌ಸಿಪಿ (ಶರದ್ ಬಣ) ಒಳಗೊಂಡ ಎಂವಿಎ ಮೈತ್ರಿಕೂಟವು ಆರೋಪಿಸಿದೆ.

'ನಾನು ಮತ್ತು ಶರದ್ ಪವಾರ್ ಅಷ್ಟೇ ಅಲ್ಲದೆ ಇಡೀ ರಾಜ್ಯವೇ ವಂಚನೆಗೊಳಗಾಗಿದೆ. ಆಡಳಿತಾರೂಢ 'ಮಹಾಯುತಿ'ಯು ಪಾಪ ಎಸಗಿದೆ' ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಸುದ್ದಿಗೋಷ್ಠಿಯಲ್ಲಿ ಟೀಕಿಸಿದ್ದಾರೆ.

'ಗದ್ದರಂಚ ಪಂಚ್‌ನಾಮ'ವು ಶಾಸಕರು ಮತ್ತು ಕಾರ್ಪೋರೇಟರ್‌ಗಳ ಖರೀದಿಗೆ, ಅಧಿಕಾರಿಗಳ ವರ್ಗಾವಣೆಗೆ ಮತ್ತು ಸರ್ಕಾರಿ ಉದ್ಯೋಗಗಳ ನೇಮಕಾತಿಗೆ ಸರ್ಕಾರ ನಿಗದಿಪಡಿಸಿರುವ ದರ ಮತ್ತು ಧಾರಾವಿ ಅಭಿವೃದ್ಧಿ ಯೋಜನೆ, ರಸ್ತೆ ಡಾಂಬರೀಕರಣ ಮತ್ತು ಗುತ್ತಿಗೆಗಳಲ್ಲಿ ನಡೆಸಿರುವ ಹಗರಣಗಳ ಪಟ್ಟಿಯಾಗಿದೆ' ಎಂದು ಎಂವಿಎ ತಿಳಿಸಿದೆ.

'ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ನಿರ್ಮಾಣ ಕಾರ್ಯದಲ್ಲಿಯೂ ಶಿಂದೆ ಸರ್ಕಾರ ಭ್ರಷ್ಟಾಚಾರ ಎಸಗಿದೆ. ಮಹಿಳೆಯರ ವಿರುದ್ಧದ ಅಪರಾಧಗಳು ಹೆಚ್ಚಾಗುತ್ತಿದೆ' ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ಟೀಕಿಸಿದ್ದಾರೆ.

'ಭ್ರಷ್ಟಯುತಿ'ಯು (ಭ್ರಷ್ಟರ ಮೈತ್ರಿಕೂಟ) ಕೈಗಾರಿಕೆಗಳನ್ನು ಮಹಾರಾಷ್ಟ್ರದಿಂದ ಗುಜರಾತ್‌ಗೆ ಕಳುಹಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ನೇಮಕಾತಿಯಲ್ಲಿನ ಹಗರಣಗಳು ರಾಜ್ಯ ಯುವಕರ ಜೀವನವನ್ನು ಹಾಳು ಮಾಡಿವೆ' ಎಂದು ಆರೋಪಿಸಿದ್ದಾರೆ.

'ಬದಲಾವಣೆಗೆ ಜನ ಸಜ್ಜು': ರಾಜಕೀಯ ಬದಲಾವಣೆಗೆ ಮಹಾರಾಷ್ಟ್ರದ ಜನರು ಸಜ್ಜಾಗಿದ್ದಾರೆ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಇದರ ಫಲಿತಾಂಶ ತಿಳಿಯಲಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ದೇಶದ ಉತ್ತಮ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದ ಮಹಾರಾಷ್ಟ್ರದಲ್ಲಿ ಪ್ರಸ್ತುತ ಮಹಾಯುತಿ ಮೈತ್ರಿಕೂಟವು ಕೆಟ್ಟ ಆಡಳಿತ ನಡೆಸುತ್ತಿದೆ ಎಂದು ಟೀಕಿಸಿದ್ದಾರೆ.

ಎಂಎನ್‌ಎಸ್ ಏಕಾಂಗಿ ಸ್ಪರ್ಧೆ

ರಾಜ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಲು ಸಜ್ಜಾಗಿದೆ. ಆಡಳಿತಾರೂಢ 'ಮಹಾಯುತಿ' ಮತ್ತು ವಿರೋಧ ಪಕ್ಷಗಳ 'ಮಹಾ ವಿಕಾಸ ಆಘಾಡಿ'ಯಿಂದ ಅಂತರಕಾಯ್ದುಕೊಳ್ಳುವುದಾಗಿ ಎಂಎನ್‌ಎಸ್ ಭಾನುವಾರ ಘೋಷಿಸಿದೆ.

'ರಾಜ್ಯವನ್ನು ನಮ್ಮ ಕೈಗೆ ಕೊಡಿ. ಹೇಗೆ ಬದಲಾಯಿಸುತ್ತೇವೆ ನೋಡಿ' ಎಂದು ಪಕ್ಷದ ಮುಖ್ಯಸ್ಥ ರಾಜ್ ಠಾಕ್ರೆ ಅವರು ಮುಂಬೈನಲ್ಲಿ ನಡೆದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಹೇಳಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಎಂಎನ್‌ಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ನೀಡಿತ್ತು.

ರನ್ನರ್ ಅಪ್ ಬಿ.ಆರ್. ಶ್ರೀವಲ್ಲಿ (ಎಡ) ಹಾಗೂ ಚಾಂಪಿಯನ್ ಜೆಸ್ಸಿ ಆ್ಯನಿ ಟ್ರೋಫಿಯೊಂದಿಗೆ —ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಟೆನಿಸ್: ಜೆಸ್ಸಿ ಚಾಂಪಿಯನ್

• ಆರ್. ಜಿತೇಂದ್ರ

ಮೈಸೂರು: ಅಮೆರಿಕದ ಜೆಸ್ಸಿ ಆ್ಯನಿ ಭಾನುವಾರ ಇಲ್ಲಿ ಮುಕ್ತಾಯಗೊಂಡ ಮೈಸೂರು ಓಪನ್ ಮಹಿಳೆಯರ ಐಟಿಎಫ್ ಟೆನಿಸ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಇಲ್ಲಿನ ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ) ಅಂಗಳದಲ್ಲಿ ಬರೋಬ್ಬರಿ ಎರಡೂವರೆ ಗಂಟೆ ಕಾಲ ನಡೆದ ಫೈನಲ್ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ ಜೆಸ್ಸಿ 3–6, 6–3, 7–6 (8–6)ರಿಂದ ಅಗ್ರ ಶ್ರೇಯಾಂಕದವರಾದ, ಭಾರತದ ಬಿ.ಆರ್. ಶ್ರೀವಲ್ಲಿ ವಿರುದ್ಧ ಜಯಿಸಿದರು. ಜೆಸ್ಸಿ ಶನಿವಾರ ಟೂರ್ನಿಯ ಡಬಲ್ಸ್ ವಿಭಾಗದಲ್ಲೂ ರಿಯಾ ಭಾಟಿಯಾ ಜೊತೆಗೂಡಿ ಪ್ರಶಸ್ತಿ ಗೆದ್ದಿದ್ದರು. ಶ್ರೀವಲ್ಲಿ ಮೊದಲ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದ್ದ ವೇಳೆ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಮತ್ತೆ ಪಂದ್ಯ ಆರಂಭದೊಂದಿಗೆ ಜೆಸ್ಸಿ ತಮ್ಮ ಆಟದ ವೈಖರಿಯನ್ನು ಬದಲಿಸಿಕೊಂಡರು. ಮೊದಲ ಸೆಟ್ ಸೋತರೂ ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದರು. ಎದುರಾಳಿಯ ಬಲವಾದ ಹೊಡೆತಗಳಿಗೆ ತಾಳ್ಮೆಯಿಂದ ಉತ್ತರ ನೀಡಿದ ಜೆಸ್ಸಿ, ಆಕೆಯೇ ತಪ್ಪೆಸಗುವವರೆಗೂ ಕಾದರು.

ಮೂರನೇ ಸೆಟ್‌ನ ಆರಂಭದಿಂದಲೂ ಇಬ್ಬರೂ ಆಟಗಾರ್ತಿಯರು ಸಮಬಲ ಸಾಧಿಸಿದ್ದು, 6–6ರಲ್ಲಿ ಸ್ಕೋರ್ ಸಮನಾಯಿತು. ಅಂತಿಮವಾಗಿ ಜೆಸ್ಸಿ ಟೈಬ್ರೇಕರ್‌ನಲ್ಲಿ ಮುನ್ನಡೆ ಸಾಧಿಸಿ ಪಂದ್ಯ ಗೆದ್ದರು. ಜೆಸ್ಸಿ ಟ್ರೋಫಿಯೊಂದಿಗೆ 2352 ಅಮೆರಿಕನ್ ಡಾಲರ್ (₹1.97 ಲಕ್ಷ) ನಗದು ಹಾಗೂ 15 ಪಾಯಿಂಟ್ಸ್ ತಮ್ಮದಾಗಿಸಿಕೊಂಡರು. ಶ್ರೀವಲ್ಲಿ ರನ್ನರ್ ಅಪ್ ಟ್ರೋಫಿಯೊಂದಿಗೆ 1470 ಅಮೆರಿಕನ್ ಡಾಲರ್ (₹1.23 ಲಕ್ಷ) ನಗದು ಹಾಗೂ 10 ಪಾಯಿಂಟ್ಸ್ ಪಡೆದರು.

ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್

ಐಹಿಕಾ–ಸುತೀರ್ಥಗೆ ಚಾರಿತ್ರಿಕ ಕಂಚು

ಅಸ್ತಾನಾ (ಪಿಟಿಐ): ಭಾರತದ ಐಹಿಕಾ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ ಅವರು ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಡಬಲ್ಸ್‌ನಲ್ಲಿ ಚಾರಿತ್ರಿಕ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಈ ಮೂಲಕ ಮೂರು ಕಂಚಿನೊಂದಿಗೆ ಭಾರತದ ಅಭಿಯಾನ ಮುಕ್ತಾಯವಾಯಿತು.

ಶನಿವಾರ ಸೆಮಿಫೈನಲ್ ತಲುಪುವ ಮೂಲಕ ಭಾರತದ ಆಟಗಾರ್ತಿಯರು ಮೈಲಿಗಲ್ಲು ನಿರ್ಮಿಸಿದ್ದರು. ವಿಶ್ವದ 15ನೇ ಕ್ರಮಾಂಕದ ಭಾರತದ ಜೋಡಿ ನಾಲ್ಕರ ಘಟ್ಟದ ಪಂದ್ಯದಲ್ಲಿ 4-11, 9-11, 8-11ರಿಂದ ಜಪಾನ್‌ನ ಮಿವಾ ಹರಿಮೊಟೊ– ಮಿಯು ಕಿಶಾರಾ ಅವರಿಗೆ ಶರಣಾಗಿ ಕಂಚು ತನ್ನದಾಗಿಸಿಕೊಂಡಿತು.

ಕಳೆದ ವರ್ಷ ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಮೊದಲ ಬಾರಿ ಕಂಚಿನ ಪದಕ ಗೆಲ್ಲುವ ಹಾದಿಯಲ್ಲಿ ಚೀನಾದ ವಿಶ್ವ ಚಾಂಪಿಯನ್‌ಷಿಪ್ ಆಟಗಾರ್ತಿಯರಿಗೆ ಆಘಾತ ನೀಡಿದ್ದ ಮುಖರ್ಜಿ ದ್ವಯರು ಇಲ್ಲೂ ಗಮನಾರ್ಹ ಪ್ರದರ್ಶನ ನೀಡಿದರು. ಕ್ವಾರ್ಟರ್ ಫೈನಲ್‌ನಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು 10–12, 11–7, 11–9, 11–8 ರಿಂದ ದಕ್ಷಿಣ ಕೊರಿಯಾದ ಕಿಮ್ ನೆಯಿ ಯಾಂಗ್– ಲೀ ಯುನ್‌ಹ್ಯೇ ಅವರನ್ನು ಸೋಲಿಸಿ, ಏಷ್ಯನ್ ಕೂಟದಲ್ಲಿ ಭಾರತಕ್ಕೆ ಮೊದಲ ಮಹಿಳಾ ಡಬಲ್ಸ್ ಪದಕವನ್ನು ಖಾತ್ರಿ ಪಡಿಸಿದ್ದರು.

ಇದಕ್ಕೂ ಮೊದಲು ಭಾರತದ ಮಹಿಳಾ ತಂಡ ಟೂರ್ನಿಯಲ್ಲಿ ಐತಿಹಾಸಿಕ ಕಂಚಿನ ಸಾಧನೆ ಮಾಡಿದರೆ, ಪುರುಷರ ತಂಡ ಸತತ ಮೂರನೇ ಬಾರಿ ಕಂಚಿನ ಪದಕ ಜಯಿಸಿದೆ.

ಭಾರತದ ಐಹಿಕಾ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ—ಎಎಫ್‌ಪಿ ಫೈಲ್ ಚಿತ್ರ

ಪುರುಷರ ಸಿಂಗಲ್ಸ್‌ನಲ್ಲಿ ನಿರಾಸೆ

ಪುರುಷರ ಸಿಂಗಲ್ಸ್‌ನಲ್ಲಿ ಮಾನವ್ ಠಕ್ಕರ್ ಮತ್ತು ಮಾನುಷ್ ಶಾ ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆ ಮೂಡಿಸಿದರು.

ವಿಶ್ವದ 14ನೇ ಕ್ರಮಾಂಕದ ದಕ್ಷಿಣ ಕೊರಿಯಾದ ಜಾಂಗ್ ವೂಜಿನ್‌ಗೆ ಆಘಾತ ನೀಡಿದ್ದ 60ನೇ ರ್‍ಯಾಂಕ್‌ನ ಮಾನವ್, ಎಂಟರ ಘಟ್ಟದ ಪಂದ್ಯದಲ್ಲಿ 4-11, 4-11, 8-11ರಿಂದ ಹಾಂಗ್‌ಕಾಂಗ್‌ನ ಬಾಲ್ಡ್‌ವಿನ್ ಚಾನ್ ಅವರಿಗೆ ಮಣಿದರು. ವಿಶ್ವ ಕ್ರಮಾಂಕದಲ್ಲಿ 115ನೇ ಸ್ಥಾನದಲ್ಲಿರುವ ಮಾನುಷ್ ಅವರು 8-11, 5-11, 11-7, 11-6, 12-14ರಿಂದ ಚೀನಾ ತೈಪೆಯ ಲಿನ್ ಯುನ್-ಜು ಅವರಿಗೆ ಶರಣಾದರು. ಇದಕ್ಕೆ ಮೊದಲು ಅವರು 23ನೇ ಕ್ರಮಾಂಕದ ಆನ್ ಜೇಹ್ಯುನ್ (ದಕ್ಷಿಣ ಕೊರಿಯಾ) ವಿರುದ್ಧ ಜಯ ಗಳಿಸಿದ್ದರು.

ಮಣಿಕಾ ಬಾತ್ರಾ, ಐಹಿಕಾ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ ಅವರನ್ನು ಒಳಗೊಂಡ ತಂಡವು ಸೆಮಿಫೈನಲ್‌ವರೆಗೆ ತಲುಪಿ, ಅಲ್ಲಿ 1–3ರಿಂದ ಜಪಾನ್ ವಿರುದ್ಧ ಸೋತು ಮಹಿಳಾ ತಂಡ ವಿಭಾಗದಲ್ಲಿ ಮೊದಲ ಪದಕ ಗಳಿಸಿದೆ.

ಅಚಂತ ಶರತ್ ಕಮಲ್, ಮಾನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ಅವರನ್ನು ಒಳಗೊಂಡ ಪುರುಷರ ತಂಡವು ಸೆಮಿಫೈನಲ್‌ನಲ್ಲಿ 0–3ರಿಂದ ಚೀನಾ ತೈಪೆ ವಿರುದ್ಧ ಸೋತು, ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದೆ.

ಕ್ರಿಕೆಟ್: ಪಂದ್ಯಕ್ಕೆ ಮಳೆ ಅಡ್ಡಿ

ಹುಬ್ಬಳ್ಳಿ: ಮಳೆ ಕಾರಣ ಮೈದಾನದ ಹೊರಾಂಗಣ ತೇವಗೊಂಡಿದ್ದರಿಂದ ಭಾನುವಾರ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಕರ್ನಾಟಕ ಮತ್ತು ತಮಿಳುನಾಡು ನಡುವಣ ಪಂದ್ಯದ ಮೊದಲ ದಿನದಾಟ ನಡೆಯಲಿಲ್ಲ. ಟಾಸ್ ಕೂಡ ಹಾಕಲಿಲ್ಲ.

ಹೀಗಾಗಿ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣ ದಲ್ಲಿ ಕ್ರಿಕೆಟ್ ಪಂದ್ಯವನ್ನು ಕಣ್ತುಂಬಿಕೊಳ್ಳಲು ಬಂದಿದ್ದ ಅಭಿಮಾನಿಗಳು ನಿರಾಶೆಯಿಂದ ಹಿಂದಿರುಗಬೇಕಾಯಿತು.

ಅಂಪೈರ್‌ಗಳಾದ ಸಂಜಯ್‌ಕುಮಾರ್ ಸಿಂಗ್, ಸೌರಭ್ ಧೋತೆ ಮತ್ತು ರೆಫರಿ ಸಂಜತ್ ರಾವುಲ್ ಅವರು ಬೆಳಿಗ್ಗೆ 10.30, ಮಧ್ಯಾಹ್ನ 12.40, 2 ಮತ್ತು 3.30ಕ್ಕೆ ಮೈದಾನವನ್ನು ಪರಿಶೀಲಿಸಿದರು. ಕ್ರೀಡಾಂಗಣದ ಸಿಬ್ಬಂದಿ ಸಹ ತೇವವನ್ನು ಒಣಗಿಸಲು ಶ್ರಮಿಸಿದರು. ಆದರೂ ತೇವ ಕಡಿಮೆಯಾಗದ ಕಾರಣ ದಿನದಾಟವನ್ನು ರದ್ದುಗೊಳಿಸಿದರು.

ಭಾನುವಾರ ರಾತ್ರಿಯೂ ಮಳೆ ಸುರಿದರೆ ಎರಡನೇ ದಿನದಾಟಕ್ಕೂ ಅಡ್ಡಿಯಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಯೂತ್ ಈಕ್ವೆಸ್ಟ್ರಿಯನ್: ಭಾರತಕ್ಕೆ ಡಬಲ್ ಪದಕ

ಬೆಂಗಳೂರು: ಭಾರತದ ಅಶ್ವರೋಹಿ ಪಟುಗಳಾದ ಸೂರ್ಯ ಆದಿತ್ಯ ಮತ್ತು ಅವಿಕ್ ಭಾಟಿಯಾ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ಏಷ್ಯನ್ ಯೂತ್ ಈಕ್ವೆಸ್ಟ್ರಿಯನ್ ಫೆಡರೇಷನ್ ಕಪ್ ಟೂರ್ನಿಯ ಸಮಗ್ರ ಸ್ಪರ್ಧೆಯಲ್ಲಿ ಬೆಳ್ಳಿ ಮತ್ತು ಕಂಚಿನ ಪದಕ ಸಾಧನೆ ಮೆರೆದರು.

ಬೆಂಗಳೂರಿನ ಸರ್ಜ್ ಸ್ಟೇಬಲ್‌ನಲ್ಲಿ ನಡೆದ ಟೂರ್ನಿಯಲ್ಲಿ ಇರಾನ್‌ನ ಯಜ್ದಾನ್ ಮೊಲ್ಲಾಫ್ಜಲ್ ಚಿನ್ನ ಗೆದ್ದರು.

ಬೆಂಗಳೂರು ಯುನೈಟೆಡ್‌ನ ರಿಷಭ್ ಡೊಬ್ರಿಯಾಲ್ (ಎಡ) ಮತ್ತು ಕಿಕ್‌ಸ್ಟಾರ್ಟ್‌ನ ಹೆಬಿ ಸಿ. (ಬಲ) ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು —ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಫುಟ್‌ಬಾಲ್: ಅಗ್ನಿಪುತ್ರಕ್ಕೆ ಜಯ

ಬೆಂಗಳೂರು: ಸೂರ್ಯ ಯು.ಕೆ. ಗಳಿಸಿದ ಏಕೈಕ ಗೋಲಿನ ನೆರವಿನಿಂದ ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1–0ಯಿಂದ ಕೊಡಗು ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ದಿನದ ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಗೋಲುರಹಿತವಾಗಿ ಕಿಕ್ ಸ್ಟಾರ್ಟ್ ಎಫ್‌ಸಿ ಜೊತೆ ಡ್ರಾ ಸಾಧಿಸಿತು.

100ನೇ ಪ್ರಶಸ್ತಿಯ ಹೊಸ್ತಿಲಲ್ಲಿ ಮುಗ್ಗರಿಸಿದ ಜೊಕೊವಿಚ್

ಸಿನ್ನರ್ ಮುಡಿಗೆ ಶಾಂಘೈ ಕಿರೀಟ

ಶಾಂಘೈ (ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಇಲ್ಲಿ ನಡೆದ ಶಾಂಘೈ ಮಾಸ್ಟರ್ಸ್ ಸೂಪರ್ 1000 ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ 24 ಬಾರಿಯ ಗ್ರ್ಯಾನ್ ಸ್ಲಾಮ್ ಚಾಂಪಿಯನ್ ನೊವಾಕ್ ಜೊಕೊವಿಕ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿ ಕಿರೀಟವನ್ನು ಮುಡಿಗೇರಿಸಿಕೊಂಡರು.

ಭಾನುವಾರ ನಡೆದ ಹಣಾಹಣಿಯಲ್ಲಿ 23 ವರ್ಷ ವಯಸ್ಸಿನ ಸಿನ್ನರ್ 7-6 (7/4), 6-3ರಿಂದ ನಾಲ್ಕನೇ ಶ್ರೇಯಾಂಕದ ಸರ್ಬಿಯಾದ ಆಟಗಾರನನ್ನು ಹಿಮ್ಮೆಟ್ಟಿಸಿದರು. ಈ ಹೋರಾಟ ಕೇವಲ 1 ಗಂಟೆ 37 ನಿಮಿಷದಲ್ಲಿ ಮುಕ್ತಾಯವಾಯಿತು.

ಇಟಲಿಯ ಆಟಗಾರ ಸಿನ್ನರ್‌ಗೆ ಇದು ಋತುವಿನ ಏಳನೇ ಪ್ರಮುಖ ಪ್ರಶಸ್ತಿಯಾಗಿದೆ. ಆಸ್ಟ್ರೇಲಿಯಾ ಓಪನ್, ಅಮೆರಿಕಾ ಓಪನ್ ಚಾಂಪಿಯನ್ ಆಗಿರುವ ಅವರು, ಎರಡು ವಾರದ ಹಿಂದೆ ಚೀನಾ ಓಪನ್ ಚಾಂಪಿಯನ್ ಆಗಿದ್ದರು.

ಪ್ರಶಸ್ತಿಯೊಂದಿಗೆ ಇಟಲಿಯ ಯಾನಿಕ್ ಸಿನ್ನರ್ —ಎಎಫ್‌ಪಿ ಚಿತ್ರ

2016ರಲ್ಲಿ ಇಂಗ್ಲೆಂಡ್‌ನ ಆ್ಯಂಡಿ ಮರ್ರೆ ಒಂಬತ್ತು ಪ್ರಶಸ್ತಿ ಗೆದ್ದ ನಂತರ ಒಂದು ಋತುವಿನಲ್ಲಿ ಆರಕ್ಕೂ ಹೆಚ್ಚು ಕಿರೀಟ ಮುಡಿಗೇರಿಸಿಕೊಂಡ ಮೊದಲ ಆಟಗಾರ ಎಂಬ ಹಿರಿಮೆಗೆ ಸಿನ್ನರ್ ಪಾತ್ರವಾದರು. ಅಲ್ಲದೆ, ಜೊಕೊವಿಚ್ ವಿರುದ್ಧ ಗೆಲುವಿನ ದಾಖಲೆಯನ್ನು 4–4ಕ್ಕೆ ಸಮಗೊಳಿಸಿದರು.

ವೃತ್ತಿಜೀವನದ 100ನೇ ಸಿಂಗಲ್ಸ್ ಪ್ರಶಸ್ತಿ ಮತ್ತು ಶಾಂಘೈನಲ್ಲಿ ಐದನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದ 37 ವರ್ಷ ವಯಸ್ಸಿನ ಜೊಕೊವಿಚ್ ಅವರಿಗೆ ನಿರಾಸೆಯಾಯಿತು. ಅಮೆರಿಕದ ಜಿಮ್ಮಿ ಕಾನರ್ಸ್ (109) ಮತ್ತು ಸ್ವಿಟ್ಜರ್ಲೆಂಡ್ ರೋಜರ್ ಫೆಡರರ್ (103) ಮಾತ್ರ ಶತಕ ಪ್ರಶಸ್ತಿಗಳ ಗಡಿ ದಾಟಿದ್ದಾರೆ.

ಸಬಲೆಂಕಾಗೆ ಪ್ರಶಸ್ತಿ: ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರು ವುಹಾನ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಚೀನಾದ ಝೆಂಗ್ ಕ್ವಿನ್ವೆನ್ ಅವರನ್ನು ಮಣಿಸಿ ಸತತ ಮೂರನೇ ಬಾರಿ ಇಲ್ಲಿ ಪ್ರಶಸ್ತಿ ಗೆದ್ದರು. ಬೆಲಾರಸ್‌ನ 26 ವರ್ಷ ವಯಸ್ಸಿನ ಸಬಲೆಂಕಾ 6-3, 7-5, 6-3 ಸೆಟ್‌ಗಳಿಂದ ಐದನೇ ಶ್ರೇಯಾಂಕದ ಝೆಂಗ್ ಅವರನ್ನು ಸೋಲಿಸಿದರು.